

ಅನುರೂಪ

ಡಾ॥ ಆರ್. ಲಕ್ಷ್ಮೀನಾರಾಯಣ

ಅನುರೂಪ

(ಒರಿಯಾ, ಪಂಜಾಬಿ, ಹಿಂದಿ, ಉರ್ದು ಹಾಗೂ ಇಂಗ್ಲಿಷ್
ಭಾಷೆಗಳ ಪ್ರಸಿದ್ಧ ಕವಿಗಳ ಕವನಗಳ ಕನ್ನಡ ರೂಪಗಳು)

ಡಾ|| ಆರ್. ಲಕ್ಷ್ಮೀನಾರಾಯಣ

ಪ್ರಕಾಶಕರು
ಭಾವಯತ್ರೀ ಪ್ರಕಾಶನ
ವಿಜಯನಗರ, ಬೆಂಗಳೂರು - ೫೬೦೦೪೦

ANUROOPA - Kannada rendering of the poems of famous poets of Oriya, Punjabi, Hindi, Urdu and English by Dr. R. Lakshminarayana; *Published by Bhavayathri Prakashana, Vijayanagar, Bengalore-560 040.*

Pages : xii+120

ಪ್ರಥಮ ಆವೃತ್ತಿ : ೨೦೦೬

Price : Rs. 75/-

ಬೆಲೆ : ಎಪ್ಪತ್ತೈದು ರೂಪಾಯಿ

ಮುಖಪುಟ ವಿನ್ಯಾಸ : ಶ್ರೀ ಎಸ್.ಎಲ್. ರವಿಶಂಕರ್

ಮುದ್ರಕರು :
ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್
೧೨/೧, ಈವನಿಂಗ್ ಬಜಾರ್ ಹಿಂಭಾಗ
ಶಿವರಾಂಪೇಟೆ, ಮೈಸೂರು - ೫೭೦ ೦೦೧
ದೂರವಾಣಿ : ೨೪೭೬೦೧೯

ಅರ್ಪಣೆ

ಒಲವಿನ ಸಹಧರ್ಮಿಣಿ ನಾಗಮಣಿಗೆ

ಓದುವ ಮುನ್ನ

ನಾನು ಬೆರಳೆಣಿಕೆಯ ಸ್ವತಂತ್ರ ಕವನಗಳ್ನು ಬರೆದಿರುವೆನಾದರೂ ಆ ಕ್ಷೇತ್ರದಲ್ಲಿ ನನ್ನ ಕೃಷಿ ನಗಣ್ಯ. ಆದರೆ ಕಾವ್ಯ ಯಾವತ್ತೂ ನನ್ನ ಆಸಕ್ತಿಯ ಹಾಗೂ ಆಕರ್ಷಣೆಯ ಸಾಹಿತ್ಯ ಪ್ರಕಾರವಾಗಿದೆ. ರಸವತ್ಕಾವ್ಯದ ಮೋಡಿ ಯಾರನ್ನು ತಾನೆ ಸೆಳೆಯದು? ಈಗ್ಗೆ ಹಲವಾರು ವರ್ಷಗಳಿಂದ ನಾನು ಕವನಗಳನ್ನು ಓದುತ್ತಾ ಬಂದ ಸಂದರ್ಭದಲ್ಲಿ ಸ್ವಾರಸ್ಯಕರವೆಂದು ಕಂಡುಬಂದ ಕೆಲವು ಅನ್ಯ ಭಾಷಾ ಸಾಹಿತಿಗಳ ಕವನಗಳನ್ನು ಅನುವಾದಿಸುತ್ತ ಬಂದಿದ್ದೇನೆ. ಈ ರೀತಿಯ ಅನುವಾದಗಳಲ್ಲಿ ಇಂಗ್ಲಿಷ್, ಹಿಂದಿ, ಪಂಜಾಬಿ, ಹಾಗೂ ಒರಿಯಾ ಭಾಷೆಯ ಕೆಲವು ಪ್ರಸಿದ್ಧ ರಚನೆಗಳು ಸೇರುತ್ತವೆ. ಒರಿಯಾ ಭಾಷೆಯನ್ನು ನಾನು ಬಲ್ಲವನಲ್ಲ. ಆದರೆ ಮೂಲ ಕವಿಯೇ (ಡಾ. ಸೀತಾಕಾಂತ ಮಹಾಪಾತ್ರ) ಒರಿಯಾದಿಂದ ಇಂಗ್ಲಿಷ್‌ಗೆ ಅನುವಾದಿಸಿರುವ ಕವನಗಳು ನನ್ನ ಅನುವಾದಗಳಿಗೆ ಆಧಾರ. ಅದೇ ರೀತಿ ಪಂಜಾಬಿ ಭಾಷೆಯ ಪ್ರಸಿದ್ಧ ಕವಯಿತ್ರಿ ಅಮೃತಾ ಪ್ರೀತಂ ಅವರ ಕವಿತೆಗಳನ್ನು ಹಿಂದೀ ಭಾಷೆ ಮತ್ತು ದೇವನಾಗರಿ ಲಿಪಿಯಲ್ಲಿರುವ ಪಂಜಾಬಿ ರೂಪಗಳನ್ನು ಆಧರಿಸಿ ಅನುವಾದಿಸಿದ್ದೇನೆ. ಹೀಗೆ ಅನುವಾದಿಸಿರುವ ಬಹುತೇಕ ಕವನಗಳನ್ನು ನಮ್ಮ ನಾಡಿನ ಹೆಸರಾಂತ ಪತ್ರಿಕೆಗಳಾದ ಪ್ರಜಾವಾಣಿ, ಅನಿಕೇತನ, ಶೂದ್ರ, ಹೊಸತು ಹಾಗೂ 'ಲಹರಿ' (ಚೆನ್ನೈನಿಂದ ಪ್ರಕಟಿತ) ಇವುಗಳು ಪ್ರಕಟಿಸಿ ಉಪಕರಿಸಿವೆ. ಹೀಗೆ ಇವುಗಳನ್ನು ಮೊದಲು ಪ್ರಕಟಿಸಿದ ಈ ಪತ್ರಿಕೆಗಳ ಸಂಪಾದಕರಿಗೆ ನಾನು ಅತ್ಯಂತ ಋಣಿಯಾಗಿದ್ದೇನೆ. ಈ ಅನುವಾದಗಳನ್ನು ಓದಿದ ನನ್ನ ಕೆಲವು ಮಿತ್ರರಾದ ಪ್ರೊ. ಶಿವರಾಮಯ್ಯ, ಡಾ. ಕೆ. ವೈ. ನಾರಾಯಣಸ್ವಾಮಿ. ಹಾಗೂ ಡಾ. ಜಿ. ಆರ್. ತಿಪ್ಪೇಸ್ವಾಮಿಯವರು ಅನುವಾದಿತ ಕವನಗಳ ಒಂದು ಸಂಕಲನವನ್ನು ತರಬಾರದೇಕೆ ಎಂದು ಒತ್ತಾಯಿಸುತ್ತಿದ್ದರು. ಅವರ ಒತ್ತಾಸೆಗೆ ಒಂದು ಆಕಾರ ಕೊಡುವ ರೀತಿಯಲ್ಲಿ ಈ ಸಂಕಲನ ಹೀಗೆ ರೂಪುಗೊಂಡಿದೆ. ಇದರಲ್ಲಿ ಈಗಾಗಲೇ ಪ್ರಕಟವಾದವುಗಳ ಜೊತೆಗೆ ಅನುವಾದ ಪೂರ್ಣಗೊಂಡು ಎಲ್ಲೂ ಪ್ರಕಟವಾಗದ ಹೊಸ ಕವನಗಳನ್ನೂ ಸೇರಿಸಿ ಒಟ್ಟಾರೆ ಐವತ್ಮೂರು ಕವಿತೆಗಳ ಈ ಸಂಕಲನ ಇದೀಗ ಬೆಳಕು ಕಾಣುತ್ತಿದೆ. ಇದರಲ್ಲಿ ನಮ್ಮ ದೇಶದ ಪ್ರಖ್ಯಾತ ಕವಿಗಳೂ

ಜ್ಞಾನಪೀಠ ಪುರಸ್ಕೃತರೂ ಆದ ಡಾ. ಸೀತಾಕಾಂತ ಮಹಾಪಾತ್ರ, ಅಮೃತಾ ಪ್ರೀತಂ ಅವರ ಕವನಗಳಲ್ಲದೆ, ಶಿವ್ ಕೆ. ಕುಮಾರ್, ಗೋಪಾಲ್ ಹೊನ್ನಲಗೆರೆ, ಸರೋಜಿನೀ ನಾಯ್ಡು, ಕಮಲಾದಾಸ್, ನರ್ಮದಾ ಪ್ರಸಾದ್ ತ್ರಿಪಾಠಿ, ಬಾಬಾ ಆಮ್ಟೆ ಹಾಗೂ ಮಿಯಟ್ನಾಮಿನ ಹೋಚಿಮಿನ್, ಇಂಗ್ಲಿಷಿನಲ್ಲಿ ಬರೆಯುತ್ತಿರುವ ಆಫ್ರಿಕನ್ ಕವಿಗಳ ರಚನೆಗಳು, ಪಾಕಿಸ್ತಾನದ ಕಿಷ್ವಾರ್ ನಾಹೀದ್, ಫೈಜ್ ಅಹಮದ್ ಫೈಜ್ ಮತ್ತು ಕಾರ್ಲ್ ಮಾರ್ಕ್ಸ್ ಇವರುಗಳ ರಚನೆಗಳೂ ಸೇರಿವೆ.

ನನಗೆ ಸ್ವಾರಸ್ಯವೆಂದು ಕಂಡುಬಂದ ಈ ಕವಿತೆಗಳು ಕನ್ನಡ ಕಾವ್ಯ ಪ್ರೇಮಿಗಳಿಗೂ ಹಿಡಿಸಬಹುದೆಂದು ಭಾವಿಸಿ. ಈ ಸಂಕಲನವನ್ನು ಹೊರ ತರುತ್ತಿದ್ದೇನೆ.

ಅನುವಾದಿತ ಕವನಗಳೇ ಸೇರಿರುವ ಈ ಸಂಕಲನಕ್ಕೆ 'ಅನುರೂಪ' ಎಂದು ಹೆಸರಿಟ್ಟಿದ್ದೇನೆ. ಅನುವಾದಿತ ರೂಪ, ಮೂಲವನ್ನು ಅನುಸರಿಸಿದ ರೂಪ ಹಾಗೂ ಮೂಲಕ್ಕೆ ಸಮ ಜೋಡಿಯಾದ್ದು ಎಂಬ ಅರ್ಥಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಶೀರ್ಷಿಕೆ ನೀಡಲಾಗಿದೆ. ಭಾವಯತ್ರೀ ಪ್ರಕಾಶನದ ಮೊದಲ ಪ್ರಕಟಣೆಯಾಗಿ ಈ ಕೃತಿ ಹೊರಹೊಮ್ಮುತ್ತಿದೆ. ಇವುಗಳನ್ನು ಅನುವಾದಿಸಲು ಅನುಮತಿ ಇತ್ತ ಮೂಲ ಲೇಖಕ / ಪ್ರಕಾಶಕರಿಗೆ ನಾನು ಕೃತಜ್ಞ.

ಇದಕ್ಕೊಂದು ಸಾರ್ಥಕ 'ಬೆನ್ನುಡಿ'ಯನ್ನು ಪ್ರೀತಿಯಿಂದ ಬರೆದು ಕೊಟ್ಟಿರುವ ಆತ್ಮೀಯರಾದ ಡಾ. ಜಿ. ಆರ್. ತಿಪ್ಪೇಸ್ವಾಮಿ ಯವರಿಗೆ ನಾನು ಅತ್ಯಂತ ಆಭಾರಿ. ಇದಕ್ಕೊಂದು ಅರ್ಥಪೂರ್ಣವಾದ ಅಂದದ ಮುಖಪುಟವನ್ನು ವಿನ್ಯಾಸಗೊಳಿಸಿದ ಶ್ರೀ ಎಸ್. ಎಲ್. ರವಿಶಂಕರ್ ಅವರಿಗೆ ಹಾಗೂ ಇದನ್ನು ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್‌ನ ಮಾಲೀಕರಾದ ಶ್ರೀ ಡಿ.ಎನ್. ಲೋಕಪ್ಪನವರಿಗೂ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನನ್ನ ಧನ್ಯವಾದಗಳು.

ಎಲ್ಲಕ್ಕಿಂತ ಮುಖ್ಯವಾಗಿ ಮೊದಲಿಗೆ ನನಗೆ ತಮ್ಮ ಬಳಿ ಇದ್ದ ಅಮೃತಾಪ್ರೀತಂ ಹಾಗೂ ಹೋಚಿಮಿನ್ ಅವರ ಕವನ ಸಂಕಲನಗಳ್ನು ನೀಡಿ ನಾನು ಇವುಗಳನ್ನು ಕನ್ನಡಕ್ಕೆ ತರಲು ಕಾರಣರಾದ ಕೋಲಾರದ ಶ್ರೀ ವಿ.ಎಸ್.ಎಸ್‌ಹೆಚ್ ಶಾಸ್ತ್ರಿ ಅವರಿಗೆ ನಾನು ತುಂಬ ಋಣಿಯಾಗಿದ್ದೇನೆ.

ಜಂಟಿ ನಿರ್ದೇಶಕರ ಕಛೇರಿ **ಆರ್. ಲಕ್ಷ್ಮೀನಾರಾಯಣ**
ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ.

ಪರಿವಿಡಿ

ಅನುರೂಪ

ಅಮೃತಾ ಪ್ರೀತಂ ಅವರ ಕವಿತೆಗಳು

ಒಂದು ನೋವಿತ್ತು
ಸದ್ದಿಲ್ಲದೆ ನಾನದನು ಸಿಗರೇಟಿನ ಹಾಗೆ
ಸೇದಿಬಿಟ್ಟೆ
ಒಂದಿಷ್ಟು ಕವಿತೆಗಳು ಮಾತ್ರ ಉಳಿದಿದೆ
ಸಿಗರೇಟಿನಿಂದ ಹೊಮ್ಮಿದ ಬೂದಿಯನು
ಕೂಡಿಸಿಡುವಂತಿವನು ಕೂಡಿಸಿಟ್ಟಿಹೆನು ನಾನು.

ಡಾ|| ಅಮೃತಾ ಪ್ರೀತಂ (1919-2005)

ಅವಿಭಜಿತ ಭಾರತದ ಪಂಜಾಬ್‌ನ ಗುಜರನ್‌ವಾಲಾ (ಈಗ ಪಾಕಿಸ್ತಾನಕ್ಕೆ ಸೇರಿದೆ) ದಲ್ಲಿ ಹುಟ್ಟಿದವರು. ಚಿಕ್ಕವಯಸ್ಸಿನಲ್ಲೇ ಬರವಣಿಗೆ ಪ್ರಾರಂಭಿಸಿ 11ನೇ ವಯಸ್ಸಿನಲ್ಲಿ ಮೊದಲ ಕಾವ್ಯ ಸಂಕಲನ ಪ್ರಕಟಿಸಿದರು. 1947ರಲ್ಲಿನವ ದೆಹಲಿಗೆ ಬಂದು ನೆಲೆಸಿದರು. ಈ ಖ್ಯಾತ ಪಂಜಾಬಿ ಲೇಖಕಿ ಮುಂದೆ ಹಿಂದಿಯಲ್ಲೂ ಬರೆಯಲು ಪ್ರಾರಂಭಿಸಿದರು. ಗದ್ಯ ಪದ್ಯಗಳೆರಡರಲ್ಲೂ ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ಬದುಕಿನಲ್ಲಿ ಅಪರೂಪದ ಪಾರದರ್ಶಕತೆ ಮೆರೆದವರು. ಅವರ ಕೃತಿಗಳು ವಿಪುಲವಷ್ಟೇ ಅಲ್ಲ. ವೈವಿಧ್ಯಪೂರ್ಣವೂ ಆಗಿವೆ. ಕಾವ್ಯ, ಕಥೆ, ಕಾದಂಬರಿ, ಪ್ರಬಂಧ, ಆತ್ಮಕಥೆ, ಹೀಗೆ ಸಾಹಿತ್ಯದ ಎಲ್ಲ ಪ್ರಕಾರ ಗಳಲ್ಲಿ ಕೃತಿ ರಚಿಸಿದ್ದಾರೆ. ಅವು 150ಕ್ಕಿಂತ ಹೆಚ್ಚಿವೆ. 1957ರಲ್ಲಿ ಸುನೇಹುರೇ' ಎಂಬ ಕಾವ್ಯ ಸಂಕಲನಕ್ಕೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿತು.

1982ರಲ್ಲಿ ಕಾಗಜ್ ಕೆ. ಕ್ಯಾನ್ ವಾಸ್' ಕೃತಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ ಬಂದಿದೆ.

1963ರಲ್ಲಿ ಅವರಿಗೆ 'ಪದ್ಮಶ್ರೀ ' ಪ್ರಶಸ್ತಿ ನೀಡಲಾಗಿದೆ. 1977ರಲ್ಲಿ ದೆಹಲಿ ವಿಶ್ವವಿದ್ಯಾಲಯ ಡಿ.ಲಿಟ್ ಪದವಿ ನೀಡಿದೆ. ಅಶೋಕ ಚೇಟಿ (1957), ಕಸ್ತೂರಿ (1989) ನಾಗಮಣಿ (1964) ಕಾಗಜ್ ಕೆಕ್ಯಾನ್‌ವಾಸ್(1973) ಅವರ ಪ್ರಮುಖ ಕೃತಿಗಳು. ಒಟ್ಟಾರೆ 18 ಕವಿತಾ ಸಂಗ್ರಹಾ 24 ಕಾದಂಬರಿಗಳು, 15 ಸಣ್ಣಕಥಾ ಸಂಕಲನಗಳು, 23 ಗದ್ಯ ಕೃತಿಗಳನ್ನು ರಚಿಸಿದ್ದಾರೆ. ಪಂಜಾಬಿ ಇತಿಹಾಸದಲ್ಲಿ ಇಷ್ಟೊಂದು ಸಮೃದ್ಧವಾಗಿ ಸಾಹಿತ್ಯ ರಚನೆ ಮಾಡಿದವರೇ ಇಲ್ಲ. ಅವರ ಆತ್ಮಕಥೆ 'ರಸೀದಿ ಟಿಕಟ್ (1967) ಬಹಳ ಬೇಗ ಪ್ರಸಿದ್ಧವಾಯಿತು.

ನಾನು

ಅನೇಕರು ಸಮಕಾಲೀನ
ಆದರೆ ನನ್ನ 'ನಾನು' ಮಾತ್ರ ಸಮಕಾಲೀನವಲ್ಲ
'ನಾನು' ಇಲ್ಲದ ನನ್ನ ಹುಟ್ಟು
ಪುಣ್ಯದ ತಟ್ಟೆಯಲ್ಲಿ ಬಿದ್ದಿರುವ
ಅಪರಾಧದ ಒಂದು ಶಕುನ
ಮಾಂಸದಲ್ಲಿ ಸೆರೆಯಾದ ಮಾಂಸದ ಒಂದು ಕ್ಷಣ
ಅಲ್ಲದೆ ಮಾಂಸದ ಪ್ರತಿಯೊಂದು
ನಾಲಗೆಯ ಮೇಲೆ ಶಬ್ದವೊಂದುಮೂಡಿದಾಗ
ಆತ್ಮಹತ್ಯೆ ಮಾಡಿಕೊಳ್ಳುತ್ತದೆ
ಆ ಆತ್ಮಹನನದಲ್ಲಿ ಸಾಯದೆ ಉಳಿದದ್ದು
ಕಾಗದ ಮೇಲೆ ಅವತರಿಸಿತೋ
ಅದರ ಕೊಲೆಯಾಗುತ್ತದೆ
ಒಂದು ಬಾರಿ ನನಗೆ ಹನೋಯಿಯಲ್ಲಿ
ಬಂದೂಕಿನ ಗುಂಡು ತಾಕಿದರೆ
ಇನ್ನೊಮ್ಮೆ ಪ್ರಾಗ್‌ನಲ್ಲಿ ತಾಗುತ್ತದೆ
ಮತ್ತು ಗಾಳಿಯಲ್ಲಿ ಹೊಗೆಯೊಂದು ಏಳುತ್ತದೆ
ಹಾಗೂ ನನ್ನ 'ನಾನು' ಎಂಟು ತಿಂಗಳ
ಕೂಸಿನ ಹಾಗೆ ಸಾಯುತ್ತದೆ
ಈ ನನ್ನ 'ನಾನು' ಎಂದಾದರೊಂದು ದಿನ
ನನ್ನ ಸಮಕಾಲೀನವಾದೀತೆ

ಹೊಸ ವರ್ಷವು ಶುಭವಾಗಲಿ

ಆಲೋಚನೆಯ ಹಣೆಗೆಯಲ್ಲೊಂದು
ಹಲ್ಲು ಮುರಿದಂತೆ
ವಿವೇಕದ ಅಂಗಿಯಿಂದ ತುಣುಕೊಂದು
ಹರಿದು ಹಾರಿದಂತೆ
ಆಸೆಯ ಕಣ್ಣುಗಳಲ್ಲಿ ಕಡ್ಡಿಯೊಂದು
ಚುಚ್ಚಿದಂತೆ
ನಿದ್ರೆಯು ತನ್ನ ಕೈಗಳಲ್ಲಿ ಕನಸಿನ
ನಿಗಿನಿಗಿ ಕೆಂಡವ ಹಿಡಿದಂತೆ
ಹೊಸ ವರ್ಷ ಬಂದಿತು !
ಹೃದಯದ ನುಡಿಸರಣಿಯಿಂದ
ಅಕ್ಷರವೊಂದು ಅಳಿಸಿ ಹೋದಂತೆ
ವಿಶ್ವಾಸದ ಹಾಳೆಯ ಮೇಲೆ
ಮಸಿ ಚೆಲ್ಲಿದಂತೆ
ಕಾಲದ ತುಟಿಗಳಿಂದ ಗಾಢ ನಿಟ್ಟುಸಿರೊಂದು
ಹೊರಹೊಮ್ಮಿದಂತೆ
ಮಾನವತೆಯ ಕಣ್ಣಿಂದ ಹನಿಯೊಂದು
ತೊಟ್ಟಿಕ್ಕಿದಂತೆ
ಹೊಸವರ್ಷ ಬಂದಿತು!
ಪ್ರೇಮದ ನಾಲಗೆಯ ಮೇಲೆ
ಬೊಬ್ಬೆಯೊಂದು ಮೂಡಿದಂತೆ
ಸಭ್ಯತೆಯ ಕೈಯ ಬಳೆಯೊಂದು
ಒಡೆದು ಹೋದಂತೆ
ಇತಿಹಾಸದ ಉಂಗುರದಿಂದ ಹರಳೊಂದು
ಕಳಚಿ ಬಿದ್ದಂತೆ
ಆಕಾಶದಿಂದ ಬಂದ ವಿಷಾದ ಪೂರ್ಣ
ಪತ್ರವೊಂದನ್ನು ಭೂಮಿ ಓದಿದಂತೆ
ಹೊಸ ವರ್ಷ ಬಂದಿತು !

* * *

ಅಶ್ವಮೇಧದ ಕುದುರೆ

ಒಂದು ಚೈತ್ರದ ಹುಣ್ಣಿಮೆಯಲ್ಲಿ
ಹಾಲು ಬಿಳುಪಿನ ನನ್ನ ಪ್ರೇಮದ ಕುದುರೆ,
ದೇಶ ವಿದೇಶಗಳಲ್ಲಿ ಸಂಚಾರ ಹೊರಟಿತು
ಮೈಯೆಲ್ಲವು ಸತ್ಯದ ಹಾಗೆ
ಅಚ್ಚಬಿಳುಪು
ಕಿವಿಮಾತ್ರ ವಿರಹಿಯ ಹಾಗೆ
ಶ್ಯಾಮಲ ವರ್ಣ
ಹಣೆಯ ಮೇಲೊಂದು ಬಂಗಾರದ ತಗಡು
ಅದರಲ್ಲಿ ಕೆತ್ತಿತ್ತು ಹೀಗೆ: "ಇದು
ಅಶ್ವಮೇಧದ ಕುದುರೆ
ಸಮರ್ಥರಾದವರು ಇದ ಕಟ್ಟಿ
ಜಯಿಸಬಹುದು"
ಈ ಯಜ್ಞದ ನಿಯಮದಂತೆ
ಅದು ನಿಂತ ಕಡೆಯೆಲ್ಲ ನಾನೊಂದು
ಹಾಡಹಾಡಿದೆ.
ಹಲವೆಡೆ ಹವನ ಮಾಡಿದೆ
ಗೆಲ್ಲ ಬಂದವರೆಲ್ಲ ಸೋತುಹೋದರು
ಇಂದು ವಯೋಮಾನ ಮೀರಿದೆ
ಅದು ಸ್ವಸ್ಥವಾಗಿ ನನ್ನೆಡೆಗೆ ಮರಳಿದೆ
ಆದರೆ ನಂಬಲಾಗದ ಮಾತು!
ಪುಣ್ಯದ ಬಯಕೆ ಇಲ್ಲ;

ಫಲದ ಲಾಲಸೆಯೂ ಇಲ್ಲ
ಹಾಲುಬಿಳುಪಿನ ಈ ನನ್ನ ಪ್ರೇಮದ
ಶ್ವೇತಾಶ್ವವನ್ನು ಕೊಲ್ಲಲಾಗುವುದಿಲ್ಲ
ಕೊಲ್ಲಲಾಗುವುದಿಲ್ಲ
ಇರಲಿ ಇಲ್ಲೇ ಇದು ಸ್ವಸ್ಥವಾಗಿ ಸುರಕ್ಷಿತವಾಗಿ!

* * *

ಬರಲಿಲ್ಲ ನೀನು

ಚೈತ್ರ ಮಗ್ಗುಲು ಬದಲಾಯಿಸಿತು
ಕುಸುಮಗಳು ವರ್ಣಗಳ ಮೇಳಕಾಗಿ
ರೇಷ್ಮೆಯನು ರಾಶಿ ಮಾಡಿದವು
ಬರಲಿಲ್ಲ ನೀನು.

ಹಗಲುಗಳು ದೀರ್ಘವಾದುವು
ದ್ರಾಕ್ಷಿಗಳು ಕೆಂಪಾದುವು
ಕುಡುಗೋಲುಗಳು ಗೋಧಿತೆನೆಗಳನು ಮುದ್ದಿಸಿದುವು
ಬರಲಿಲ್ಲ ನೀನು.

ಮುಗಿಲುಗಳ ಸಾಮ್ರಾಜ್ಯ ಬೀಡುಬಿಟ್ಟಿತು
ಭೂಮಿ ತನ್ನ ಎರಡೂ ಕೈ ಚಾಚಿ
ಆಗಸದ ಕರುಣ ವರುಷವನು ಕುಡಿಯಿತು
ಬರಲಿಲ್ಲ ನೀನು.

ಮರಗಳು ಮಾಟ ಮಾಡಿದುವು
ಕಾಡಕಡೆಯಿಂದ ಬೀಸಿ ಬಂದ
ಎಲರ ತುಟಿಗಳಲಿ
ಜೇನ ಹನಿಗಳನು ತುಂಬಿದುವು
ಬರಲಿಲ್ಲ ನೀನು

ಋತು ಒಂದು ಜಾದೂ ಮಾಡಿತು
ತಿಂಗಳುದಯಿಸಿ ರಜನಿಯ ಹಣೆಯಲಿ
ಮಸ್ತಕಾಭರಣವನು ತೊಡಿಸಿಬಿಟ್ಟನು
ಬರಲಿಲ್ಲ ನೀನು.

ತಾರೆಗಳು ಇಂದು ಮತ್ತೆ ಹೇಳಿದುವು
ವಯಸ್ಸಿನ ಅಂಗಳದಲ್ಲಿ
ಈಗಲೂ ದೈವದ ದೀಪಗಳು
ಉರಿಯುತ್ತಿವೆ ಎಂದು.
ಬರಲಿಲ್ಲ ನೀನು.

ರಾತ್ರಿಗಳ ಗಾಢ ನಿದ್ರೆಯ ತಳದಿಂದ
ಈಗಲೂ ಬೆಳಕು ಹೊರಹೊಮ್ಮುತ್ತಿದೆ ಎಂದು
ಕಿರಣಗುಚ್ಛವದು ಸಾರುತ್ತಿದೆ
ಬರಲಿಲ್ಲ ನೀನು.

* * *

ಬೆಂಕಿಯ ಮಾತು

ಇದು ಬೆಂಕಿಯ ಮಾತು
ನೀನು ಇದನ್ನು ನನಗೆ ಹೇಳಿದ್ದೆ
ಇದು ನೀನು ಎಂದೋ ಹೊತ್ತಿಸಿದ್ದ
ಬದುಕಿನ ಅದೇ ಸಿಗರೇಟು
ಕೆಂಡವನು ನೀ ಕೊಟ್ಟಿದ್ದೆ.
ಈ ಹೃದಯ ಸದಾ ಉರಿಯುತ್ತಿತ್ತು
ಕಾಲ ಲೇಖಣಿ ಹಿಡಿದು ಏನೋ
ಲೆಕ್ಕ ಬರೆಯುತ್ತಿತ್ತು.
ಈ ಲೆಕ್ಕದ ಪುಸ್ತಕ ನೋಡು:
ಹದಿನಾಲ್ಕು ನಿಮಿಷಗಳಾಯಿತೆಂದು ಬರೆದಿದೆ
ಆದರೆ ಈ ಲೇಖಣಿಯನ್ನು ಕೇಳು
ಹದಿನಾಲ್ಕು ವರ್ಷಗಳಾಯಿತೆನುತ್ತದೆ!
ನನ್ನ ಈ ದೇಹದಲಿ ನಿನ್ನ ಉಸಿರಾಡುತಿತ್ತು.
ಈ ಭೂಮಿ ಅದಕೆ ಸಾಕ್ಷಿ.
ಹೊಗೆ ಹೊಮ್ಮುತಿತ್ತು.

ವಯಸ್ಸಿನ ಸಿಗರೇಟು ಉರಿದಾಯಿತು.
ನನ್ನ ಒಲವಿನ ಸುಂಗಧ
ನಿನ್ನ ಉಸಿರಲ್ಲಿ ಸ್ವಲ್ಪ ಬೆರೆತಾಯಿತು
ಗಾಳಿಯಲಿ ಸ್ವಲ್ಪ ಸೇರಿಕೊಂಡಿತು
ನೋಡಿದು ಕೊನೆಯ ತುಣುಕು
ಬೆರಳುಗಳಿಂದ ಹಿಡಿಯದಿರು ಅದನು.
ನನ್ನ ಒಲವಿನ ತುದಿ ಎಲ್ಲಾದರೂ
ನಿನ್ನ ಬೆರಳ ಸೋಕೀತು
ಬದುಕಿನ ಬಗ್ಗೆ ಈಗ ದುಃಖವಿಲ್ಲ.
ಈ ಬೆಂಕಿಯನ್ನು ಸಂಭಾಳಿಸು
ನಿನ್ನ ಕೈಗಳು ಕ್ಷೇಮವಾಗಿರಲೆಂದು ಬೇಡುತ್ತೇನೆ.
ಈಗ ಉಳಿದಿರುವ ಸೀಗರೇಟನ್ನು ಉರಿಸಿಬಿಡು.

* * *

ಕುಮಾರಿ

ನಿನ್ನ ಸೆಜ್ಜೆಯ ಮೇಲೆ ಕಾಲಿಟ್ಟಂದು
ನಾನು ಒಬ್ಬಳಾಗಿರಲಿಲ್ಲ
ಇಬ್ಬರಾಗಿದ್ದೆ
ಒಂದು ಕಡೆ ವಿವಾಹಿತೆ
ಇನ್ನೊಂದು ಕಡೆ ಕನ್ಯೆ
ನಿನ್ನ ಸುಖದ ಸಲುವಾಗಿ
ಆ ಕನ್ನೆತನವನು ನಾನು ಕೊಲೆಗೈಯಬೇಕಿತ್ತು
ಕೊಲೆಗಳೋ ಕಾನೂನು ಬದ್ಧ
ಅವುಗಳ ಅಪಮಾನ ಕಾನೂನು ಬದ್ಧವಲ್ಲ.
ನಾನು ಆ ಅಪಮಾನದ ವಿಷವ ನುಂಗಿದ್ದೆ .
ಮತ್ತೆ ಬೆಳಗಾಗ ಎದ್ದಾಗ
ರಕ್ತದಲ್ಲಿ ನಾಂದ ನನ್ನ ಕೈಗಳ ಕಂಡಿದ್ದೆ
ಕೈಗಳನು ತೊಳೆದಿದ್ದೆ
ಮಲಿನ ಮೈಯನು ತೊಳೆದುಕೊಳ್ಳುವ ಹಾಗೆಯೆ
ತೊಳೆದಿದ್ದೆ
ಆದರೆ ನಾನು ಕನ್ನಡಿಯ ಎದುರು
ನಿಂತ ಕೂಡಲೆ ಅವಳು ನನ್ನೆದುರು ನಿಂತಳು
ಅವಳೇ
ರಾತ್ರಿ ನಾನು ಕೊಂದವಳು !
ಓ ದೇವರೆ
ಹಾಸಿಗೆಯ ತುಂಬ ಕತ್ತಲು ಗಾಢವಾಗಿತ್ತೆ
ನಾನು ಯಾರನ್ನು ಕೊಲೆಗೈಯ ಬೇಕಿತ್ತು ?
ಯಾರನ್ನು ಕೊಂದು ಬಿಟ್ಟೆ !

* * *

ವೈರಾಗ್ಯ

ಬಲು ಹಿಂದಿನಿಂದ ಜನರಲ್ಲಿ
ಒಂದು ಮಾತುಂಟು : ಕಾಲಕ್ಕೆ
ಎಂಥ ಶಕ್ತಿ ಇದೆ ಎಂದರೆ
ಅದು ಲಂಚ ನೀಡುತ್ತ ಕಳ್ಳತನದಲ್ಲಿ
ಇತಿಹಾಸದಿಂದ ಅದರ ಹಾಳೆಗಳನ್ನು
ಖರೀದಿಸುತ್ತ ಬರುತಿದೆ
ತನಗೆ ಇಷ್ಟ ಬಂದಾಗಲೆಲ್ಲ
ಕೆಲ ಪಂಕ್ತಿಗಳ ಬದಲಿಸುತ
ಮತ್ತೆ ಕೆಲವೊಂದ ಅಳಿಸುತ್ತ ಸಾಗಿದೆ
ಇತಿಹಾಸ ಹಾಸ ಬಿರುತ್ತ
ಕೋಪಿಸುತ ಪ್ರತಿಯೊಬ್ಬ
ಇತಿಹಾಸಕಾರನನು ಕ್ಷಮಿಸುತ್ತ ನಡೆದಿದೆ
ಆದರೆ ಇಂದು ಅದು ತುಂಬಾ ದುಃಖಿ.
ಒಂದು ಕೈಯಲ್ಲಿ ಇತಿಹಾಸಕಾರನ ಪುಸ್ತಕವ
ಕೈಗೆತ್ತಿಕೊಂಡು ಕೆಲವೊಂದು ಪುಟಗಳ ಹರಿದು
ಅವುಗಳ ಜಾಗದಲಿ ಬರೆಯದೇ
ಪುಟಗಳನು ಸೇರಿಸುತ್ತಿದೆ.
ಇತಹಾಸ ಸುಮ್ಮನೆ ಸದ್ದಿಲ್ಲದೆ
ಆ ಹಾಳೆಗಳಿಂದ ಹೊರನಡೆದು ಒಂದು
ಮರದ ಕೆಳಗೆ ನಿಂತು ಸಿಗರೇಟೊಂದ ಸೇದುತ್ತಿದೆ.

* * *

ಬಿಸಿಲಿನ ತುಣುಕು

ನನಗೆ ಆ ದಿನ ನೆನಪಿದೆ
ಅಂದು ಬಿಸಿಲಿನ ತುಣುಕೊಂದು
ಸೂರ್ಯನ ಬೆರಳ ಹಿಡಿದು
ಕತ್ತಲೆಯ ಸಂತೆಯನು ನೋಡುತ್ತಾ
ಆ ಸಂದಣಿಯಲ್ಲಿ ಕಳೆದು ಹೋಯಿತು

ಭಯಕ್ಕೂ ಶೂನ್ಯತೆಗೂ
ಒಂದು ನಂಟಿದೆ ಎಂದು ನಾನು ತಿಳಿಯುತ್ತೇನೆ
ನಾನು ಇದಕ್ಕೇನೂ ಆಗಬೇಕಾಗಿಲ್ಲ
ಆದರೆ ಕಳೆದು ಹೋದ ಈ ಮಗು
ನನ್ನ ಕೈ ಹಿಡಿದುಕೊಂಡಿತು.

ನೀನು ಎಲ್ಲೂ ಸಿಗುವುದಿಲ್ಲ
ಬೆಚ್ಚಗಿನ ಎಳೆಯ ಉಸಿರೊಂದು
ನನ್ನ ಕೈಯನು ಸವರುತ್ತಿದೆ
ನನ್ನ ಕೈ ಹಿಡಿಯುತ್ತಲೂ ಇಲ್ಲ
ಬಿಡುತ್ತಲೂ ಇಲ್ಲ

ಅಂಧಕಾರವಾದರೋ ಅಪಾರ.
ಸಂತೆಯ ಗದ್ದಲದಲ್ಲೂ
ಮೌನದ ಒಂದು ಜಗತ್ತಿದೆ.
ನಿನ್ನ ನೆನಪಾದರೊ
ಬಿಸಿಲಿನ ಒಂದು ತುಣುಕಿನಂತೆ.

* * *

ಮಾಗಿ

ಥರಗುಟ್ಟುತ್ತಿದೆ ನನ್ನ ಜೀವ
ತುಟಿಗಳು ನೀಲವರ್ಣಕೆ ತಿರುಗುತಿವೆ
ಅಂಗಾಲಿನಿಂದ ಅಂತರಾಳದ ತನಕ
ನಡುಕಹುಟ್ಟಿದೆ
ವಯಸ್ಸಿನಾಗಸದಲ್ಲಿ ವರ್ಷಗಳ
ಮೋಡಗಳು ಗರ್ಜಿಸುತ್ತಿವೆ
ಕಾನೂನಿನಂಥ ಹಿಮಬಂಡೆಗಳು
ನನ್ನ ಅಂಗಗಳದಲ್ಲಿ ಬಂದು ಬೀಳುತ್ತಿವೆ.
ಕೆಸರು ತುಂಬಿದ ಗಲ್ಲಿಗಳ ದಾಟಿ
ಎಲ್ಲಿಗಾದರು ಸರಿಯೆ
ಓಡಿ ಬಂದು ಬಿಡು ನೀನು
ನಿನ್ನ ಪಾದಗಳ ತೊಳೆದು ಬಿಡುವೆನು ನಾನು
ಆದಿತ್ಯನ ಮೂರ್ತಿಯಂಥ ನಿನ್ನ
ಕಂಬಳಿಯ ಅಂಚನು ಹಿಡಿದು ನಾನು
ಕೈಕಾಲು ಬೆಚ್ಚಗೆ ಮಾಡಿಕೊಳ್ಳುವೆನು
ಒಂದು ಬಟ್ಟಲು ಬಿಸಿಲನು
ಒಂದೆ ಗುಟುಕಿಗೆ ಕುಡಿದು ಬಿಡಲೆ?
ಬಿಸಿಲಿನ ತುಣುಕೊಂದನು
ನನ್ನ ಬಸಿರಲ್ಲಿ ಬಚ್ಚಿಟ್ಟುಕೊಳ್ಳಲೆ?
ಹೀಗಾದರೂ ನನ್ನ ಜನುಮ ಜನುಮಗಳ ಮಾಗಿ
ನೀಗಿ ಹೋಗಲಿ ತಾನು!

* * *

ಔತಣ

ನಿಶಾಕುವರಿ ಏರ್ಪಡಿಸಿದ ಔತಣ
ನಕ್ಷತ್ರಗಳ ಅಕ್ಕಿಕಾಳನು ಚೆಲ್ಲಿ
ಈ ಅನ್ನದ ಪಾತ್ರೆಯನಿಟ್ಟವರಾರು
ಚಂದ್ರನ ಈ ಹೂಜಿಯನು
ತಂದವರಾರು

ಬೆಳದಿಂಗಳ ಮದಿರೆಯ ಹೀರಿ
ಆಕಾಶದ ಕಣ್ಣುಗಳು ಭಾರವಾಗಿವೆ
ಭೂಮಿಯ ಎದೆ ಡವಗುಟ್ಟುತ್ತಿದೆ
ಇಂದು ರೆಂಬೆ ಕೊಂಬೆಗಳ ಮನೆಯಲಿ
ಅತಿಥಿ ಹೂಗಳು ಅರಳಿವೆಯೆಂದು ಕೇಳಿರುವೆ

ಮುಂದೇನು ಬರೆದಿದೆ ?
ಈಗ ಈ ಭಾಗ್ಯಗಳನ್ನು ಯಾರು ಕೇಳಬೇಕು

ವಯಸ್ಸಿನ ಹಾಳೆಯ ಮೇಲೆ
ನಿನ್ನ ಪ್ರೀತಿಯ ಮುದ್ರೆಯುಂಗುರ ಒತ್ತಿದೆ
ಲೆಕ್ಕ ತೀರಿಸುವವರಾರು!
ಅದೃಷ್ಟವೊಂದು ರಾಗ ರಚಿಸಿದೆ
ಇಂದು ರಾತ್ರಿ ಅದೇ ರಾಗವನ್ನು
ಯಾರಾದರೂ ಹಾಡುತ್ತಾರೆಂದು ಹೇಳುತ್ತಾರೆ
ಕಲ್ಪ ವೃಕ್ಷದ ನೆರಳಲ್ಲಿ ಕುಳಿತು
ಕಾಮಧೇನುವಿನ ಕಮನೀಯ
ಹಾಲಿನಿಂದ ಇದುವರೆಗೆ ಪಾತ್ರೆಯನು
ತುಂಬಿಸಿದವರಾರು !
ಗಾಳಿಯ ಬಿಕ್ಕನು ಕೇಳಿಸಿಕೊಂಡವರಾರು
ನನ್ನ ಅದೃಷ್ಟ ಕೂಗಿ ಕರೆಯುತಿದೆ
ಹೊರಡುವೆನು ನಾನು.

* * *

ಮೆಡಲುಗಳು

ಭಾರಿ ಬಹದ್ದೂರರು ನನ್ನ ದೇಶದ ಜನರು
ಭಾರಿ ಬಹದ್ದೂರರು ನಿನ್ನ ದೇಶದ ಜನರು
ಇವರಿಗೆಲ್ಲ ಸಾಯುವುದು-ಸಾಯಿಸುವುದು ಗೊತ್ತು
ತಲೆಗಳ ಬಲಿ ಕೊಡುವುದು ಗೊತ್ತು
ಆದರೆ ಆ ತಲೆಗಳು ಎಂದೂ ತಮ್ಮದಾಗಿರುವುದಿಲ್ಲ
ಎಂಬುದು ಬೇರೆ ಮಾತು

ಜೀವಿಯದೊಂದು ಹೆಣವಿರುತ್ತದೆ
ಆದರೆ ದೇವರ ಹೆಣವಿರುವುದಿಲ್ಲ
ಜೀವಿಯೊಳಗಿನ ದೇವರ ತುಣುಕು ಸತ್ತರೆ
ಎಂದೂ ಕೊಳಕು ವಾಸನೆ ಬರುವುದಿಲ್ಲ

ಯಾರ ಪ್ರೇಮಿಗಳು ಯಾರೂ ಅಲ್ಲ
ಆದರೆ ರಖಾವಿಗೇನೂ ಭಯವಿಲ್ಲ
ಯಾವುದೆ ನೋವಿನ ಭಯವಿಲ್ಲ

ದೊಡ್ಡದಾದ ಗೆರೆ ಮಾತ್ರ
ಇವರನ್ನು ಅವಮಾನಿಸುತ್ತದೆ
ಗೆರೆ ಎಲ್ಲರನ್ನೂ ಅಳೆವ ಮಾನದಂಡವಲ್ಲ ಎಂದು
ಇವರು ಗೆರೆಯನ್ನೆ ಅಳಿಸಿಬಿಡುತ್ತಾರೆ
ಪೂರ್ತಿ ಗೆಲವು ನಿರ್ವಿಘ್ನ
ಪೂರ್ತಿ ಉತ್ಸವವೂ ನಿರ್ವಿಘ್ನ
ಕಾಲ ಮುಗುಳ್ನಗುತ್ತಿದೆ........
ಮತ್ತು ಇವರೆದೆಯ ಮೇಲೆ ಮೆರೆಯುತ್ತಿವೆ
ಷಂಡ ಸಾಹಸದ ಅವೆಷ್ಟೋ ಮೆಡಲುಗಳು.

* * *

ನಾಗಮಣಿ

ಬುದ್ಧಿಯ ಅತಿ ಅಗಾಧ ಅರಣ್ಯ
ಅರಿವಿನ ತರುವೋ ಚಂದನವು
ನಿಧಿಯನು ಕಾಯುವ ಮನಸಿನ ಸರ್ಪ.
ಹಣೆಯ ಮೇಲೊಂದು ಹೊಳೆಯುವ ಮಣಿಯು
ಗಾಳಿಯಲೊಮ್ಮೆ ಹೆಡೆಯನು ಹರಡಿತು

ಮೆಲ್ಲಗೆ ಮೆಲ್ಲಗೆ ಹೆಜ್ಜೆಯ ಹಾಕುತ
ಹಾವಾಡಿಗ ಬಂದ.
ತುಟಿಯ ಮೇಲೊಂದು ಒಲವಿನ ಪುಂಗಿ
ಕೈಯಲೊಂದು ಭರವಸೆಗಳ ಬುಟ್ಟಿ
ಆಗತಾನೆ ಕರೆದ ಹಾಲಿನ ಒಲುಮೆಯವನು
ಮನದ ಹಾವಿನ ಹೇಳಿಗೆಯನು ಹಿಡಿದವನು

ನಾಲ್ಕುದಾರಿಗಳು ಕೂಡುವೆಡೆ ಕುಳಿತು
ಪುಂಗಿಯ ಊದಿದ, ಹಾವಿಗೆ ಉಣಿಸಿದ
ಕೊರಳಸುತ್ತ ಒಮ್ಮೆ ಸುತ್ತಿಕೊಳ್ಳುತಿರೆ
ರಾಗ ನಕ್ಕವು ವಿಷವು ಅತ್ತಿತು
ಲೋಕಕೆಲ್ಲಕು ಸಂತಸ ತುಂಬಿತು.

* * *

ನನ್ನ ವಿಳಾಸ

ಇಂದು ನಾನು ನನ್ನ ಮನೆಯ ನಂಬರನ್ನು
ಅಳಿಸಿ ಹಾಕಿದ್ದೇನೆ
ಬೀದಿಯ ಹಣೆಯ ಮೇಲೆ ಬರೆದಿದ್ದ
ಬೀದಿಯ ಹೆಸರನ್ನು ತೊಡೆದು ಹಾಕಿದ್ದೇನೆ
ಪ್ರತಿಯೊಂದು ರಸ್ತೆಯನ್ನು ಸೂಚಿಸುವ
ದಿಕ್‌ಫಲಕವನು ಅಳಿಸಿಬಿಟ್ಟಿದ್ದೇನೆ
ಆದರೆ ನಿಮಗೆ ನಾನು ಸಿಗಲೇಬೇಕೆಂದಿದ್ದರೆ
ಎಲ್ಲ ದೇಶದ, ಎಲ್ಲ ನಗರಗಳ
ಎಲ್ಲ ಬೀದಿಗಳ ಬಾಗಿಲನು ತಟ್ಟಿನೋಡಿ
ಇದೊಂದು ಶಾಪ ಮತ್ತು ವರ
ಅಲ್ಲದೆ ಎಲ್ಲಿಯಾದರು ಸರಿಯೆ
ಸ್ವಾತಂತ್ರ್ಯದ ಚೆಹರೆ ಸುಳುಹು ದೋರಿದರು ಸಾಕು
ಅದೆ ನನ್ನ ಮನೆಯೆಂದು ತಿಳಿಯುವುದು ನೀವು

* * *

ಡಾ|| ಸೀತಾಕಾಂತ ಮಹಾಪಾತ್ರ ಅವರ ಕವಿತೆಗಳು

ಡಾ. ಸೀತಾಕಾಂತ ಮಹಾಪಾತ್ರ (ಜನನ : 17-9-1937)

ಭಾರತೀಯ ಭಾಷೆಗಳಲ್ಲಿ ಬರೆಯುತ್ತಿರುವವರಲ್ಲಿ ಅತ್ಯಂತ ಖ್ಯಾತಿವಂತರಾದ ಶ್ರೀ ಸೀತಾಕಾಂತ ಮಹಾಪಾತ್ರ ಅವರು ಒರಿಯಾ ಭಾಷೆಯ ಕವಿ ವಿಮರ್ಶಕ ಮತ್ತು ಭಾಷಾಂತರಕಾರ. ಅಷ್ಟೇ ಅಲ್ಲ, ಅವರೊಬ್ಬ ಹೆಸರಾಂತ ವಿದ್ವಾಂಸ ಮತ್ತು ದಕ್ಷ ಆಡಳಿತಗಾರ. ಭಾರತ ಸರ್ಕಾರದ ವಿವಿಧ ಮಂತ್ರಿ ಶಾಖೆಗಳಲ್ಲಿ ಕಾರ್ಯದರ್ಶಿಯಂಥ ಪ್ರತಿಷ್ಠಿತ ಹುದ್ದೆಗಳನ್ನು ನಿರ್ವಹಿಸಿದ್ದಾರೆ . ಉಪಸಂಸ್ಕೃತಿಗಳ ಅಧ್ಯಯನ ಕುರಿತಾದ ಅವರ ಮಹಾಪ್ರಬಂಧ Modernisation and Ritual ಕ್ಕೆ Ph.D ಪ್ರಶಸ್ತಿ ದೊರೆತಿದೆ. ಈಗ ನ್ಯಾಷನಲ್ ಬುಕ್ ಟ್ರಸ್ಟ್‌ನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇತ್ತೀಚೆಗೆ ತಾನೆ ಅವರಿಗೆ ಕೇಂದ್ರಸಾಹಿತ್ಯ ಅಕಾಡೆಮಿಯ Fellowship ನೀಡಿ, ಗೌರವಿಸಲಾಗಿದೆ. ಅಷ್ಟೇ ಅಲ್ಲದೆ ಹಾರ್ವರ್ಡ್ ವಿಶ್ವವಿದ್ಯಾನಿಲಯದ Senior Fellow ಕೇಂಬ್ರಿಜ್‌ನ ಅಂತಾರಾಷ್ಟ್ರೀಯ ಕವಿಗಳ ಅಕಾಡೆಮಿಯ Fellow ಆಗಿದ್ದಾರೆ. 1974 ರಲ್ಲಿ ಅವರ 'ಶಬ್ದರ ಆಕಾಶ' ಕೃತಿಗೆ ಕೆಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಿದೆ. 1993 ರಲ್ಲಿ ಅವರ ಸಮಗ್ರ ಸಾಹಿತ್ಯ ಸೇವೆಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ.

ಒರಿಯಾ ಜನರ ಸರಳ ಸುಂದರ ಬದುಕು ಅವರ ಕಾವ್ಯದಲ್ಲಿ ಅಭಿವ್ಯಕ್ತಿ ಪಡೆದಿದೆ. ಅವರ 'Little tradition' ಒಂದು ವಿದ್ವತ್ಪೂರ್ಣ ಕೃತಿ.

ಅವರ ಕೃತಿಗಳು: ಕಾವ್ಯ: ಅಷ್ಟಪದಿ (1963) ಶಬ್ದರ ಆಕಾಶ (1971) ಅರಾದೃಶ್ಯ(1981) ಶ್ರೇಷ್ಠಕವಿತಾ(1994) 'ದೀಪ್ತಿ-ಓ-ದ್ಯುತಿ' ಚಿತ್ರಾನದಿ , ಪುಚ್ಛ ಬಿಕುಹಾ, ಫೇರಿ ಅಸ್ಬರಿ ಬೇಲಿ, ಶಬ್ದ, ಸ್ವಪ್ನ, ಓ ನಿರ್ವಿಕತಾ (ಪ್ರಬಂಧ) ಅನೇಕ ಸಾರತಾ (ಪ್ರವಾಸ ಕಥನ) ತಮ್ಮ ಕವನಗಳನ್ನು ಕವಿಯೇ ಇಂಗ್ಲೀಷ್‌ಗೆ ಅನುವಾದಿಸಿದ್ದಾರೆ. ಅವುಗಳೆಂದರೆ : The ruined Temple and other Poems, Death of Krishna and other poems.

Unending Rhythms - ಆದಿವಾಸಿಗಳ ಜನಪದ ಗೀತೆಗಳ ಇಂಗ್ಲಿಷ್ ಅನುವಾದ

ಅದಕ್ಕೇ ನಾವು ಮನುಜರು

ಜ್ಯೋತಿರ್ವರ್ಷಗಳಷ್ಟು ದೂರದ,
ಬಹುದೂರದ ಬಾಹ್ಯಾಕಾಶದಿಂದ
ಈ ಪುರಾತನ ಭೂಮಿಯ ಮೇಲಿನ
ನಮ್ಮ ಸಹಮಾನವರೊಂದಿಗೆ
ಸಂಭಾಷಿಸಬಲ್ಲೆವು ಎಂಬುದಕ್ಕಲ್ಲ.
ಗಂಟೆಗಟ್ಟಲೆ ಇಲ್ಲೇ
ನಮ್ಮ ಪಕ್ಕದಲ್ಲೇ
ಪ್ರಿಯರೆನಿಸಿದವರೊಡನೆ
ಕುಳಿತಿದ್ದರು ಕೂಡ
ತುಟಿಗೆ ಒಂದೇ ಒಂದು
ಶಬ್ದ ತರದೆ ಇರುತ್ತೇವಲ್ಲ
ಅದಕ್ಕೇ ನಾವು ಮನುಜರು!

ಸೂರ್ಯ ಚಂದ್ರರ ಲೋಕಕ್ಕೆ
ಗ್ರಹತಾರೆಗಳೆಡೆಗೆ
ಪಯಣಿಸುವ ಪ್ರಯಾಸ
ಬೇಕಿಲ್ಲ ನಮಗೆ
ಕಾರಣ ಇಲ್ಲೆ
ಈ ತಾಯಿ ಭೂಮಿಯ ಮೇಲಿಂದಲೆ
ಬರಿಯ ಅಂಗೈಗಳಿಂದಲೆ
ಸೂರ್ಯನನು ಇಲ್ಲವಾಗಿಸಬಲ್ಲೆವು !
ಒಂದು ಬಕೆಟ್ ನೀರಿನೊಳಗಿಂದ
ಅವನು ಹೊರನೆಗೆಯುವಂತೆ
ಮಣ್ಣಗೋಡೆಯ ಮೇಲೆ
ಕುಣಿದಾಡುವಂತೆ ಮಾಡಬಲ್ಲೆವು ನಾವು

ಅಷ್ಟೇ ಅಲ್ಲ;
ಇನಿಯಳ ಎದೆಯ ಮೇಲೆ
ಚಂದಿರನ ಮೂಡಿಸಬಲ್ಲೆವು
ಅವಳ ಕಂಗಳಲಿ
ತಾರೆಗಳ ಅಂಕಿಸ ಬಲ್ಲೆವು
ನಾವು ಹೇಳ ಬಯಸಿದ್ದನ್ನೆಲ್ಲ
ಶಬ್ದಗಳಿಂದ ಬಲವಂತವಾಗಿ
ಹೊರಡಿಸ ಬಲ್ಲೆವು ಎಂಬುದಕ್ಕಲ್ಲ;
ನಾವು ಅಂದುಕೊಂಡದ್ದನ್ನೆಲ್ಲ
ಅಭಿವ್ಯಕ್ತಿಸುವಂತೆ
ಅಪ ಶಬ್ದಗಳನ್ನು ಎಂದಿಗೂ
ಅನುನಯಿಸಲಾಗದು ಎಂದು
ಕಂಡುಕೊಳ್ಳುವೆವಲ್ಲ
ಅದಕ್ಕೇ ನಾವು ಮನುಜರು!

ನಾವು ಮನುಜರು
ಏಕೆಂದರೆ,
ಪ್ರಚಂಡ ಸೂರ್ಯನ ಹಾಗೆ
ಉರಿವ ಸತ್ಯವನೆದುರಿಸಲಾರದೆ
ಭ್ರಮಾತ್ಮಕ ಶಬ್ದಗಳಿಗೆ ಮರುಳಾಗಿ
ಅರೆ ಬೆಳಕು ಅರೆ ನೆರಳುಗಳಲ್ಲಿ
ಅಡಗಿಕೊಂಡಿರುವ ಅರ್ಧಸತ್ಯಗಳ ಹಿಂದೆ
ಜೀವನ ಪರ್ಯಂತ
ಹುದುಗಿಕೊಳ್ಳುವೆವು

ನಾವು ಮನುಜರು
ಏಕೆಂದರೆ,

ಸಮಸ್ತ ಜ್ಞಾನರಾಶಿಯನು
ಎಲ್ಲ ಮಾಹಿತಿಗಳನು
ತಾಡೋಲೆ ಗ್ರಂಥಗಳಲಿ
ಕಂಪ್ಯೂಟರ್‌ಗಳಲಿ
ಬೇಕೆಂದಾಗ ನಮಗೆ ಸಿಗುವ ಹಾಗೆ
ಶೇಖರಿಸಿ ಇಟ್ಟಿದ್ದೇವೆ ಎಂಬುದಕ್ಕಲ್ಲ;
ನಾವು ಎಲ್ಲೋ ಇಟ್ಟು
ಮರೆತು ಬಿಟ್ಟಿರುವ ಕನ್ನಡಕಗಳಿಗಾಗಿ
ಬೆಳಿಗ್ಗೆ ಗಂಟೆಗಟ್ಟಲೆ
ಹುಚ್ಚು ಹಿಡಿದವರ ಹಾಗೆ
ಹುಡುಕಿ ಪರದಾಡುವೆವು ಎಂಬುದಕೆ!

* * *

ಆಗಾಗ

ನೀನೊಂದು ವೇಳೆ ನಿನ್ನ ಊರ ಹೆಸರನು
ನಿನ್ನ ಮನೆ, ನಿನ್ನ ಬದುಕು
ನಿನ್ನೆಲ್ಲ ನಿನ್ನೆ ನಾಳೆಗಳನು
ಮರೆತುಬಿಟ್ಟರೆ
ನೀನೊಂದು ವೇಳೆ ಎಲ್ಲರನು
ಕಳೆದುಕೊಂಡು ಹತಾಶನಾಗಿಬಿಟ್ಟರೆ
"ನಾನಾರು, ಎತ್ತಸಾಗಿದ್ದೇನೆ" ಎಂದು
ಕತ್ತಲೆಯ ಕೇಳುವುದೆ ಒಳಿತು.
ಏಕೆನೆ ಬೆಳಕಿನ ಸರಿಯಾದ ವಿಳಾಸವನು
ಕತ್ತಲೆಗಿಂತ ಚೆನ್ನಾಗಿ
ಬೇರಾರು ಬಲ್ಲರು?

ಆತ್ಮಬೇಗುದಿಗೊಂಡಿದ್ದಾಗ
ಹೃದಯ ಬೆಂದಿರುವಾಗ
ಸಂತೈಸಿಕೊಳ್ಳಲು ಸಾಧ್ಯವೇ ಇಲ್ಲದಾಗ
ದುಃಖದ ಭಾರವನು ಹಂಚಿಕೊಳ್ಳಲು
ಬೇರಾರೂ ಇಲ್ಲವೆಂದಾಗ
ದೇವರು, ಅಪ್ಪ, ಅಮ್ಮ, ಗೆಳೆಯ
ಪ್ರಿಯ ಪತ್ನಿ , ಮಕ್ಕಳು
ಎಲ್ಲ ಎಲ್ಲರು
ದೂರವೆನಿಸಿದಾಗ
ದೂರದ ನಾಡಿಂದ
ಕತ್ತಲೆಯ ಬೀಡನು ದಾಟಿಕೊಂಡು
ನಿನ್ನ ಬಳಿ ಇರಲೆಂದೆ ಚಂದಿರನು
ಬದಿಹನೆಂದೆ ತಿಳಿವೆ ನೀನು.
ಸಹಸ್ರಸಲ ಮೊರೆಯಿಟ್ಟರೂ

ಬೇಡಿಕೊಂಡರು, ಯುಕ್ತವಲ್ಲದ
ಶಬ್ದಗಳು ನಿನ್ನ ಹೃದಯದಾಳದ
ಬಿಕ್ಕನೊಂದನು ಕೂಡ
ಆತ್ಮದ ವೇದನೆಯನು
ಅಭಿವ್ಯಕ್ತಿಸಲಾರವೆನಿಸಿದಾಗ
ಎಲ್ಲವನು ಮೌನದಪಾರ
ಮೃದು ಹಸ್ತಗಳಿಗೆ ಒಪ್ಪಿಸಿಬಿಡು.
ಏಕೆಂದರೆ, ಮೌನದ ಹೊರತು
ಬೇರಿನ್ನಾರು ಬಲ್ಲರು
ಮನುಜನಳಲಿನ
ಸುದೀರ್ಘ ಚರಿತೆಯನು?

* * *

ಒಲವಿನ ಹಾಡು

ಬೆಟ್ಟದ ಇಳಿಜಾರಿನಲ್ಲಿ
ನಿನ್ನ ಪ್ರೇಮವ ನಾ ಯಾಚಿಸಿದೆ
ಕನಸುಗಳ, ಸುಖಸ್ಪರ್ಶವ
ವೀಳ್ಯವ, ನಾ ಕೇಳಿದೆ
ನೀ ಹೇಳಿದೆ; ಇಲ್ಲಿ ಇರವವರೆಲ್ಲ
ಹೊಲದ ಕೊಯ್ಲಿನ ಮಂದಿ
ಇಲ್ಲಿ ಬೇಡ ಅದೆಲ್ಲ.

ಮುಸ್ಸಂಜೆಯ ಮಸುಕಿನಲ್ಲಿ
ಅದೋ ಅಲ್ಲಿ
ಪಾರಿಜಾತ ಪುಷ್ಪಗಳ ಮಾದಕ ಸುಗಂಧದಲ್ಲಿ
ಊರೆಲ್ಲ ಚಡಪಡಿಸುವೆಡೆಯಲ್ಲಿ
ನಿನ್ನೊಲವಿಗೆ, ನಿನ್ನ ವಪುವಿಗೆ
ಅದೂ ಅಲ್ಲದಿರೆ ನಿನ್ನೊಂದು ಸವಿಮಾತಿಗೆ
ನಾ ಆಶಿಸಿದೆ.
ನೀ ಹೇಳಿದೆ: ಮಿಂಚುಹುಳುಗಳ
ಮತ್ತೆ ಒಂಟಿ ತಾರೆಗಳ ಕಂಡರೆ
ನನಗೆ ಎಲ್ಲಿಲ್ಲದ ಭಯ.
ಜನವಿಹೀನವಾದೀ ಎಡೆಯ
ನಾವು ಬೇಗ ತೊರೆವುದೆ ಸರಿ.

ದಟ್ಟ ಕಾನನದಲ್ಲಿ
ಎದೆಯ ಒಂದೊಂದು ಮಿಡಿತವೂ
ಕೇಳುವೆಡೆಯಲ್ಲಿ
ನಿನ್ನೊಲವಿಗೆ ಸುಖಸ್ಪರ್ಶಕೆ
ನಾ ಹಂಬಲಿಸಿದೆ.

ನೀ ಹೇಳಿದೆ : ಓಹ್! ಇಲ್ಲಿ ಬೇಡ ಅದೆಲ್ಲ.
ಇಲ್ಲೋ ಬರಿ ಮಾಸಲುಮಣ್ಣು
ಈ ನಿನ್ನ ಸುಮಕೋಮಲ ತನು
ಕಳಂಕವಿನಿತಿಲ್ಲದ ನಿನ್ನ ಪವಿತ್ರ ಆತ್ಮ
ಮಾಸಲಾಗುವುದಿಲ್ಲವೆ ಮಣ್ಣಿನ ಹಾಗೆ?
ಅದರಿಂದ ಬೇಡ ಇಲ್ಲಿ.

ಬೆಟ್ಟದ ಇಳಿಜಾರಿನ ಹೊಳೆಯ ಬಳಿ
ಒಂಟಿ ಹಾಡು ಹಕ್ಕಿಯಲ್ಲದೆ
ಇನ್ನೊಂದರ ಹೆಸರಿಲ್ಲದಲ್ಲಿ
ನಿನ್ನ ಸ್ಪರ್ಶಕೆ, ಕತ್ತಲೆಗೆ ನಾ ಹಾತೊರೆದೆ
ನೀ ಹೇಳಿದೆ: ಈ ಹೊಳೆವ ಹೊಳೆಯ
ಕನ್ನಡಿಯಲಿ ಕಂಡುಬಿಡುವುದೆಲ್ಲವು.
ಅದರಿಂದ ಇಲ್ಲಿ ಬೇಡ.

ಜಗವೆಲ್ಲ ಮಲಗಿ ನಿದ್ರಿಸುತ್ತಿತ್ತು
ಚಂದ್ರ ತಾರೆಗಳು ಸಹ.
ನಿನ್ನೊಲವಿಗೆ, ಹಿತಸ್ಪರ್ಶಕೆ ಕೈ ಚಾಚಿದೆ.
ನನಗೆ ಜೀವ ತುಂಬೆಂದು ಬೇಡಿದೆ.
ನಿನ್ನ ದೇಹದ ಗೂಡಿನಲಿ, ನಡುಗುವ
ನನ್ನ ಅಸಹಾಯಕ ಜೀವಕೊಂದು
ಎಡೆಯ ಕರುಣಿಸಲು ಕೋರಿದೆ.
ಹೇಳಿದೆ ನೀನು : ಈ ಗಾಢ ಕತ್ತಲೆಯಲ್ಲು
ನಿನ್ನ ಕಣ್ಣ ಕನ್ನಡಿಯಲ್ಲಿ
ಎಲ್ಲವೂ ನಿಚ್ಚಳವಾಗಿ ಕಾಣುತ್ತದೆ.
ಅದರಿಂದ ಈಗ ಬೇಡ, ಈಗ ಬೇಡ.

ನನ್ನ ಕಣ್ಗಳ ಕಳಚುವೆನಿದೊ
ನಿನಗಾಗಿಯೆ ಇವೆ ಈ ಕಣ್ಣ ಕಮಲ,
ಕೊಂಡು ಈ ಕಾಣಿಕೆಯ
ಕೊಡು ನಿನ್ನ ಒಲವ;
ಮತ್ತೆ ನಿನ್ನ ಸವಿಯ ಸ್ಪರ್ಶ
ನೀಡು ನನ್ನ ಒಂಟಿಜೀವಕೆ
ನಿಲ್ಲಲೊಂದು ನೆಲೆಯ.

* * *

ಒಲವಿನ ನಿಗೂಢ

ನಾನು ಪ್ರೀತಿಸುತ್ತೇನೆ
ನನ್ನನ್ನೇ
ಯೌವನದ ಆಪ್ಯಾಯಮಾನ
ವರ್ಷಗಳಲ್ಲಿ
ನನ್ನ ಗೂಢತೆಯಲ್ಲಿ
ನಾನೇ ಮುಳುಗಿ.
ಇಷ್ಟಾದರೂ
ನನ್ನ ಒಲವಿನ ಆಳ
ನನ್ನ ದೇಹದ ದನಿ
ನನಗೆ ತಿಳಿದಿರುವುದಾದರೂ
ಅದೆಷ್ಟು ಅಲ್ಪ!
ನನ್ನ ಸಂಗೀತದ
ಚಹರೆಗಳು ಗೊತ್ತು.
ಗೊತ್ತಿಲ್ಲ ಅದರ ನಗೆ, ನೋಟಗಳು.
ಸಾಗರದಂತೆ
ಅಥವಾ
ಸಂಗೀತಗಾರನಂತೆ
ಮೌನದ ರಹಸ್ಯದನಿ
ತಿಳಿದುಕೊಳ್ಳದೆ
ನನ್ನನ್ನು ನಾನೇ
ಹೇಗೆ ಕಳೆದುಕೊಳ್ಳುತ್ತಿದ್ದೇನೆ!
ನಾನು ಪ್ರೀತಿಸುತ್ತೇನೆ
ನಿನ್ನನ್ನು.
ನನ್ನ ಆತ್ಮದಷ್ಟೇ ನಿಕಟ
ನೀನು ನನಗೆ!

ಆದರಿಂದಲೇ
ಅರ್ಥವಾಗದ ಕುತೂಹಲದಿಂದ
ಅಜ್ಞಾತಕ್ಕಾಗಿ ನಾನು ಹಂಬಲಿಸುವಂತೆ
ಚೋದಿಸುತ್ತಿರುವೆ ನೀನು.
ಹಸೆಮಣೆಯ ಹೊಸಿಲ
ಹೆಣ್ಣಿನ ಈ ನಿನ್ನ ಭಾವಭಂಗಿಯಲಿ
ಅನುರಾಗದ ಅಲೆಗಳು
ನಿಗೂಢ ಬೃಂದಾವನ
ಲೀಲೆಯಲ್ಲಿ ನರ್ತಿಸುತ್ತಿವೆ.
ನೀನು ನನ್ನ ಆತ್ಮದ ಆತ್ಮ
ನನ್ನ ಆತ್ಮದಷ್ಟೇ ನಿಗೂಢ.

* * *

ಕಾಲ ಓಡುವುದಿಲ್ಲ

ಓಡುವುದು ಕಾಲವಲ್ಲ
ಎಲ್ಲೆಲ್ಲೂ ಇರುವ ಜನ ಹಾಗೂ
ಜೀವ ಜಂತುಗಳು.

ನಮ್ಮ ಮನೆಯಂಗಳದಲಿ
ಗೋಡೆಗೆ ತನ್ನ ತಲೆಯಾನಿಸಿ
ಭಾವಚಿತ್ರದ ಹಾಗೆ ನಮ್ಮಪ್ಪ
ಕುಳಿತಿರುವಂತೆಯೆ ಅವನತ್ತ
ಕೈ ಬೀಸುತ್ತ ಕಪ್ಪು ಅಂಚಿನ ಮೋಡ
ಸರಿದು ಹೋಗುತ್ತದೆ
ಮರುದಿನ ನಮ್ಮತ್ತ ಬೆನ್ನುತಿರುಗಿಸಿ
ಅಪ್ಪ ಸದ್ದಿಲ್ಲದೆ
ಮುಳುಗುವ ಸೂರ್ಯನೊಂದಿಗೆ
ದಿಗಂತದಲಿ ಮುಳುಗಿ ಮರೆಯಾಗುತ್ತಾನೆ.

ಕಣ್ಣೀರಿಡುತ್ತಿರುವ ಮರಕ್ಕೆ
ವಿದಾಯ ಹೇಳುತ್ತ
ಎಲೆಗಳು ಉದುರಿಹೋಗುತ್ತವೆ.
ಆಮೇಲೆ
ಮರಕಟುಕರು ಬಂದು ಕೊಡಲಿ ಹಾಕುತ್ತಾರೆ
ತಾನು ನಿಂತ ನಿಡುಗಾಲದ ನೆಲಕ್ಕೆ
ಕೊನೆಯ ನಮಸ್ಕಾರ ಹೇಳುತ್ತ
ಮರ ಉರುಳಿ ಬೀಳುತ್ತದೆ.

ಇದ್ದಕ್ಕಿಂದ್ದಂತೆ
ಕಾಲ ಕಡೆದು ನಿರ್ಮಿಸಿದ

ಮನೆಮಠಗಳು, ನದಿನದಗಳು
ಹೊಲಗದ್ದೆಗಳು, ಬೆಟ್ಟಕಾಡುಗಳು
ಮಡದಿ ಮಕ್ಕಳು ಬಂಧುಮಿತ್ರರು
ಅಸಂಖ್ಯ ಆಕೃತಿಗಳು
ಎಲ್ಲ ಎಲ್ಲವು
ಕತ್ತಲೆಯ ಕಡೆಗೆ ಧಾವಿಸುತ್ತವೆ.

ಆ ಕತ್ತಲೆಯಂತೂ
ನಿಜಕ್ಕೂ ನಿನ್ನದೇ ನೆರಳು
ನಾವೇಕೆ ಹೀಗೆ ಎತ್ತ
ಅಸಹಾಯಕರಾಗಿ ಸರಿದು ಹೋಗುವೆವು
ಎಂಬುದ ಖಂಡಿತಾ ನೀನು ಅರಿಯ ಬೇಕು.

* * *

ಓ ಮೃತ್ಯು! ಇನ್ಯಾವಾಗಲಾದರೂ ಬರಬಹುದು ನೀನು

ನಾನಿನ್ನೂ ಬಾಲಕನಾಗಿದ್ದಾಗಲೇ
ಹೇಳಿರಲಿಲ್ಲವೆ ನಿನಗೆ
ನಿನಗಿಷ್ಟಬಂದಾಗ
ಬರಬಹುದು ನೀನು
ಆದರೆ ಮಾತ್ರ
ಮಳೆಬರುವ ಕಾಲಕ್ಕೆ ಅಲ್ಲ ಎಂದು?
ಆ ಸಮಯದಲ್ಲಿ ನಿನಗೆ
ನಾನು ಸಿಕ್ಕಬೇಕು ಹೆಗೆ?
ಶಾಲೆಯ ನೋಟು ಪುಸ್ತಕದ
ಒಂದೊಂದೆ ಹಾಳೆ ಹರಿದು
ಕಾಗದದ ದೋಣಿಗಳ ಮಾಡಿ
ಊರಮುಂದಿನ ರಸ್ತೆಯಲಿ
ಬಿರುಸಾಗಿ ಹರಿವ ನೀರಲಿ
ತೇಲಿಬಿಡುತಿದ್ದೆನಾಗ
ಮುಗಿಲಿಂದ ಇಳಿದ ಮೋಡಗಳು
ನಿರಾಳದಲಿ ನನ್ನೊಡನೆ
ಹರಟುತಿದ್ದುವಾಗ
ಬೇಲಿ ಸಾಲಿನ ಮೇಲೆ ಹಬ್ಬಿರುವ
ಸೌತೆ ಸೋರೆಗಳ ಹೂವ ರಾಶಿಗಳ ಬಳಿಯಲಿ
ಕದಂಬ ಪುಷ್ಪಗಳ ಸುಗಂಧಸೀಮೆಯಲಿ
ಹುಚ್ಚೆದ್ದ ನನ್ನ ಹೃದಯವದು
ವಿಹರಿಸುತಿದ್ದಿತಾಗ.

ಇಂದಿಗೂ, ಈ ಪ್ರಾಯದಲ್ಲೂ
ಕಪ್ಪು ಮೋಡಗಳು ಕವಿದ

ನದಿಯ ದಡಗಳಲಿ
ಅಂದು ತೇಲಿಬಿಟ್ಟ ಕಾಗದದ
ದೋಣಿಗಳಿಗಾಗಿ ನಾ ಕಾದಿರುವೆನು
ಬಂದಾವು ಅವು
ಕಾಲನ ಕಮ್ಮನೆಯ ಕಪ್ಪುಕರೆಗೆ
ಓಗೊಟ್ಟು
ನೂರಾರು ಕನಸುಗಳ, ಆಶೆಗಳ
ನೆನಪುಗಳ, ವಿಷಾದಗಳ ತುಂಬಿಕೊಂಡು.

ನನಗೊ
ಪಶ್ಚಾತ್ತಾಪ ಪಡಲಾಗಲಿ
ವ್ಯಥೆಪಡಲಾಗಲಿ
ಪುರಸೊತ್ತು ಇಲ್ಲವೆಂಬುದ
ನೀ ಕಾಣೆಯಾ ?
ದಿನ ನಿತ್ಯದ ನೆನಪುಗಳಲಿ
ನನ್ನ ಪಾಡಿಗೆ ನಾನು ಮೈ ಮರೆಯಲು ಕೂಡಾ
ಬಿಡುವಿಲ್ಲವು.
ಪ್ರಿಯ ಗೆಳೆಯ,
ನಿನಗಿಷ್ಟಬಂದಾಗ
ಬೇರೆ ಯಾವಾಗಲಾದರೂ ಸರಿಯೆ
ಬರಬಹುದು ನೀನು.
ನಾನಂತು ಎಂದಿಗೂ ಸಿದ್ಧ
ಆದರೆ ಮಾತ್ರ
ಬಿರುಮಳೆಯು ಭೋರೆಂದು ಸುರಿಯುವೀ
ಮಬ್ಬಿನಲ್ಲಿ ಮಾತ್ರ
ಬರಬೇಡ ಮಿತ್ರ.

* * *

ಪವನ

ಅವನು ಯಾವುದಕ್ಕೂ ಅಂಟಿಕೊಂಡಿಲ್ಲ
ಪಡೆದುಕೊಳಬೇಕೆಂಬ ಆಸೆಯಿಂದ
ಏನೊಂದನೂ ಗೆಬರಿಕೊಳ್ಳುವುದಿಲ್ಲ ಅವನು

ತನಗೆ ಎದುರಾದುದನ್ನೆಲ್ಲ
ಮುಟ್ಟಿಯೆ ಮುಂಬರಿವ
ಅವಸರದ ದಾರಿಹೋಕನಿವ.
ಮೊಲೆಯ ಮಿದು ತೊಟ್ಟುಗಳು
ಒರಟು ಶಿಲೆಗಳು, ಮುದ್ದು ಮಗುವಿನ
ಮುಗ್ಧ ಮುಗುಳುನಗೆ
ಗಬ್ಬುನಾತ ಬೀರುತ್ತಿರುವ ಗಟಾರಗಳು
ಮತ್ತಾ ಸುಗಂಧಿತ ಕುಸುಮಗಳು
ಎಲ್ಲವನು.
ಏನನೋ ಗುನುಗುತ್ತ
ತಲೆತಗ್ಗಿಸಿಕೊಂಡು ಸಾಗುವುದಕಿಂತ
ಸುಲಭದ ಕೆಲಸ ಹಿಂದೆಂದು ಇರಲಿಲ್ಲ
ಮುಂದೆಯೂ ಇರಲಾರದೆಂಬಂತೆ
ಸಾಗುವನಿವನು.

ಅತ್ಯಂತ ಅನಿರೀಕ್ಷಿತ ಸ್ಥಳಗಳಲಿ
ಹಲವುಸಲ ನಾನಿವನ ಸಂಧಿಸಿದ್ದೇನೆ
ಅದೊಂದು ಸಂಜೆಯ ಕೊರೆವ ಚಳಿಯಲ್ಲಿ
ಕಡಲತೀರದಲಿ
ಮೀನುಗಾರರು ಪ್ರವಾಸಿಗರು, ಯಾರೊಬ್ಬರು
ಇಲ್ಲದೊಂದು ಸಂಜೆ
ಎಂದಿನಂತೆ ಕಡಲು ಭೋರ್ಗರೆದಿತ್ತು

ಎದೆಯಮೇಲೆ ಕೈ ಕಟ್ಟಿಕೊಂಡು
ಯಾರನೋ ಹುಡುಕುವಂತೆ ಮೆಲ್ಲಗೆ ಸಾಗುತಿದ್ದನವ.

ಇನ್ನೊಮ್ಮೆ
ರಸ್ತೆಯಂಚಿನಲಿ ತಿರುಕ ಹುಡುಗನೊಬ್ಬನ
ಮೃತದೇಹವನು ನೇವರಿಸುತಿದ್ದುದ ಕಂಡೆ
ಹಾಗೆ ನೇವರಿಸಿ ಮತ್ತೆ ಎಚ್ಚರಿಸಬಹುದೆಂಬಂತೆ.
ನನ್ನ ಅಪ್ಪನೊಡನೆ ಅವನಿಗೆ
ಗಳಸ್ಯ ಕಂಠಸ್ಯ
ಕೆಲವೊಮ್ಮೆ ಕತ್ತಲಾಗುತಿದ್ದಂತೆ
ಏಕಾಂಗಿಯಾಗಿ ಮೃತದೇವತೆಯ ಹಾಗೆ
ಅಪ್ಪ ಮನೆಯ ಅಂಗಳದಲ್ಲಿ ಕುಳಿತಾಗ
ಅವನು ಬಂದು ಅಪ್ಪನೊಡನೆ
ಮಾತಿಗೆ ತೊಡಗುತಿದ್ದ.
ಇನ್ನೊಮ್ಮೆ ಅವನು ಹಾಸಿಗೆ ಹಿಡಿದಿದ್ದಾಗ
ಕಿಟಕಿಯ ಮೂಲಕ ಕಳ್ಳನ ಹಾಗೆ
ತೂರಿಬಂದು ಅವನ ಕಿವಿಯೊಳೇನನೋ
ಪಿಸುಗುಡುತ್ತಿದ್ದ

ಪುರಿಯಲ್ಲಿ ಕಡಲ ತಡಿಯಲ್ಲಿ
ಅಪ್ಪನ ಶವವನ್ನು ಚಿತೆಯ ಮೇಲಿಟ್ಟು
ನಾನು ಬೆಂಕಿ ಇಟ್ಟಾಗ
ಇದ್ದಕ್ಕಿದ್ದಂತೆ ಶೂನ್ಯದಿಂದೆಂಬಂತೆ
ಹುಚ್ಚನ ಹಾಗೆ ಓಡಿ ಬಂದು
ಧಗಧಗನೆ ಉರಿವ ಬೆಂಕಿಯಲಿ
ಸೇರಿಕೊಂಡು ಬಿಟ್ಟನವ.
ಅಪ್ಪನೊಂದಿಗೆ ಅವಗೆ ಅದೆಂಥ
ನಿಗೂಢ ಆಪ್ತತೆ ಇತ್ತೆಂದು
ಯಾರಿಗೂ ಗೊತ್ತಿಲ್ಲ.

* * *

ಶಿಶಿರದ ಎಲೆ

ಅದೊಂದು ರಾಸಾಯನಿಕ ಸಮೀಕರಣವಷ್ಟೆ
ಎಂದು ಹೇಳುತ್ತಾರವರು
ಸೂರ್ಯನ ಉರಿಬಿಸಿಲು ತಾಕಿ
ಮತ್ತಾ ಜೀವದ್ರವವ ಸ್ರವಿಸುವ
ಮಾರುತನು ಸೋಕಿ ಆದ ನಿರ್ಮಿತಿ ಅದು ಎಂದು.

ಯಾರೂ ತಡೆಯಲಾಗದ
ಕೇವಲ ಆಗಮನ ನಿರ್ಗಮನವಷ್ಟೆ
ಆಗಿದ್ದೀತು ಅದು.
ಶತಶತಮಾನಗಳಿಂದ ಸೂರ್ಯನು
ಹಸಿರು ಜೀವ ಕೋಶಗಳ ಕಣಕಣದ ಮೇಲೆ
ಅಂಕಿಸಿರುವ ಅದೇ ಕ್ರೂರ ಸಂದೇಶ ಮುದ್ರೆ.

ಇಷ್ಟಾದರು ನೆತ್ತರು ನಾನಾ ವರ್ಣಗಳಲಿ
ಅರಳುವ ಕಾಲವೊಂದಿಹುದು
ನಗರದೆಲ್ಲ ಹುಡುಗಿಯರು ಒಟ್ಟಾಗಿ ಸೇರಿದರು
ಅಷ್ಟೆಲ್ಲ ಬಣ್ಣ ಬಣ್ಣದ ಸ್ಕರ್ಟುಗಳ
ಪ್ರದರ್ಶಿಸಲಾರದಂಥ ಕಾಲವದು.

ಆದರೆ ಬಣ್ಣಗಳು ಕೂಡ
ಒಂದು ವಿಧದ ವ್ಯಥೆ ಎಂಬುದ
ನಾವು ತಿಳಿದಿಲ್ಲವೆ ?
ನೆಲದ ಕಡುಗದ್ದಲವು
ತನಗೆ ಸೋಕಿಯೆ ಇಲ್ಲವೆಂದು
ಯಾರೊಬ್ಬರು ಉದ್ವೇಗದಿಂದ

ಸೋಗು ಹಾಕುವಾಗಲೂ
ಹದಿಹರೆಯದ ವೇಷಗಳು
ಹಳೆಯ ಮಸುಕು ನೆನಪುಗಳ ಹೊತ್ತು
ಕಳಚಿ ಬೀಳುವುದ ನಾವು ಕಂಡಿಲ್ಲವೆ ?

ಸೂರ್ಯನ ಆ ಬಿಸುಪು
ನಿಧ ನಿಧಾನವಾಗಿ ಮಸುಳುತ್ತದೆ
ನಾಗರನ ನಿಷ್ಕರುಣ ಬುಸು ಬುಸು
ನಿನ್ನ ನರನಾಡಿಗಳಲ್ಲಿ ದನಿಗುಡುತ್ತದೆ
ತಣ್ಣನೆಯ ಕ್ರೌರ್ಯದೊಂದಿಗೆ
ನೀನು ಕೊಂಬೆಯಿಂದ ತೊಟ್ಟು ಕಳಚಿ
ನೆಲಕ್ಕೆ ಉದುರುತ್ತಲೆ
ನಿನ್ನೊಳೆಂದಿನಿಂದಲೂ ಮನೆ ಮಾಡಿರುವ
ಸಂತವಿಸಲಾಗದ ನಿನ್ನ ನರಳಿಕೆಯದುವು
ಒಮ್ಮೆಗೇ ಗರಿಗೆದರಿ ಹಾರುತ್ತದೆ
ನಿನ್ನೊಳಿದ್ದ ಜೀವ ಸತ್ವಗಳು
ಮತ್ತೆ ನೆಲವನಪ್ಪುತ್ತವೆ.

* * *

ಕವಿ ಮತ್ತು ಮೌನ

ಶಬ್ದಗಳು ಶಬ್ದಗಳೊಂದಿಗೆ
ಪಿಸುಗುಟ್ಟುತ್ತವೆ
ಕೈಗೆ ಕೈ ಚಾಚುತ್ತವೆ
ಒಂದನ್ನೊಂದು ಚುಂಬಿಸುತ್ತವೆ
ಪರಸ್ಪರ ಮುದ್ದಿಸುತ್ತವೆ
ಆಲಿಂಗಿಸುತ್ತವೆ ಕೂಡ.
ಶಬ್ದದಿಂದಲೆ ಚಂದಿರನು ಮೂಡುವನು
ಸುಳಿಗಾಳಿ ಸುಳಿಯುವುದು
ಗಿಡ ಮರಗಳಲಿ ಹೂಗಳರಳುವುವು
ತೆನೆಗಳ- ಹಾಲು ತುಂಬುವುವು
ನದಿಗಳು ಧಾವಿಸುವುವು ಸಮುದ್ರದತ್ತ.

ಆಗಸದ ಆಗಾಧ ಕತ್ತಲಿನಲ್ಲಿ
ತಾರೆಗಳು ಹೊಳೆಯುವುವು
ಅಂಧರ ಕಣ್ಣುಗಳಲ್ಲಿ ಮತ್ತೆ
ಬೆಳಕು ಚಿಮ್ಮುವುದು
ಶಬ್ದದಲಿ ತುಂಬಿಹುದು
ಜಗತ್ತಿನೆಲ್ಲ ವರ್ಣವೈಭವ
ಅದರೆಲ್ಲಾ ಒಡಕು ದನಿಗಳು.
ಶಬ್ದದಲಿ ಇಹುದು
ಜಗದೆಲ್ಲ ಸ್ಪರ್ಶ
ಅಪಾರ ಜೀವರಾಶಿಗಳ
ಗಂಧಸಮಸ್ತ, ಮತ್ತವುಗಳ
ಅಕಾರಣ ಅಳಲುಗಳು.
ಕವಿಯಾದರೊ ಕೈ ಮುಗಿದು

ತಲೆಬಾಗಿ ಮೌನದಲೆಂಬಂತೆ
ಅವುಗಳಿಗೆ ಕೇವಲ ಕಿವಿಗೊಡುವನು.

ಮಹುಲ ಪುಷ್ಪವದು
ತೊಟ್ಟು ಕಳಚಿ ತನ್ನ
ಧೂಳಿನ ಹಾಸಿಗೆ ಬಿದ್ದಂದು
ಪ್ರಿಯ ಕವಿಯೆ ಅಳಬೇಡ ನೀನು.
ಕನಸುಗಳಿಲ್ಲ, ವೀಣೆಗಳಂತು
ಇಲ್ಲವೇ ಇಲ್ಲ
ಅದೇ ಬಿಳಿಚಿದ ಮೊಗದ ಅನಾಥ ಬೆಳಗು
ಮತ್ತದೊ ಹೂ ಬೀಳುವ ಪ್ರತಿ ಹಂತದಲ್ಲೂ
ವ್ಯಥೆ ತಟ್ಟಿದಾಗೆಲ್ಲಾ ಜೊತೆಗಿರುವುದು.

ಭೋರಿಡುವ ಮಳೆ ತಾನು
ಹೃದಯದಾಗಸವ ಭೇದಿಸುತೆ
ಧಮನಿ ಧಮನಿಗಳಲ್ಲಿ ವ್ಯಥೆಯ ಹೊನಲಿಗೆ
ಅಣೆಕಟ್ಟೆಗಳ ಕಟ್ಟಿದಂದು
ಪ್ರಿಯ ಕವಿಯೆ ಮೌನವಹಿಸು.
ಕುಸುಮಗಳು ಸೊರಗಿ ನೆಲಕೆ ಬಿದ್ದಂದು
ಅನಾಥ ಶಿಶುವೊಂದು ಕನಸು ಕಂಡು
ಕತ್ತಲ ರಾತ್ರಿಯಿಡೀ ಅಳುತಿರಲು
ಆಘಾತಗೊಂಡ ಗಾಳಿ
ನಿನ್ನ ಕಿಟಕಿಯಬಳಿ ಗೋಳಿಟ್ಟಾಗ
ಆಯಾಸಗೊಂಡ ಗುಬ್ಬಚ್ಚಿ
ಆಗಸದಲ್ಲಿ ಪುರ್ರೆಂದು ಹಾರಿ ಮರೆಯಾದಾಗ
ಪ್ರಿಯ ಕವಿಯೆ ಮೌನ ವಹಿಸು.
ಆದಿತ್ಯನ ಅನಂತ ಪಥಗಳಲಿ.

ಕತ್ತಲೆಯ ಆಗಾಧ ಪಾತಾಳ ಕೂಪದಲಿ
ಆತ್ಯಂತಿಕ ಅಳಲಿಗೆ
ಹೆಸರಿರದ ವೇದನೆಗೆ
ಶಬ್ದವೆಲ್ಲಿದೆ ಹೇಳು ಪ್ರಿಯ ಕವಿಯೆ
ಮಹುಲ ಪುಷ್ಪ ತಾನು
ತೊಟ್ಟು ಕಳಚಿ ನೆಲಕ್ಕೆ ಬೀಳುತ್ತದೆ
ಶಬ್ದವೊಂದನು ಆಡದೆಯೆ.

* * *

ಚುನಾವಣೆ

ರಣಗುಡುವ ಬಿಸಿಲಲ್ಲಿ ಅಪೂರ್ವ
ಇಂಚರಗಳನರಸುತ್ತ ಸಾಗಿ ಬರುವುದು
ನಮ್ಮ ಜೀಪು ನಿಮ್ಮೂರಿಗೆ.
ಅವರವರ ಸ್ವಂತದ ವೇದನೆಗಳ
ಗೋಳುಕರೆಗಳ ಗೊಂದಲಗಳ ನಡುವೆ
ಒಂದೆರಡು ತಣ್ಣನೆಯ ಸಂತಸದ
ಕ್ಷಣಗಳನು ನೆಲೆಗೊಳಿಸುವಾಕಾಂಕ್ಷೆಯಿಂದ
ತೆವಳುವುದು ಜೀಪು ನಿಮ್ಮೂರಿಗೆ

ನಮ್ಮ ಕ್ಷುದ್ರ ಬಯಕೆಗಳೊ
ಚಾಣಾಕ್ಷ ತಂತ್ರಗಳೊ ಭಿತ್ತಿ ಪತ್ರಗಳೊ
ಇಲ್ಲ ಚಿಹ್ನೆಗಳೊ, ಬೆಣ್ಣೆಮಾತುಗಳೊ ಅಥವಾ
ಕರಪತ್ರಗಳೊ ಮುಟ್ಟಲಾರವು ನಿಮ್ಮನೆಂದಿಗೂ.
ಅದೇಕೆನೆ ನಿಮ್ಮೆಲ್ಲರ ವೇದನೆಯು
ಚಕ್ರಾಧಿಪತ್ಯಗಳ ಮೀರಿಹುದು.

ನಮ್ಮ ಬಿಳಿಚಿದ ಮೊಗದ ಮೇಲೆ
ಮೂಡಿರುವ ಮೌನ ಚಿತ್ರಗಳ
ನೀವು ಗ್ರಹಿಸುತಿದ್ದಂತೆ
ನಿಮ್ಮ ಹೃದಯದಲಿ ತಂಪೆನಿಪ
ಮೊಮ್ಮಕ್ಕಳುದಯಿಸುವರು.

ಇಲ್ಲಿಯ ಮಹಾನ್ ಪ್ರೇರಕಗಳು
ತೀರ ಅಲ್ಪ ವಸ್ತುಗಳೆ
ಮತ್ತವೇನಂಥ ಗುಟ್ಟಿನವು ಅಲ್ಲ
ಅಗ್ಗದ ಪ್ಲಾಸ್ಟಿಕ್, ಅದಕ್ಕಿಂತ ಅಗ್ಗದ ನೈಲಾನ್‌ಗಳು

ಸೂರ್ಯನನು ಮರೆಮಾಡಲು ಕಪ್ಪು ಕನ್ನಡಕಗಳು.
ಹಸಿವಿನಲ್ಲಿ ಒಂದು ಹೆಜ್ಜೆ
ಆತ್ಮದಲ್ಲಿ ಇನ್ನೊಂದು
ಆಯ್ಕೆಯ ಸಂಕಷ್ಟ ಮಾತ್ರ ನಿಮ್ಮದೇ.

* * *

ಕಮಲಾದಾಸ್ ಅವರ ಕವಿತೆಗಳು

ಕಮಲಾದಸ್ (ಜನನ 1934)

ಮಲೆಯಾಳಿ ಹಾಗೂ ಇಂಗ್ಲೀಷ್, ಭಾಷೆಗಳಲ್ಲಿ ಬರೆಯುತ್ತಿರುವ ಕೇರಳದ ಖ್ಯಾತ ಕವಯಿತ್ರಿ. ಮಾಧವಿ ಕುಟ್ಟಿ' ಎಂಬ ಹೆಸರಿನಲ್ಲಿ ಮಲೆಯಾಳಿಯಲ್ಲಿ ಕೃತಿರಚನೆ ಮಾಡಿದ್ದಾರೆ. "ಅವರ ಕಾವ್ಯ, ಭಗ್ನ ಪ್ರೇಮ ಮತ್ತು ಭಾವನಾವಶತೆಯ ಸಾರ್ಥಕತೆಯ ನಡುವೆ ಸಿಕ್ಕಿಕೊಂಡು ಜರ್ಜರಿತವಾಗುತ್ತಿರುವ ಭಾರತೀಯ ಮಹಿಳೆಯ ಮನಃಸ್ಥಿತಿಯನ್ನು ಬಿಂಬಿಸಲಾಗುತ್ತಿದೆ." ಎಂದು ಅಭಿಪ್ರಾಯಪಡಲಾಗಿದೆ.

೧೯೮೫ ರಲ್ಲಿ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಿದೆ.

ಅವರ ಕೃತಿಗಳು

1. ಮಾನಸ (1975)
2. Alphabet of Lust (1976)
3. Summer in Calcutta (1965)
4. The old playhouse and othe poems (1973)
5. Descendents (1967)
5. Stranger line (1977)

1990 ರಲ್ಲಿ ಇಸ್ಲಾಂಗೆ ಮತಾಂತರ ಹೊಂದಿ ಕಮಲಾ ಸುರೈಯಾ ಆದರು. ಅವರದು ದಿಟ್ಟ ಹಾಗೂ ನಿರ್ಭಿಡೆಯ ಬರವಣಿಗೆ.

ಶಬ್ದಗಳು

ನನ್ನ ಸುತ್ತು ಮುತ್ತೆಲ್ಲ
ಶಬ್ದಗಳು ! ಶಬ್ದಗಳು! ಶಬ್ದಗಳು!

ಮರದ ಎಲೆಗಳ ಹಾಗೆ ಅವು
ನನ್ನ ಮೇಲೆ ಮೂಡುತ್ತವೆ
ನಿಧ ನಿಧಾನವಾಗಿ ನನ್ನ
ಅಂತರಾಳದೊಳಗಿಂದ ಅಂಕುರಿಸುವುದ
ಅವು ಎಂದಿಗೂ ನಿಲ್ಲಿಸಿದ ಹಾಗಿಲ್ಲ
ಆದರೆ ಶಬ್ದಗಳಾದರೊ ಪೀಡೆಗಳೆಂದೆ ನನ್ನೆಣಿಕೆ.
ಶಬ್ದಗಳ ಬಗೆಗೆ
ಎಚ್ಚರವಿರಲಿ
ಅವು ಏನೂ ಆಗಬಹುದು
ಧಾವಿಸುವ ಹೆಜ್ಜೆಗೆ
ತಡೆಯೊಡ್ಡುವ ಹಳ್ಳವಾಗಬಹುದು!
ಕಾಣುವ ಕಣ್ಣಿಗೆ ಕ್ಷಮತೆಗುಂದಿಸುವ
ರುದ್ರ ತೆರೆಗಳ ಕಡಲಾಗಬಹುದು!
ಸುಡುವ ಗಾಳಿಯ ಬಿರುಬಾಗಬಹುದು
ನಿನ್ನ ಹೃದಯದ ಗೆಳೆಯನ ಕೊರಳ
ನಿರ್ದಯದಿ ಕತ್ತರಿಸಲು ಮುನ್ನುಗ್ಗುವ
ಕತ್ತಿಯಾಗಬಹುದು.
ಶಬ್ದಗಳೆಂದರೆ ಪೀಡೆಗಳಂತೆ
ಮರದ ಮೇಲಿನ ಹಸಿರು
ಎಲೆಗಳ ಹಾಗೆ ಅವು ನನ್ನ ಮೇಲೆ
ಮೂಡುತ್ತವೆ. ಅಂತರಂಗದ ಆಳದಿಂದೆಲ್ಲೊ
ನಿಶ್ಯಬ್ದದಿಂದ ಹೊರಹೊಮ್ಮುವುದ
ಎಂದಿಗೂ ಅವು ನಿಲ್ಲಿಸಿದ ಹಾಗಿಲ್ಲ

* * *

ಮನವಿ

ನಾನು ಇನ್ನಿಲ್ಲವಾದರೆ
ನನ್ನ ಮೈಯ ಮಾಂಸ
ಮತ್ತು ಮೂಳೆಗಳನು
ಎಸೆದು
ಬಿಡಬೇಡ ದೂರಕೆ.
ಅವುಗಳನ್ನೆಲ್ಲ
ಒಟ್ಟುಗೂಡಿಸಿ
ರಾಶಿಯೊಂದನು
ನೀ ರಚಿಸು .
ಈ ಭೂಮಿಯಲಿ
ಬದುಕಿಗಿದ್ದ ಮೌಲ್ಯ
ಎಂಥೆಂಬುದನ್ನು
ತಮ್ಮ ಗಂಧದ ಮೂಲಕ
ಸಾರಿ ಹೇಳಲಿ ಇವು.

* * *

ಪಾರಿವಾಳಗಳು

ನಗರದ
ಈ ಜ್ವರ ಹಿಡಿದ ಬೀದಿಗಳಲಿ
ಕಾದ ಧೂಳು
ತುಂಬಿದೆ.
ನನ್ನ
ಹಗಲು ಗನಸುಗಳ
ತಂತುಗಳಲಿ
ಅಲ್ಲಾಡೆದೆಯ ಕುಳಿತಿವೆ
ಈ ಪಾರಿವಾಳಗಳು.
ತಪ್ತ ರೋಷದಲಿ
ಕೆಂಪಾದ ರವಿ
ಮತ್ತೆ
ಹೊಂಬಣ್ಣ ತಾಳಿ
ಊದುತ್ತಾ ಹೋಗುವನು
ಮಟ ಮಟ ಮಧ್ಯಾಹ್ನದ
ನನ್ನ ಮತ್ತ ಕನಸುಗಳಲಿ
ಬಿಸಿಲ ಬೆಳ್ಳಿಯ
ಎಳೆಗಳು
ಸಿಡಿದೊಡೆದು
ಚುಚ್ಚುತ್ತವೆ.

* * *

ಹೆಸರಿನ ಗೊಡವೆ

ನನಗೊಂದು ಹೆಸರುಂಟು
ಅನುಕೂಲಕ್ಕಾಗಿ ಯಾರೋ ಆಯ್ಕೆ ಮಾಡಿದ್ದ
ಆ ಹೆಸರು ಮೂರು ದಶಕಗಳವರೆಗೂ
ನನ್ನದಾಗಿತ್ತು . ಆದರೆ
ನಿನ್ನ ಹೆಸರನು ಕಳಂಕಿತಗೊಳಿಸದಿರು
ಎಂದು ನೀನು ಹೇಳುವಾಗ ಮಾತ್ರ
ನನಗೆ ನಗಬೇಕೆನಿಸುತ್ತದೆ.
ಕಾರಣ ನಾನೇ ಬಾಳಬೇಕಾದ
ಬದುಕೊಂದು ನನಗಿಹುದು
ಹೆಸರಿರದ ನನ್ನ ಒಂದೊಂದು
ರಕ್ತಕಣಕ್ಕೂ ಅದರದೆ ಆದ ಬದುಕಿದೆ
ನನಗಾಗಿ ತನ್ನನೇ ತೆತ್ತುಕೊಂಡು
ತನ್ನ ಆಪ್ತ ಕ್ಷಣಗಳಲಿ ನನ್ನನ್ನು
ಯಾವ ಹೆಸರಿಂದಲೂ ಕರೆಯಲೊಲ್ಲದ
ನನ್ನವನನ್ನು ಸಂಧಿಸಲು ಹೋದೆಡೆಯಲ್ಲೆಲ್ಲ
ಈ ನನ್ನ ಇನಿತೊಂದು ಇನಿದಾದ ಹೆಸರು
ತನ್ನ ಮೂಗ ತೂರಿಸಲೇಕೆ?
ನಗರದ ಧೂಳು ತುಂಬಿದ ಬೀದಿಗಳಲ್ಲಿ
ಹಳೆಯ ಹೊತ್ತಗೆಗಾಗಿ
ಹಳೆಯ ಕಲಾಕೃತಿಗಳಿಗಾಗಿ ಅಥವಾ
ಜುಮ್ಮೆದಟ್ಟಿಸುವಂಥ ಹೊಸ ಅನುಭವಗಳಿಗಾಗಿ
ನಾನು ಅಲೆದಾಡುತಿರುವಾಗ
ಇದು ತಲೆಹಾಕಬೇಕು ಏಕೆ?
ನನಗೆ ಗಂಟು ಬಿದ್ದಿರುವ
ಈ ಇನಿದಾದ ಹೆಸರನ್ನು, ಏನೊಂದೂ

ಅರ್ಹತೆಯಿಲ್ಲದೆ ಪಡೆದ ಈ ಮೆಡಲನ್ನು
ನನ್ನದೆಲ್ಲವೂ ಜೀವಂತವಾಗಿ
ಹೊತ್ತಿ ಉರಿಯುತಿರುವಂದು
ನಾನೇಕೆ ನೆನೆಯಲಿ?
ನಾನೇಕೆ ಹೊಂದಿರಲಿ ಈ ಸೊಗಸಿನ ಹೆಸರ?
ನೀ ಹೇಳುತಿರುವುದಾದರೊ ಅತಿ ಕ್ಷುದ್ರ.
ಈ ಬದುಕೆಂಬ ಅಮೂಲ್ಯ ವರವ
ಎಲ್ಲಕ್ಕಿಂತ ಹೆಚ್ಚು ಪ್ರೀತಿಸುವ ನಾನು
ಈ ಹೆಸರ ಹೆಣವನು ಹೊತ್ತು
ಅದರ ಭಾರಕೆ ತತ್ತರಿಸುತ್ತ
ಕೆಳಗೆ ಬೀಳಲೆ ?

* * *

ಇನ್ನಾರದೋ ಹಾಡು

ಊರ ಬಾವಿಯ ಬಳಿಸೇರಿರುವ
ಯುವತಿಯರ ಹಾಗೆ ಎಲ್ಲರೂ
ಒಮ್ಮೆಗೇ ಒಟ್ಟಿಗೆ ದನಿ ಎತ್ತರಿಸಿ
ಗಳಹುತಿರುವ ಕೋಟಿ ಕೋಟಿ ಮಂದಿ ನಾನು !

ಯಾರಿಗಾದರೂ ಒಂದು ನೆನಪಾಗಿ
ಮೊಳೆದೋರಲೆಂದು ಎಂದಾದರಾಗಲಿ
ಎಸೆದು ಬಿಡಬೇಕಾದ,
ಸಿಡುಬು ಕಲೆಗಳು ಇಡಿಕಿರಿದ
ಒಣಗುತಿರುವ ಬೀಜರೂಪಿ ಕೋಟಿ ಕೋಟಿ ಮೃತ್ಯು ನಾನು!

ಒಂದೊಂದೂ ರಕ್ತದುಂಬಿ
ದಷ್ಟಪುಟ್ಟವಾಗಿ ಬೆಳೆದು
ತನ್ನ ಉದ್ದನೆ ಉಗುರುಗಳ ಕೈ ಚಾಚಿ
ಶೂನ್ಯಗಾಳಿಯನು ಗಾಯ ಗೊಳಿಸಲಿಹ
ಕೋಟಿ ಕೋಟಿ ಹುಟ್ಟು ನಾನು

ಇನ್ನಾರದೋ ಹಾಡಿಗೆ
ಹರಳ ಮಣಿಗಳ ಹಾಗೆ
ಕೋದುಕೊಂಡಿರುವ ಕೋಟಿ ಕೋಟಿ ಮೌನ ನಾನು !

* * *

ಹೋಚಿಮಿನ್ ಅವರ ಕವಿತೆಗಳು

ಹೋಚಿಮಿನ್ (Hochiminh) (1890 - 1969)

ಇಪ್ಪತ್ತನೇ ಶತಮಾನದ ಅತ್ಯಂತ ಪ್ರಭಾವಿ ರಾಜಕೀಯ ನಾಯಕರಲ್ಲೊಬ್ಬರು. ವಿಯಟ್ನಾಮ್ ನ ರಾಷ್ಟ್ರೀಯ ನಾಯಕ ಮತ್ತು 1954ರಿಂದ 69 ರ ತನಕ ಉತ್ತರ ವಿಯತ್ನಾಮ್ ನ ಅಧ್ಯಕ್ಷರಾಗಿದ್ದವರು. 1911 ರಲ್ಲಿ ವಿಯಟ್ನಾಂ ಬಿಟ್ಟವರು ಫ್ರಾನ್ಸ್, ಅನಂತರ ಮೊದಲನೇ ಮಹಾಯುದ್ಧದ ಸಮಯದಲ್ಲಿ ಲಂಡನ್ ಮತ್ತು ಅಮೇರಿಕಾ ಗಳಲ್ಲಿ ಇದ್ದರು. ಮಹಾಯುದ್ಧದ ಕೊನೆಗೆ ಫ್ರಾನ್ಸ್‌ಗೆ ತೆರಳಿ ಅಲ್ಲಿ ಫ್ರಾನ್ಸ್ ನ ಸಮಾಜವಾದಿ ಚಳುವಳಿಯಲ್ಲಿ ತೊಡಗಿಸಿಕೊಂಡರು. ಫ್ರಾನ್ಸನ ಕಮ್ಯುನಿಷ್ಟ್ ಪಕ್ಷದ ಸ್ಥಾಪಕ ಸದಸ್ಯರಲ್ಲೊಬ್ಬರಾದರು (1920). ಮುಂದೆ ಪೂರ್ವ ಏಷ್ಯಾದಲ್ಲಿ ವಿಯತ್ನಾಮೀ ಕ್ರಾಂತಿಕಾರಿಗಳನ್ನು ಸಂಘಟಿಸಿ ಇಂಡೋಚೀನಾದ ಕಮ್ಯುನಿಷ್ಟ ಪಕ್ಷವನ್ನು ಸ್ಥಾಪಿಸಿದರು. ಮುಂದೆ ಅದೇ ವಿಯಟ್ನಾಮೀ ಕಮ್ಯುನಿಸ್ಟ್ ಪಕ್ಷವಾಯಿತು. ಅಲ್ಲಿಯೇ ತರಬೇತಿ ಸಂಸ್ಥೆಯನ್ನು ಸ್ಥಾಪಿಸಿ, ಮಾರ್ಕ್ಸ್‌ವಾದ, ಲೆನಿನ್‌ವಾದ ಮತ್ತು ಕನ್‌ಫ್ಯೂಷಿಯನ್‌ವಾದಗಳ ವಿಶಿಷ್ಟ ಸಾಮರಸ್ಯವನ್ನು ಬೋಧಿಸಿದರು. ಅದು ಅನೇಕ ವಿಯತ್ನಾಮೀ ವಿದ್ಯಾರ್ಥಿಗಳನ್ನು ಆಕರ್ಷಿಸಿತು. 1930ರಲ್ಲಿಮಾಸ್ಕೋ ಮತ್ತು ಚೈನಾದಲ್ಲಿದ್ದರು. ಎರಡನೇ ಮಾಹಾಯುದ್ಧ ಪ್ರಾರಂಭವಾದ ಮೇಲೆ ಅಂತಿಮವಾಗಿ ವಿಯಟ್ನಾಮಿಗೆ ಹಿಂತಿರುಗಿದರು. ಅಲ್ಲಿ ವಿಯತ್ನಾಮೀ ಸ್ವಾತಂತ್ರ್ಯ ಚಳುವಳಿಯನ್ನು ಸಂಘಟಿಸಿ ಜಪಾನೀ ಸೈನ್ಯದೊಂದಿಗೆ ಯುದ್ಧ ಮಾಡಲು ಗೆರಿಲ್ಲಾ ಸೈನ್ಯ ಸ್ಥಾಪಿಸಿದರು. 1945ರಲ್ಲಿ ವಿಯತ್ನಾಮ್ ಗಣರಾಜ್ಯ ಘೋಷಿಸಿ ಅದು ಒಕ್ಕೂಟದಲ್ಲಿ ಸ್ವಾಯತ್ತ ರಾಜ್ಯವಾಗಿರುವುದಕ್ಕೆ ಒಪ್ಪಿದರು. ಮುಂದೆ ಭಿನ್ನಾಭಿಪ್ರಾಯಗಳು ತಲೆದೋರಿ 1954ರಲ್ಲಿ ವಿಯಟ್ನಾಂ ವಿಭಜನೆಯಾಗಿ ಅವರು ಉತ್ತರ ವಿಯಟ್ನಾಂನ ಮೊದಲ ಅಧ್ಯಕ್ಷರಾದರು. ವಿಯಟ್ನಾಮ್ ಗಳನ್ನು ಒಂದುಗೂಡಿಸಬೇಕೆಂಬ ಅವರ ಉದ್ದೇಶ ಆಗ ಈಡೇರಲಿಲ್ಲ. ಮುಂದಿನ ದಿನಗಳಲ್ಲಿ ಉತ್ತರ ವಿಯಟ್ನಾಂನ ಅಧ್ಯಕ್ಷ ರಾಗಿದ್ದುಕೊಂಡೇ ದಕ್ಷಿಣ ವಿಯತ್ನಾಮಂನಲ್ಲಿ ಗೆರಿಲ್ಲಾ ಚಳುವಳಿಯನ್ನು ಸಂಘಟಿಸಿದರು.(ರಾಷ್ಟ್ರೀಯ ವಿಮೋಚನಾ ಚಳುವಳಿ ಅಥವಾ ವಿಯಟ್‌ಕಾಂಗ್)

ತಮ್ಮ ಈ ಹೋರಾಟದ ಬದುಕಿನಲ್ಲಿ ಹೋಚಿಮಿನ್ ಅವರು ಬಹುಕಾಲ ಸೆರೆವಾಸವನ್ನು ಅನುಭವಿಸಬೇಕಾಯಿತು. ಹಾಗೆ ಸೆರೆವಾಸವನ್ನು

ಅನುಭವಿಸುತ್ತಿರುವಾಗ ತಮ್ಮ ಹೃದಯದ ಭಾವನೆಗಳಿಗೆ ಕಾವ್ಯದ ಮೂಲಕ ಅಭಿವ್ಯಕ್ತಿ ನೀಡಿದರು. ಅವೆಲ್ಲವೂ Prisen Diary ಡೈರಿ ಎಂಬುದರಲ್ಲಿ ಸಂಕಲಿತವಾಗಿವೆ. ಇದು ಕವಿಯಾಗಿ ಅವರ ಸೂಕ್ಷ್ಮ ಸಂವೇದೀ ಹೃದಯವನ್ನು ತೆರೆದಿಡುತ್ತದೆ.

ಇಲ್ಲಿರುವ ಪದ್ಯಗಳೆಲ್ಲವೂ ಅವರ ಜೈಲುವಾಸದ ಅನುಭವದ ಫಲಗಳು.

ದುರ್ಗಮವೀ ಬದುಕಿನ ದಾರಿ

ಬಾನೆತ್ತರದ ಗಿರಿ ಶಿಖರದ ಮೇಲೆ
ಕಡಲಾಳದ ಕಂದರಗಳಲಿ
ಸಂಚರಿಸುವಾಗ ತೋರದ
ಆಪತ್ತಿಗಿಂತಲು ಮಿಗಿಲಾದ
ಆಪತ್ತು
ಸಮನೆಲದ ಮೇಲೆ
ಹೀಗೆ ಧುತ್ತನೆ ಎರಗೀತೆಂಬ
ಅರಿವಿರಲಿಲ್ಲ ನನಗೆ !
ಗಿರಿಯ ಮೇಲೆ
ವ್ಯಾಘ್ರನೆದುರಾದಾಗ ಕೂಡ
ಆಗಿರಲಿಲ್ಲ ನನಗೆ
ಕಿಂಚಿತ್ತು ವ್ಯಾಘಾತ.
ನೆಲದ ಮೇಲೆ
ನರರ ನಡುವೆ ನಿಂತಾಗ
ನೂಕಿದರು ನನ್ನನ್ನು
ಸೆರೆಮನೆಗೆ !

* * *

ವಿಯತ್ನಾಂನಲ್ಲಿ ಬಂಡಾಯ

ಧಿಕ್ಕಾರವು ದಾಸ್ಯಕೆ !
ದಾಸ್ಯಕಿಂತ ಸಾವು ಲೇಸು.
ನನ್ನ ದೇಶದೆಲ್ಲೆಡೆ
ಹೆಮ್ಮೆಯಿಂದ ಹಾರುತ್ತಿವೆ
ಬಂಡಾಯದ ಬಾವುಟ !
ಇಂಥ ಪರ್ವಕಾಲದಲ್ಲಿ
ಇಲ್ಲಿ ನಾನು ಬಂಧಿತ.
ಅಯ್ಯೋ ಎಂಥ ದುರ್ವಿಧಿ !
ನಾನು ಕೂಡ ಮುಕ್ತನಾಗಿ
ನಡೆವಂತಿರೆ ಎಷ್ಟು ಚೆನ್ನ !

* * *

ಶೀತಲ ರಾತ್ರಿ

ಹೇಮಂತದ ಈ ಕೊರೆಯುವ
ಚಳಿರಾತ್ರಿಯಲ್ಲಿ
ನನಗಾದರೊ
ಹಾಸಲಿಲ್ಲ, ಹೊದೆಯಲಿಲ್ಲ
ನನಗೆ ನಾನೆ
ಮುದುರಿಕೊಳ್ವೆ
ಚಳಿಯ ನೀಗಲು.
ಒಮ್ಮೆ ಕೂಡ
ರೆಪ್ಪೆ ಮುಚ್ಚಲಾಗಲಿಲ್ಲವು!
ಹಿಮಕಿರಣನ
ಹಾಲ್‌ಬೆಳಕದು
ಬಾಳೆ ಎಲೆಯ ಮೇಲೆ ಬಿದ್ದು
ಹೆಚ್ಚುತಲಿದೆ
ಚಳಿ ಇನ್ನೂ !
ಕಿಟಕಿ ಕಂಬಿಯಾಚೆ
ಕಾಣುತ್ತಿದೆ ಕೃತ್ತಿಕೆಯ ಪುಂಜ!

* * *

ನಸುಕಿನಲ್ಲಿ ಪಯಣ

೧

ಮುಂಜಾವದ ಕೋಳಿ
ಒಮ್ಮೆ ಮಾತ್ರ ಕೂಗಿದೆ
ರಾತ್ರಿ ಇನ್ನೂ ಮುಗಿಯದಿದೆ
ದೂರದಲ್ಲಿ
ಗಿರಿಯಮೇಲೆ
ತಾರೆಯೊಡನೆ ತಂಗದಿರನು
ಸಾಗುತಿಹನು
ದೂರ ಪಯಣಕೆ.
ಸಜ್ಜಾಗಿಹನಿದೊ
ಯಾತ್ರಿಕನು.
ಮುಖಕೆಲ್ಲಕು
ಮತ್ತೆ ಮತ್ತೆ
ಅಪ್ಪಳಿಸಿದೆ
ಹೇಮಂತದ ಹಿಮವು!

೨

ಪೂರ್ವ ದಿಗಂಗನೆ ಮೊಗ
ಕೆಂಪೇರಿದೆ
ಈ ಹೊಚ್ಚನೆ ಹೊಸ ಹಗಲಲಿ!
ನಿಶೆಯ ಕೊನೆಯ ತೆರೆಯು ತಾನು
ಪೂರ್ಣ ಸರಿದಿದೆ
ಬಿತ್ತರದ ಬಾನೆದೆಯಲಿ
ಉಲ್ಲಾಸದ
ನಸುಬಿಸುಪಿನ
ಹೊಸಗಾಳಿಯು ಬೀಸಿದೆ

ಹಾದಿಯಲ್ಲಿ ಹೆಜ್ಜೆ ಸವೆಸಿ
ಸಾಗಿರುವವನ ಹೃದಯದಲ್ಲು
ಹೊಮ್ಮುತ್ತಿದೆ
ಕಾವ್ಯದ ಆವೇಶ!

* * *

ಶರತ್ಕಾಲದ ಉತ್ಸವ

ಶರದದ ಈ ನಡುಗಾಲದಿ
ಬೆಳ್ಳಿಯ ಬೆಳಕನು ಎಲ್ಲೆಡೆ ಬೀರುತ
ದುಂಡು ಕನ್ನಡಿಯ ತೆರ
ತುಂಬು ತಿಂಗಳದು ಬೆಳಗುತಿದೆ
ಒಲವಿನ ಸತಿಸುತರೊಂದಿಗೆ
ಶರದುತ್ಸವದೊಳು ನಲಿಯುತಿರುವ
ಓ ಬಂಧುವೆ
ಬಂದೀಖಾನೆಯ ಬಂಧನದಲಿ
ಬೇಯುತಿಹ ನಮ್ಮಂಥವರ
ದುರ್ವಿಧಿಯನೊಮ್ಮೆ ನೆನೆ

೨

ಇಲ್ಲಿ ಸೆರೆಮನೆಯಲ್ಲಿ
ನಾವೂ ನಡೆಸಿದ್ದೇವೆ
ಶರತ್ಕಾಲದ ಉತ್ಸವವ
ಆದರೇನು
ಶರದದ ತಿಂಗಳೊಳು
ಮತ್ತೀ ತಂಗಾಳಿಯೊಳು
ಬೆರೆತಿದ ಅಳಲಿನ ಎಳೆಯೊಂದು
ಶರದದ ಬೆಳುದಿಂಗಳ ಮುಕ್ತವಿಹಾರ
ವಂಚಿತವಾದೀ ನನ್ನ ಹೃದಯ
ಆಕಾಶದ ಅಸೀಮ ಅವಕಾಶದಲಿ
ತುಂಬು ತಿಂಗಳ ಹಿಂದೋಡುತಿದೆ.

* * *

ಮುಸ್ಸಂಜೆ

ಹತಾಶ ಹಕ್ಕಿ ತಾ
ಹಾರಿಬರುತಿದೆ ನೆಲೆಯ ಬಯಸಿ
ಮರದೆಡೆಗೆ.
ಒಂಟಿ ಮೋಡವದು
ಆಗಸದ ಅನಂತದಲಿ ತೇಲುತಿದೆ.
ದೂರ ಬೆಟ್ಟದಲಿ
ಪುಟ್ಟಗುಡಿಸಿಲಲಿ
ಬಾಲೆಯೊಬ್ಬಳು
ರಾಗಿ ಬೀಸುತಿಹಳು !
ಅಲ್ಲೆ ಹತ್ತಿರದಿ
ಹೊತ್ತಿ ಉರಿಯುತಿದೆ
ಒಲೆಯ ಬೆಂಕಿಯದು ಕೆಂಪಗೆ !

* * *

ಸ್ವಗತ

ಹೇಮಂತದ
ಕೊರೆಯುವ ಚಳಿ ಇಲ್ಲದೆ
ವಸಂತದ ಹಿತ ಹರ್ಷವದೆಲ್ಲಿ
ದುರ್ವಿಧಿಗಳು ಎನ್ನನು
ಬಡಿದು ಕಡಿದು ಉಕ್ಕಾಗಿಸಿವೆ.
ನನ್ನ ನಿಶ್ಚಯವ
ನಿನ್ನೂ ಪಕ್ವವಾಗಿಸಿವೆ.

* * *

ಇನಿಯನ ಭೇಟಿ

ಸರಳಿನ ಈ ಕಡೆ ನಲ್ಲ
ಆ ಕಡೆ ನಲ್ಲೆ
ತೀರ ತೀರ ಸನಿಹ!
ಇಂಚುಗಳಷ್ಟೇ ದೂರ
ಆದರು
ಆಕಾಶ ಭೂಮಿಗಳಷ್ಟು ಅಂತರ!
ನಾಲಗೆ ಹೇಳದ್ದನ್ನು
ಕಣ್ಣು ಹೇಳುತಿವೆ!
ಮಾತಿಗು ಮುನ್ನ
ಎರಡೂ ಕಣ್ಣಲಿ ಧಾರೆ
ಎದೆಯನೆ ಕೊರೆಯುವ ಅತಿನಿಶಿತ ಧಾರೆ!

* * *

ಸಾವಿರ ಕವಿಗಳ ಕಾವ್ಯವನೋದಿ

ನಿಸರ್ಗ ಸೊಬಗನು ಬಣ್ಣಿಸಿ ತಣಿಯರು
ಹಿಂದಿನ ಆ ಕಬ್ಬಿಗರೆಲ್ಲ
ಅಲರನು, ಎಲರನು, ಹಿಮವನು, ಹೊಳೆಯನು
ಚಂದ್ರನ, ತಾರೆಯ, ಗುಡ್ಡವ ಬೆಟ್ಟವ
ಬಣ್ಣಿಸಿಹರು ಅವರೆಲ್ಲ !
ಇಂದಿನ ಕಾಲದ ಕಾವ್ಯವದೆಲ್ಲವು
ವಜ್ರಕಿಂತ ಕಠಿಣ ಆಗಲೆ ಬೇಕು.
ಕಬ್ಬಿಗರೆಲ್ಲರು ಮೇಲೆರಗುವ
ಕಲಿಗಳು ಆಗಲೆ ಬೇಕು !

* * *

ಮೋಡ ಕರಗಿದಂದು....

ಸೃಷ್ಟಿಯಲ್ಲಿ ಎಲ್ಲವೂ ಕ್ರಮಗತಿಯಲಿ ಅರಳುವುದು
ಇದುವೆ ನಿಯತಿಯ ನಿಯಮವು.
ನಿಡುಗಾಲದ ಮಳೆಯು ಕಳೆದು
ಇದಿಗೊ ಬಂದಿದೆ
ಸೊಗದ ಸೊಬಗಿನ
ಹಗಲಿದು!
ಒಂದೆ ಕ್ಷಣದಲಿ
ತಿರೆಯು ತೊಯ್ದಿಹ
ವಸನ ತೊರೆದು
ತೊಟ್ಟಿಳಾಗಲೆ ಹೊಳೆವ
ಹೊನ್ನಿನ ಹಚ್ಚಡ!
ಎಳೆ ಬಿಸಿಲಿಗೆ
ಸುಳಿಗಾಳಿಗೆ
ಸುಮಗಳರಳಿ ನಗುತಿವೆ!
ಎತ್ತರಕ್ಕೆ
ಬೆಳೆದು ನಿಂತಿಹ
ಮರದ ಕೊಂಬೆಗಳಲ್ಲಿ ಆಗಲೆ
ಹಕ್ಕಿ ಹಾಡನು ಹಾಡಿವೆ!
ಹಿಗ್ಗು ತುಂಬಿದೆ
ವಿಶ್ವದೆಲ್ಲೆಡೆ
ಅಂತೆ ಮನುಜನ ಹೃದಯದಿ!
ಕಹಿಯ ಹಿಂದೆಯೆ
ಸಿಹಿಯು ಕಾಂಬುದು
ಇದುವೆ ನಿಯತಿಯ ರೀತಿಯು 1

* * *

ಆಫ್ರಿಕನ್ ಕವಿತೆಗಳು

* ಗೇಬ್ರಿಯಲ್ ಒಕಾರ
* ವೋಲೆ ಸೋಯಿಂಕ
* ಬರ್ನಾರ್ಡ್ ಡ್ಯಾಡಿ
* ಚಿನುಅ ಅಚೆಬೆ

ಗೇಬ್ರಿಯಲ್ ಒಕಾರ (ಜನನ1921)

ನೈಜೀರಿಯಾದ ಈ ಕವಿ ಹುಟ್ಟಿದ್ದು ಪಶ್ಚಿಮ ನೈಜೀರಿಯಾದ ಬಮೌಂಡಿ (Bomoundi) ಎಂಬ ಊರಿನಲ್ಲಿ. ಕೇವಲ ಪ್ರೌಢ ವಿದ್ಯಾಭ್ಯಾಸ ಮಾಡಿ ಬುಕ್ ಬೈಂಡರ್ ಆಗಿ ಹಾಗೂ ಪತ್ರಕರ್ತರಾಗಿ ಕೆಲಸ ಮಾಡಿದರು. ನೈಜೀರಿಯನ್ ಟೈಡ್ ಎಂಬ ಪತ್ರಿಕೆ ನಡೆಸುತ್ತಿದ್ದರು. ಐರಿಷ್ ಕವಿ ಏಟ್ಸ್, ಜಿ. ಎಮ್ ಹಾಪ್‌ಕಿನ್ಸ್ ಮತ್ತು ಡಿಲಾನ್ ಥಾಮಸ್ ಮುಂತಾದ ಕವಿಗಳಿಂದ ರೂಪಕ ನಿರ್ಮಿತಿಯ ಪ್ರೇರಣೆ ಪಡೆದುಕೊಂಡರು. The voice (1964) ಎಂಬುದು ಅವರ ಕಾವ್ಯಾತ್ಮಕ ಕಾದಂಬರಿ. ಮಕ್ಕಳಿಗಾಗಿಯೂ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. 'Little snake and Little Frog ಎಂಬುದು ಅಂಥ ಒಂದು ಕೃತಿ. ನೈಜೀರಿಯನ್ ಸಂಸ್ಕೃತಿ ಸಾಹಿತ್ಯಕ್ಕೆ ನೀಡಿರುವ ಕೊಡುಗೆಯಿಂದಾಗಿ ಅವರೊಬ್ಬ ವಿಶಿಷ್ಟ ಕವಿ ಎಂದು ಗುರುತಿಸಲ್ಪಟ್ಟಿದ್ದಾರೆ.

ಒಂದಾನೊಂದು ಕಾಲದಲ್ಲಿ

ಮಗೂ
ಒಂದಾನೊಂದು ಕಾಲದಲ್ಲಿ
ಅವರು ಹೃದಯ ತುಂಬಿ ನಗುತ್ತಿದ್ದರು.
ಕಣ್ಣರಳಿಸಿ ನಗುತ್ತಿದ್ದರು.
ಆದರೆ ಈಗ ಅವರು ಕೇವಲ
ಹಲ್ಲು ಬಿರಿಸಿ ನಗುತ್ತಾರೆ
ಅವರ ಹಿಮಶೀತಲ ಕಣ್ಣುಗಳು
ನನ್ನ ಬೆನ್ನ ಹಿಂದಿನ ನೆರಳತ್ತ
ಹಡುಕುನೋಟ ಬೀರುತ್ತವೆ.

ನಿಜಕ್ಕೂ ಅದೊಂದು ಕಾಲವಿತ್ತು
ಜನ ಹೃತ್ಪೂರ್ವಕವಾಗಿ ಕೈ ಕುಲುಕುತ್ತಿದ್ದರು.
ಆದರೆ ಮಗೂ,
ಈಗದೆಲ್ಲ ಹೋಯಿತು.
ಈಗಲೂ ಅವರು ಕೈಕುಲುಕುತ್ತಾರೆ.
ಆದರೆ ಹೃದಯಶೂನ್ಯರಾಗಿ.
ಆಗ ಅವರ ಇನ್ನೊಂದು ಕೈ
ನನ್ನ ಖಾಲಿ ಜೇಬುಗಳನ್ನು
ತಡಕಾಡುತ್ತಿರುತ್ತದೆ.

ನಿಮ್ಮ ಮನೆಯೆಂದೆ ತಿಳಿಯಿರಿ
'ಇನ್ನೊಮ್ಮೆ ಬನ್ನಿ' ಎಂದೆಲ್ಲ
ಹೇಳುತ್ತಾರವರು,
ಹಾಗೊಮ್ಮೆ ಬಂದು ಒಂದೆರಡುಸಲಕ್ಕೆ
ಮನೆಯೆಂದೆ ತಿಳಿದೆನೋ

ಅಲ್ಲಿಗೆ ಮುಗಿಯಿತು.
ಮತ್ತೊಮ್ಮೆ ಬರುವಂತೆಯೇ ಇಲ್ಲ.
ಆಗ ಅವರ ಬಾಗಿಲುಗಳು ಮುಚ್ಚಿರುತ್ತವೆ!

ಹಾಗಾಗಿ ಬಹಳಷ್ಟು ಕಲಿತಿದ್ದೇನೆ ಮಗೂ.
ಉಡುಪುಗಳ ಧರಿಸುವಂತೆ
ಮುಖವಾಡಗಳ ಧರಿಸುವುದ ಕಲಿತಿದ್ದೇನೆ.
ಮನೆಗೊಂದು ಮುಖ, ಕಛೇರಿಗಿನ್ನೊಂದು,
ಬೀದಿಗೊಂದು ಮುಖ, ಅತಿಥಿಸತ್ಕಾರಕೊಂದು,
ಸಂಜೆಯ ಪಾನಗೋಷ್ಠಿಗಿನ್ನೊಂದು -ಹೀಗೆ
ಅವುಗಳಿಗೆ ಒಪ್ಪುವಂಥ
ಭಾವಚಿತ್ರದ ನಿಶ್ಚಲ ನಗೆಯ
ಮುಖವಾಡಗಳ ಧರಿಸುವುದ ಕಲಿತಿದ್ದೇನೆ.

ಅಲ್ಲದೆ,
ಕೇವಲ ಹಲ್ಲರಳಿಸಿ ನಗುವುದ ಕೂಡ
ಕಲಿತಿದ್ದೇನೆ.
ನನ್ನ ಹೃದಯ ಬೆರೆಸದೆ ಬರಿದೆ
ಕೈ ಕಲುಕುವುದ ಕಲಿತಿದ್ದೇನೆ.
ಜೊತೆಗೆ,
'ಸದ್ಯ!ಪೀಡೆ ತೊಲಗಿತು!' ಎಂದು
ಹೇಳಬೇಕೆನಿಸಿದಾಗ 'ಗುಡ್‌ಬೈ'
ಎಂದು ಹೇಳಲು, ಸಂತೋಷದ
ಭಾವ ಇನಿತಿಲ್ಲದೆ ನಿಮ್ಮನ್ನು
ಭೇಟಿಯಾದದ್ದು
ಬಹು ಸಂತೋಷ' ಎಂದು ಹೇಳಲು,
ತಲೆಚಿಟ್ಟು ಹಿಡಿದಿದ್ದರೂ,

ನಿಮ್ಮೊಂದಿಗಿನ ಮಾತು ಬಲು ಸೊಗಸು'
ಎಂದೆಲ್ಲ ಹೇಳಲು ಕಲಿತಿದ್ದೇನೆ.

ಆದರೆ ನಂಬು ಮಗೂ,
ನಾನು ನಿನ್ನ ಹಾಗಿದ್ದಾಗ,
ನಾನೇನು ಆಗಿರುತ್ತಿದ್ದೆನೋ ಹಾಗೆಯೇ
ಇರಲೂ ಬೇಕೆಂದು ಬಯಸಿದ್ದೆ
ನಾನೀಗ ಈ ಎಲ ಮೂಕಾಭಿನಯಗಳ
ತೊರೆಯಬೇಕೆಂದಿದ್ದೇನೆ.
ಎಲ್ಲಕ್ಕಿಂತ ಹೆಚ್ಚಾಗಿ ನಗುವುದು ಹೇಗೆಂದು
ಮತ್ತೆ ಕಲಿಯಬೇಕೆಂದಿದ್ದೇನೆ.
ಕಾರಣ,
ನಾನು ನಕ್ಕಾಗ, ಕನ್ನಡಿಯಲ್ಲಿ
ನನ್ನ ಹಲ್ಲುಗಳು ಥೇಟು
ನಾಗರನ ವಿಷದ ಹಲ್ಲುಗಳಂತೆ ಕಾಣುತ್ತವೆ!

ಆದ್ದರಿಂದ ಮಗೂ,
ನಗುವುದು ಹೇಗೆಂದು ನನಗೆ
ತೋರಿಸಿಕೊಡು.
ಒಂದಾನೊಂದು ಕಾಲದಲ್ಲಿ
ನಿನ್ನ ಹಾಗಿದ್ದಾಗ ನಾನು
ಹೇಗೆ ನಗುತಿದ್ದೆನೆಂಬದನು
ಮುಗುಳ್ನಗೆಯ ಹೇಗೆ
ಬೀರುತ್ತಿದ್ದೆನೆಂಬುದನು ತೋರು!

* * *

ಅಕಿನ್ ವಾಂಡೆ ವೋಲೆ ಸೋಯಿಂಕ (ಜನನ 1934)

ನೈಜಿರಿಯಾದ ಕವಿ, ನಾಟಕಕಾರ, ಕಾದಂಬರಿಕಾರ ಮತ್ತು ವಿಮರ್ಶಕ ವೋಲೆ ಸೋಯಿಂಕಾ ಹುಟ್ಟಿದ್ದು ನೈಜೀರಿಯಾದ ಅಜ್ಞೇಯ ಪ್ರದೇಶ ಅಬೆಯೋಕೂಟ (ABeokuta) ದಲ್ಲಿ. ನೊಬೆಲ್ ಪ್ರಶಸ್ತಿ ಪುರಸ್ಕೃತ ಮೊದಲ ಆಫ್ರಿಕನ್ ಲೇಖಕ (1986). ಸರ್ಕಾರವನ್ನು ಟೀಕಿಸಿದ್ದಕ್ಕೆ ಹಲವು ಬಾರಿ ಸೆರೆವಾಸ ಅನುಭವಿಸಬೇಕಾಯಿತು. 1970 ರಿಂದ ಅನೇಕ ವರ್ಷ ಅಜ್ಞಾತವಾಸ ಅನುಭವಿಸಬೇಕಾಯಿತು. ಲೀಡ್ಸ್ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲೀಷ್ ಶಿಕ್ಷಣ ಪಡೆದರು.

ಅವರ ಕವನಗ ಸಂಗ್ರಹಗಳು

1.The man died and specialists

2. Mad men and and specialists

3. Poems of black Africa (ed)

ನಾಟಕಗಳು 1.The swamp dwellers

2. The lion and the jewel

ಕಾದಂಬರಿ The interpreters

ಸೋಯಿಂಕಾ ಯಾವಾಗಲೂ ತನ್ನನ್ನು ರಂಗಭೂಮಿಯ ವ್ಯಕ್ತಿ ಹಾಗೂ ನಾಟಕಕಾರನೆಂದು ಗುರುತಿಸಿಕೊಳ್ಳಲು ಇಷ್ಟಪಡುತ್ತಿದ್ದ. ಸೋಯಿಂಕಾ ಅವರ ನಾಟಕಗಳ ವ್ಯಾಪ್ತಿ ಸುಖಾಂತ ನಾಟಕಗಳಿಂದ ಹಿಡಿದು ದುಖಾಂತ ನಾಟಕಗಳವರಗೆ ಹಾಗೂ ರಾಜಕೀಯ ವ್ಯಂಗ್ಯ ಭರಿತ ನಾಟಕಗಳಿಂದ ಅಸಂಗತ ನಾಟಕಗಳವರಗೆ ಇದೆ .

ಒಂದು ಟೆಲಿಫೋನ್ ಸಂಭಾಷಣೆ

ಬಾಡಿಗೆಯೇನೋ ಸಮಂಜಸವೆನಿಸಿತು
ಮನೆ ಇರುವ ಪ್ರದೇಶ ಅಷ್ಟು
ಮುಖ್ಯವೆನಿಸಲಿಲ್ಲ.
ಮನೆಯೊಡತಿ ತಾನು ದೂರದಲ್ಲೆಲ್ಲೋ
ವಾಸವಿರುವುದಾಗಿ ತಿಳಿಸಿದಳು.
ಇನ್ನು ಉಳಿದದ್ದು; ನನ್ನನ್ನು ನಾನು
ಜಾಹೀರುಗೊಳಿಸಿಕೊಳ್ಳುವುದಷ್ಟೆ.
"ನೋಡಿ ಮೇಡಂ, ನನಗೆ ಸುತ್ತಿಬಳಸಿ
ಮಾತನಾಡುವುದು ಇಷ್ಟವಿಲ್ಲ.
ನಾನೊಬ್ಬ ಆಫ್ರಿಕನ್ ಮಹಿಳೆ"ಎಂದು ಎಚ್ಚರಿಸಿದೆ.
ಮೌನ..... ಬಲವಂತದ ಸೌಜನ್ಯದ
ಮೌನ ವ್ಯಾಪಾರ ಸಾಗಿತ್ತು. ಮತ್ತೆ
ಆ ಕಡೆಯಿಂದ ದನಿ ಬಂದಾಗ
ಬಂಗಾರದ ಬಣ್ಣದ ಸಿಗರೇಟ್ ಹಿಡಿಕೆ
ಅಪ್ಪಳಿಸಿದಂತಿತ್ತು. ನಾನೋ
ನಿರ್ವಾಹವಿಲ್ಲದೆ ಸಿಕ್ಕು ಹಾಕಿಕೊಂಡೆ.
'ನೀವು ಎಷ್ಟು ಕಪ್ಪಗಿದ್ದೀರಿ'?
ನಾನು ಕೇಳಿಸಿಕೊಂಡದ್ದು ಖಂಡಿತಾ
ತಪ್ಪಾಗಿರಲಿಲ್ಲ... "ನೀವು ತಿಳಿಯಾದ ಬಣ್ಣದವರೋ
ಅಥವಾ ತೀರಾ ಕಪ್ಪೋ?"
ಕೊಳೆತ ಕೊಬ್ಬಿನಂಥ ದುರ್ನಾತ
ಬೀರುತ್ತಿರುವ ಸಾರ್ವಜನಿಕ ದೂರವಾಣಿ.
ಕೆಂಬಣ್ಣದ ಬೂತ್, ಕೆಂಬಣ್ಣದ ಅಂಚೆಪೆಟ್ಟಿಗೆ
ರಸ್ತೆಯ ಕಾದ ಟಾರನ್ನು ಕಚಪಿಚಗೊಳಿಸುತ್ತ

ಸಾಗಿದ್ದ ಕೆಂಪು ಬಸ್.
ಎಲ್ಲವೂ ಕೆಂಪು ಮಯ!
ಅದಂತೂ ಕಟು ವಾಸ್ತವ!
ಅಸಭ್ಯ ಮೌನದಿಂದ ನಾಚಿದ ದಿಗ್ಭ್ರಮೆ
ಸರಳತೆಗೆ ಶರಣಾಯಿತು
ಎಷ್ಟಾಗಲಿ ಆಕೆ ದಾಕ್ಷಿಣ್ಯಪರಳು.
ಮಾತಿನ ವರಸೆ ಬದಲಾಯಿಸುತ್ತ
ಕೇಳಿದಳು ; " ನೀವು ಕಪ್ಪಗಿದ್ದೀರೋ
ಅಥವಾ ತುಂಬಾ ತಿಳಿ ಬಣ್ಣದವರೋ"
ನನ್ನತಲೆ ಝಗ್ಗನೆ ಬೆಳಕಾಯಿತೊಮ್ಮೆಗೇ!
ಅಂದರೆ ನಿಮ್ಮ ಅರ್ಥ. "ನಾನು
ಸಾಧಾರಣ ಚಾಕೊಲೇಟ್ ಥರವೋ
ಅಥವಾ ಮಿಲ್ಕ್ ಚಾಕೊಲೇಟ್ ಥರವೋ ಎಂದೆ" ?
ಆಕೆಯ ದನಿ ಕಿಂಚಿತ್ ನಿರ್ಲಿಪ್ತವೇ
ಎಂಬಂತಿದ್ದ ಭಾವವನ್ನು ಒತ್ತಿ ಹಿಡಿದಂತಿದ್ದ
ಸಮ್ಮತಿ ಸೂಚಕ ದನಿಯಾಗಿತ್ತು.
ಕೂಡಲೇ ಅದಕ್ಕೆ ತಕ್ಕಂತೆ
ಹೇಳಿದೆ - "ದಕ್ಷಿಣ ಆಫ್ರಿಕನ್ನರ ಕಡು ಕಂದುಬಣ್ಣ"
ನಂತರ ಸೇರಿಸಿದೆ- "ಹಾಗೆಂದು ನನ್ನ
ಪಾಸ್‌ಪೋರ್ಟ್‌ನಲ್ಲಿ ನಮೂದಿಸಿದೆ."
ಹಾಗೆಂದರೇನೆಂದು ಹೊಳೆವ ತನಕ ಮೌನ.
ನಿಜ ಸಂಗತಿ ಏನೆಂದು ಹೊಳೆದ ಕೂಡಲೇ
ಟೆಲಿಫೋನ್ ಬಾಯಿಗೆ ಅವಳ ಜಾಗಟೆ ದನಿ
ಅಪ್ಪಳಿಸಿತು "ಎಥದದು? ಅದು
ಏನು ಅಂತ ಗೊತ್ತಿಲ್ಲವಲ್ಲ"
"ಅದೇ ಮಾಸಲು ಬಣ್ಣದ ಮಹಿಳೆಯ ಹಾಗೆ"

"ಅದು ಕಪ್ಪಲ್ಲವೆ?"
"ಪೂರ್ತಿ ಕಪ್ಪಲ್ಲ ಮೇಡಮ್
ನನ್ನ ಮುಖವೇನೋ ಮಾಸಲು
ಬಣ್ಣದ ಹೆಣ್ಣಿನದೇ. ಆದರೆ ನೀವು
ನನ್ನ ದೇಹದ ಉಳಿದ ಭಾಗಗಳನ್ನು ನೋಡಬೇಕು
ನನ್ನ ಅಂಗೈ ಮತ್ತು ಅಂಗಾಲುಗಳೆರಡೂ
ಥೇಟು ಸ್ಫಟಿಕದ ಹಾಗೆ ಬೆಳ್ಳಗೆ ಹೊಳೆಯುತ್ತವೆ.
ಹಾಳಾದ್ದು ಮೂರ್ಖಳಂತೆ ಕುಳಿತೂ ಕುಳಿತೂ
ಕಾವು ಹತ್ತಿ ನನ್ನ ಆಸನ ಭಾಗವೆಲ್ಲ
ಕಾಗೆಯಷ್ಟು ಕಪ್ಪಗೆ".
ಒಂದು ನಿಮಿಷ ಮೇಡಂ -ಆಕೆಯ
ಟೆಲಿಫೋನ್ ರಿಸೀವರ್ ನನ್ನ ಕಿವಿಯ ಮೇಲೆ
ಸಿಡಿಲೆರಗಿಸಲು ಸಜ್ಜಾಗಿರಬಹುದೆಂದು
ತಿಳಿದು ಹೇಳಿದೆ-" ಮೇಡಂ ನಿಮ್ಮನ್ನು
ನೀವೇ ಒಮ್ಮೆ ನೋಡಿಕೊಳ್ಳಬಾರದೆ?"

* * *

ಬರ್ನಾಡ್ ಬಿ. ಡ್ಯಾಡಿ (Bernard B. Daddie) (ಜನನ 1966)

ಅಬೀದ್ ಜಾನ್ ಕೋರ್ಟ ಡಿ ವಾರ್ಯನಲ್ಲಿ ಜನಿಸಿದರು. ಡ್ಯಾಡಿಯವರ ಪ್ರಮುಖ ಆಸಕ್ತಿಯ ಕ್ಷೇತ್ರ ರಾಜಕೀಯವಾದರೂ ಆರು ಕಾವ್ಯ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಫ್ರೆಂಚ್ ಭಾಷೆಯನ್ನು ಆಫ್ರಿಕಾದ ದನಿಗೆ ಒಗ್ಗಿಸುವ ಕೆಲಸವನ್ನು ತನ್ನ ಜೊತೆಯ ಕವಿಗಳಾದ ಲೆಫೋಲ್ಡ್ , ಸೆಂಘರ್ ಗಳೊಂದಿಗೆ ಮಾಡಿದ್ದಾರೆ.

ಕೃತಿಗಳು

1. The lines of our hands
2. Leaf in the wind
3. Dry your tears Africa
4. Speechles plays

ಓ ದೇವರೆ, ನಿನಗೆ ವಂದನೆ, ಅಭಿವಂದನೆ

ಓ ದೇವರೆ,
ಕರಿಯನಾಗಿ ನೀನು ನನ್ನನ್ನು
ಸೃಷ್ಟಿಸಿರುವುದಕ್ಕೆ
ಸಕಲ ದುಃಖಗಳ ಹೊರುವ
ಹೊರೆಯಾಳಾಗಿ ಮಾಡಿರುವುದಕ್ಕೆ
ಈ ಜಗವೆಲ್ಲವನು ನನ್ನ
ತಲೆಯ ಮೇಲೆ ಇರಿಸಿರುವುದಕ್ಕೆ
ವಂದನೆ, ನಿನಗೆ ಅಭಿವಂದನೆ!
ಕಿಂಪುರುಷರಂತೆ ಕುದುರೆಯ
ದೇಹಧರಿಸಿ, ಈ ಜಗವ, ಅದರ ಮೊದಲ
ಬೆಳಗಿನಿಂದ ಹೊತ್ತು ಸಾಗಿದ್ದೇನೆ.
ಬಿಳಿಯ ಬಣ್ಣ, ಪರ್ವದಿನಗಳ ಬಣ್ಣ
ಕಪ್ಪು ಬಣ್ಣವಾದರೋ ಪ್ರತಿನಿತ್ಯದ ಬಣ್ಣ
ನಾನಾದರೋ ಈ ಜಗವ, ಅದರ ಮೊದಲ
ಬೈಗಿನಿಂದ ಹೊತ್ತು ಸಾಗಿದ್ದೇನೆ

ಈ ಜಗವ ಹೊರುವುದಕ್ಕಾಗಿಯೇ
ನಿರ್ಮಿಸಿರುವ ಈ ನನ್ನ ಶಿರದ
ಆಕೃತಿ ನನಗೆ ಬಲು ಅಚ್ಚುಮೆಚ್ಚು.
ಈ ಜಗದ ಎಲ್ಲ ಥರದ ಗಾಳಿಯ
ಸೇವಿಸಲೆಂದೆ ಸೃಷ್ಟಿಸಿರುವ ಈ ನನ್ನ ಮೂಗಿನ ಆಕೃತಿಯಿಂದ
ನಾನು ಸಂತೃಪ್ತ.

ಈ ಜಗದ ಎಲ್ಲ ಸ್ಪರ್ಧೆಗಳಲಿ
ಓಡಲೆಂದೇ ಇರವ ಈ ನನ್ನ

ಕಾಲುಗಳ ಆಕೃತಿಯಿಂದ
ನಾನು ಸಂತುಷ್ಟ

ಓ ದೇವರೆ,
ಕರಿಯನಾಗಿ ನೀನು ನನ್ನನ್ನು
ಸೃಷ್ಟಿಸಿರುವುದಕ್ಕೆ
ಸಕಲ ದುಃಖಗಳ ಹೊರುವ
ಹೊರೆಯಾಳಾಗಿ ಮಾಡಿರುವುದಕ್ಕೆ
ವಂದನೆ, ನಿನಗೆ ಅಭಿವಂದನೆ!
ಮುವ್ವತ್ತಾರು ಖಡ್ಗಗಳು
ನನ್ನ ಎದೆಯನು ಇರಿದಿವೆ
ಮುವ್ವತ್ತಾರು ಬೆಂಕಿಗಳು
ನನ್ನ ಮೈಯನ್ನು ಸುಟ್ಟಿವೆ
ಎಲ್ಲ ಗೊಲ್ಗೋಥಗಳಲಿ ಚೆಲ್ಲಿದ
ನನ್ನ ದೇಹದ ರಕ್ತದಿಂದ
ಮಂಜು ಕೆಂಪಾಗಿದೆ.
ಪ್ರತಿ ಉದಯದಲ್ಲೂ ನನ್ನ ರಕ್ತ
ಪ್ರಕೃತಿಯೆಲ್ಲವನು ಕೆಂಪಾಗಿಸಿದೆ
ಇಷ್ಟಾದರೂ,
ಈ ಜಗವ ಹೊತ್ತು ಸಾಗಲು
ನನಗೆ ಅಮಿತ ಹರುಷ!
ನನ್ನ ಉದ್ದತೋಳುಗಳು
ದಪ್ಪ ತುಟಿಗಳು ಎಂದಿಗೂ ಸಂತಸಕಾರಿ.

ಓ ದೇವರೆ
ಕರಿಯನಾಗಿ ನೀನು ನನ್ನನ್ನು
ಸೃಷ್ಟಿಸಿರುವುದಕ್ಕೆ
ವಂದನೆ, ನಿನಗೆ ಅಭಿವಂದನೆ

ಬಿಳಿಯಬಣ್ಣ ಪರ್ವದಿನಗಳ ಬಣ್ಣ
ಕಪ್ಪುಬಣ್ಣವಾದರೋ ಪ್ರತಿನಿತ್ಯದ ಬಣ್ಣ
ಕಾಲ ಕಣ್ತೆರೆದಾಗಿನಿಂದಲೂ, ಈ ಜಗವ
ನಾನು ಹೊತ್ತು ಸಾಗಿದ್ದೇನೆ.
ಈ ಜಗವ ನೋಡಿ ನಾನು ನಕ್ಕ ನಗೆಯೆ
ನಿಶೆಯ ಬಸಿರಿನಿಂದ
ಉಷೆಯ ಹೊಮ್ಮಿಸುತ್ತದೆ

ಓ ದೇವರೆ,
ಕರಿಯನಾಗಿ ನೀನು ನನ್ನನ್ನು
ಸೃಷ್ಟಿಸಿರುವುದಕ್ಕೆ
ವಂದನೆ, ನಿನಗೆ ಅಭಿವಂದನೆ!

* *

ಚಿನು ಅ ಅಚೆಬೆ :

ಆಫ್ರಿಕಾದ ಹೆಸರಾಂತ ಕಾದಂಬರಿಕಾರ, ಕವಿ ಕತೆಗಾರ ಮತ್ತು ಪ್ರಬಂಧಲೇಕಖ ಚಿನು ಅ ಅಚೆಬೆ ಅವರ ಪೂರ್ಣ ಹೆಸರು ಆಲ್ಬರ್ಟ್ ಚಿನು ಅಲುಮೊಗು ಅಚೆಬೆ ಎಂದು. ನೈಜೀರಿಯಾದ ಒಗಿಡಿ ಎಂಬಲ್ಲಿ 1930 ರಲ್ಲಿ ಹುಟ್ಟಿದ ಅಚೆಬೆ ಅವರ ತಂದೆ ಮಿಷನರಿ ಶಾಲೆಯ ಅಧ್ಯಾಪಕರು. ಮೊದಲಿಗೆ ಉಮಾಹಿಯಾ ದ ಸರ್ಕಾರಿ ಕಾಲೇಜಿನಲ್ಲಿ ಮತ್ತು ಅನಂತರ ಇಬಾಡಾನ್ ನ ವಿಶ್ವ ವಿದ್ಯಾಲಯ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದರು. ವಿಶ್ವವಿದ್ಯಾನಿಲಯದಲ್ಲಿ ತನ್ನ ಬ್ರಿಟಿಷ್ ಹೆಸರು ತ್ಯಜಿಸಿ, ತನ್ನ ವಿಶಿಷ್ಟ ಹೆಸರಾದ ಚಿನು ಅ ಅನ್ನು ಸ್ವೀಕರಿಸಿದರು. ಬಿ. ಎ. ಪದವಿಯ ನಂತರ ನೈಜೀರಿಯನ್ ಬ್ರಾಡ್ ಕ್ಯಾಸ್ಟಿಂಗ್ ಕಂಪೆನಿ ಸೇರಿದರು. ಇದಕ್ಕೆ ಮುನ್ನ ಕೆಲಕಾಲ ಅಧ್ಯಾಪಕರಾಗಿ ಕಾರ್ಯನಿರ್ವಹಿಸಿದರು. 1967 ರಲ್ಲಿ ಕವಿ ಕ್ರಿಸ್ಟಾಫರ್ ಒಕಿಗ್ಬೋ ಜೊತೆ ಸೇರಿಕೊಡು ಎನುಗು ಎಂಬಲ್ಲಿ ಪಬ್ಲಿಷಿಂಗ್ ಕಂಪೆನಿ ಪ್ರಾರಂಭಿಸಿದರು. ಅನಂತರ ನೈಜೀರಿಯಾದ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾರ್ಥಿಯಾಗಿ ನೇಮಕಗೊಂಡರು. ಅನಂತರ 1981 ರಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾದರು. 1985 ರಿಂದ ಎಮಿರಿಟಸ್ ಪ್ರೊಪೆಸರ್ ಆದರು. ಈ ನಡುವೆ ಮೆಸಾಚುಸೆಟ್ಸ್ ವಿಶ್ವವಿದ್ಯಾನಿಲಯದಲ್ಲಿಯೂ ಇಂಗ್ಲಿಷ್ ಪ್ರಾಧ್ಯಾಪಕರ ಹುದ್ದೆ ನಿರ್ವಹಿಸಿದರು. 90 ರ ದಶಕದಲ್ಲಿ ಬಾರ್ಡ್ ಕಾಲೇಜಿನಲ್ಲಿ ಅಧ್ಯಾಪಕ. ಆ ವೇಲೆಯಲ್ಲಿ ಕಾರು ಅಪಘಾತದಲ್ಲಿ ತೀವ್ರ ಗಾಯಗೊಂಡರು.

ಅಚೆಬೆ ಇದುವರೆಗೆ ಇಪ್ಪತ್ತೈದಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅವರ ಕೆಲವು ಪ್ರಮುಖ ಕೃತಿಗಳನ್ನು ಹೆಸರಿಸಬೇಕೆಂದರೆ,

ಕಾದಂಬರಿಗಳು:

1. Things fall Apart (1958) 2) No longer at ease (196)) 3) Arrow of God 4) A man of the people (1966) 5) An hills of Savanna (1987)

ಸಣ್ಣ ಕತೆಗಳು

1. The sacrificial egg and other rsories (19622)
2. Girls at War (1972)

ಕಾವ್ಯ

1. Christ mas in Biafra and othere poems (1973)
2. The Flute (1977)
3. The Drum (1977)
4. Literature andSociety (1980) The trouble with Nigeria (1983)

Morning yet on creation (1975) ಅವರ ಕೆಲವು ಪ್ರಮುಖ ಪ್ರಬಂಧ ಸಂಕಲನಗಳು

ಅಚೆಬೆ ಅವರಿಗೆ ಹಲವಾರು ಪ್ರಶಸ್ತಿಗಳು ಸಂದಿವೆ. ಅವುಗಳೆಂದರೆ Margaret wrong prize, the new Statesman Jock Compbell prize, ಮತ್ತು Common wealth poetry prize.

ಆಫ್ರಿಕಾದ ಸಾಂಪ್ರದಾಯಿಕ ಸಮಾಜದ ಮೇಲೆ ಪಾಶ್ಚಾತ್ಯ ಪದ್ಧತಿಗಳು ಮತ್ತು ಮೌಲ್ಯಗಳು ಉಂಟುಮಾಡಿದ ಪ್ರಭಾವವನ್ನು ವಿವರಿಸುವ ಕಾದಂಬರಿಗಳಿಗೆ ಹೆಸರಾದವರು ಚಿನು ಅ ಅಚೆಬೆ. ವಿಡಂಬನೆ ಮತ್ತುಆಡುಮಾತಿಗೆ ಅವರು ನೀಡುವ ಲಕ್ಷ್ಯ ಇವೆರಡೂ ಇಂಗ್ಲಿಷಿನಲ್ಲಿ ಬರೆಯುತ್ತಿರುವ ಆಫ್ರಿಕಾದ ಅತ್ಯುನ್ನತ ಬರಹಗಾರರಲ್ಲಿ ಅವರನ್ನು ಒಬ್ಬರನ್ನಾಗಿಸಿವೆ ಎಂದು ಹೇಳಲಾಗಿದೆ. ಅಚೆಬೆಯ ಭಾಷೆ ಇಗ್ಬೋಶಬ್ದಗಳು, ಗಾದೆಗಳು, ನುಡಿಗಟ್ಟುಗಳು ಹಾಗೂ ರೂಪಕಗಳಿಂದ ಕೂಡಿದ ಪ್ರಮಾಣ ಇಂಗ್ಲಿಷ್ ಭಾಷೆ. (Standard English) ಹೀಗೆ ಇಂಗ್ಲಿಷ್‌ನ್ನು ಬಳಸುವುದನ್ನು ಅವರು ಸಮರ್ಥಿಸಿಕೊಂಡಿದ್ದಾರೆ. ಅಲ್ಲದೆ ಅಚೆಬೆ ಆಫ್ರಿಕನ್ ಸಮಾಜ ತನ್ನ ವಸಾಹತುಶಾಹಿ ಕಾಲದ ಕೀಳರಿಮೆಯ ಭಾವಗಳನ್ನು ನೀಗಿಗೊಂಡು ತನ್ನ ಆತ್ಮ ವಿಶ್ವಾಸವನ್ನು ಮರಳಿ ಪಡೆದುಕೊಳ್ಳಲು ನೆರವಾಗುವ ಕ್ರಾಂತಿಕಾರಿ ಧ್ಯೇಯೋದ್ದೇಶ ಹೊಂದಿರುವ ಸಾಂಸ್ಕೃತಿಕ ರಾಷ್ಟ್ರೀಯವಾದಿ ಎಂದು ತನ್ನನ್ನು ವಿವರಿಸಿಕೊಡಿದ್ದಾರೆ.

ನಿರಾಶ್ರಿತ ತಾಯಿ ಮತ್ತು ಮಗು

ಇನ್ನು ಸ್ವಲ್ಪ ಹೊತ್ತಿಗೆಲ್ಲ ತಾನು
ಮರೆತು ಬಿಡಬೇಕಾದ ತನ್ನ ಮಗನಿಗೆ
ಆ ತಾಯಿ ತೋರಿದ ವಾತ್ಸಲ್ಯದ ಚಿತ್ರಕ್ಕೆ
ಬಾಲ ಕ್ರಿಸ್ತನ ಹೊತ್ತ ಮೇರಿ ಮಾತೆಯ
ಯಾವ ಚಿತ್ರವೂ ಸಮನಲ್ಲ.
ಗಾಳಿಯ ತುಂಬ ಸ್ನಾನ ಕಾಣದ ಮಕ್ಕಳ
ಭೇದಿಯ ದಟ್ಟದುರ್ನಾತ ತುಂಬಿರಲು
ಒಣಗಿ ತಾರಾದ ಪಿರ್ರೆಗಳ, ತಳಹತ್ತಿದ
ಹೊಟ್ಟೆಗಳ ಹೊತ್ತು ಪ್ರಯಾಸದಿಂದ ಹೆಜ್ಜೆ ಹಾಕುತ್ತಿರುವ
ಬಾಲರು. ಬಹುಪಾಲು ತಾಯಂದಿರು
ಮಕ್ಕಳ ನಿಗಾವಹಿಸುವುದನೆಂದೂ ಬಿಟ್ಟಾಗಿತ್ತು
ಆದರೆ ಈ ತಾಯಿಮಾತ್ರ ಅಂತಲ್ಲ.
ದಂತಪಂಕ್ತಿಯ ನಡುವೆ ಪ್ರೇತ ನಗೆಯಯನು ಚೆಲ್ಲುತ
ಮಗುವಿನ ತುಕ್ಕು ಬಣ್ಣದ ತಲೆ ಬುರುಡೆ ಮೇಲೆ
ಅಳಿದುಳಿದಿದ್ದ ಅಲ್ಪ ಕೂದಲನು ಬಾಚುವಾಗ್ಗೆ
ಕಂಗಳಲಿ ತಾಯ ಹೆಮ್ಮೆಯ ಭಾವ ಛಾಯೆಯನು ತಾಳಿ
ಕಂಗಳಲಿ ಹಾಡ ಹಾಡುತ್ತ ಜತನದಿಂದದರ
ಬೈತಲೆ ತೆಗೆಯ ತೊಡಗಿದಳು.
ಮಗು ಬದುಕಿದ್ದಾಗ ಅದಕೆ ತಿಂಡಿತಿನ್ನಿಸಿ
ಶಾಲೆಗೆ ಕಳಿಸುವ ಮುನ್ನ ಇದೆಲ್ಲ
ಆಕೆ ಗೈಯುತ್ತಿದ್ದ ಏನೇನೂ ಮಹತ್ವದ್ದಲ್ಲದ
ದಿನನಿತ್ಯದ ಕ್ರಿಯೆ. ಈಗ ಪುಟಾಣಿ ಸಮಾಧಿಯ ಮೇಲೆ
ಪುಷ್ಪಗಳನಿಡುವಂತೆ ಅದ ಮಾಡಿದಳು.

* * *

ಪಾಕಿಸ್ತಾನಿ ಕವಿತೆಗಳು (ಉರ್ದು-ಇಂಗ್ಲಿಷ್)

* ಫೈಜ್ ಅಹಮದ್ ಫೈಜ್
* ಕಿಷ್ವಾರ್ ನಾಹೀದ್

ಫೈಜ್ ಅಹಮದ್ ಫೈಜ್ (1911-1984)

ಪ್ರಸಿದ್ಧ ಪಾಕಿಸ್ತಾನಿ ಕವಿ ಫೈಜ್ ಅಹಮದ್ ಫೈಜ್ 1911 ರಲ್ಲಿ ಅವಿಭಜಿತ ಭಾರತದ ಸಿಯಾಲ್‌ಕೋಟ್ ನಲ್ಲಿ ಜನಿಸಿದರು. ಲಾಹೋರ್‌ನಲ್ಲಿ ವಿದ್ಯಾಭ್ಯಾಸಮಾಡಿದ ಫೈಜ್ ಇಂಗ್ಲಿಷ್ ಸಾಹಿತ್ಯ ಮತ್ತು ದರ್ಶನ ಶಾಸ್ತ್ರ ಕಲಿತರು. ಅಮೃತಸರದ ಕಾಲೇಜೊಂದರಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ವೃತ್ತಿಜೀವನ ಪ್ರಾರಂಭಿಸಿದ ಫೈಜ್ ಎರಡನೆಯ ಮಹಾಯುದ್ಧದನಂತರ ಪತ್ರಿಕೋದ್ಯಮದತ್ತ ಹೊರಳಿ ಪಾಕಿಸ್ತಾನಿ ಟೈಮ್ಸ್ ಸಂಪಾದಕರಾಗಿ ಕಾರ್ಯ ನಿರ್ವಹಿಸಿದರು. ರಾವಲ್ಪಿಂಡಿಯ ಪಿತೂರಿ ಪ್ರಕರಣದಲ್ಲಿ ಭಾಗಿಯಾಗಿದ್ದರೆಂದು ಆರೋಪಿಸಿ 1951 ರಲ್ಲಿ ನಾಲ್ಕು ವರ್ಷಗಳ ಕಾಲ ಸೆರೆವಾಸ ವಿಧಿಸಲಾಯಿತು. ಆ ಕಾಲ ಅವರಿಗೆ ಅಪಾರ ಪಾಠಕಲಿಸಿತು. ಬದುಕಿನ ಕಟುವಾಸ್ತವಗಳ ಅನುಭವ ಅವರಿಗಾಯಿತು. ಅಲ್ಲಿಸಾಕಷ್ಟು ವಿರಾಮವೂ ದೊರೆತದ್ದರಿಂದಾಗಿ ತಮ್ಮೆಲ್ಲ ಆಲೋಚನೆಗಳಿಗೆ ಕಾವ್ಯದ ರೂಪು ಕೊಟ್ಟರು. ಅದರ ಫಲಿತಗಳೆಂದರೆ, ದಸ್ತ್-ಎ-ಸಬಾ ಮತ್ತು ಜಿಂದಾನ್ -ನಾಮಾ ಎಂಬ ಎರಡು ಕವನಸಂಕಲನಗಳು.

ಪ್ರಾರಂಭದಲ್ಲಿ ಫೈಜ್ ಅವರ ಕಾವ್ಯಕೃಷಿ ಎಂದಿನ ಸಾಂಪ್ರದಾಯಿಕ ಪ್ರೇಮ ಮತ್ತು ಸೌಂದರ್ಯ ಕುರಿತು ಕಾವ್ಯಬರೆಯುವುದರೊಂದಿಗೆ ಶುರುವಾಯಿತು. ಆದರೆ ಬಹುಬೇಗ ಈ ಸಾಂಪ್ರದಾಯಿಕ ವಿಷಯಗಳು ವಿಶಾಲ ಸಾಮಾಜಿಕ, ರಾಜಕೀಯ ಸಂಗತಿಗಳಲ್ಲಿ ಐಕ್ಯವಾದುವು. ಪ್ರೀತಿ ಕುರಿತ ಸಾಂಪ್ರದಾಯಿಕ ವೇದನೆಗಳು ದುಃಖಪೀಡಿತ ಸಮಾಜದ ನೋವುಗಳೊಂದಿಗೆ ಏಕೀಭವಿಸಿದುವು. ಸಾಮಾಜಿಕ ಮಾನವತಾವಾದವನ್ನು ಎತ್ತಿಹಿಡಿಯಲು ಫೈಜ್ ತನ್ನ ಕಾವ್ಯವನ್ನು ಬಳಸುತ್ತಾರೆ. ಪ್ರೇಮ ಕವಿಯ ಚಿರಪರಿಚಿತವಾದ ರೂಪಕ ಫೈಜ್ ಕೈಯಲ್ಲಿ ವಿನೂತನ ವಾಸ್ತವತೆಗೆ ಪಡೆದುಕೊಳ್ಳುತ್ತದೆ. ಹೀಗೆ ಪ್ರೀತಿಯಿಂದ ವಾಸ್ತವತೆಗೆ ಹೊರಳಿದ್ದು ಫೈಜ್ ಕಾವ್ಯದ ಬಹುಮುಖ್ಯ ಮಜಲು. ಭಾಷೆ ಮತ್ತು ಶೈಲಿಯಲ್ಲಿ ಫೈಜ್ ಘಾಲಿಬ್ ಸಂಪ್ರದಾಯದ ವಾರಸುದಾರ ಎಂದು ಹೇಳಲಾಗಿದೆ.

ಗುಝಲ್‌ಗಳ ರಚನೆಯಲ್ಲಿ ಫೈಜ್ ನಿಷ್ಣಾತ, ಅವರು ಸಾನುಕ್ರೋಶಪರ ದೃಷ್ಟಿಕೋನ ಮತ್ತು ವಿಶ್ವವ್ಯಾಪ್ತಿಯಾದ ಚಿಂತನೆಗಳಿಂದಾಗಿ ಅವರ ಕಾವ್ಯ

ಭಾರತೀಯ ಉಪಖಂಡದಲ್ಲಿ ಅಪಾರವಾದ ಮೆಚ್ಚುಗೆಗೆ ಪಾತ್ರವಾಗಿದೆ.

ಫೈಜ್‌ಗೆ ಕಾವ್ಯ ಕೇವಲ ಸಂತೋಷಕ್ಕಾಗಿ ಅಲ್ಲ; ಬದುಕಿಗಾಗಿ ವಿಚಾರಕ್ಕಾಗಿ 'ಕಲೆಗಾಗಿ ಕಲೆ' ವಾದವನ್ನವರು ಒಪ್ಪುವುದಿಲ್ಲ. ಕಾರ್ಲ್‌ಮಾರ್ಕ್ಸ್‌ನ ಅಭಿಮಾನಿ ಕಮ್ಯುನಿಸಂ ಪ್ರಸಾರಕ್ಕಾಗಿ ಅವರು ದರ್ಶಕವಿಡೀ ಕೆಲಸಮಾಡಿದರು. ಫೈಜ್‌ಗೆ ಲೆನಿನ್ ಶಾಂತಿ ಪ್ರಶಸ್ತಿ ನೀಡಿಗೌರವಿಸಲಾಗಿದೆ. ಅವರ ಕಾವ್ಯ ರಷ್ಯನ್ ಭಾಷೆಗೂ ಅನುವಾದಿತವಾಗಿದೆ.

ಫೈಜ್‌ನ ಕಾವ್ಯಗಳು

1. ನಕ್ಷ್-ಏ-ಫರ್ಮಾನಿ (1943)
2. ದಸ್ತ್-ಏ-ಸಾಬಾ(1952)
3. ಜಿಂದಾನ್- ನಾಮಾ (1956)
4. ದಸ್ತ್-ಏ- ತಹ್-ಏ-ಸಂಗ್(1965)

ನನ್ನ ಅತಿಥಿಗಳು

ನನ್ನ ದುಃಖದ ಬಾಗಿಲು ತೆರೆಯುತ್ತಿದೆ
ಅಗೋ ಅಲ್ಲಿ ನನ್ನ ಅತಿಥಿಗಳು ಬರುತ್ತಿದ್ದಾರೆ
ಅಲ್ಲಿ ನೋಡಿ ನಿರಾಶೆಯ ಜಮಖಾನ ಹಾಸಲು
ಸಂಧ್ಯೆ ಸನ್ನದ್ಧವಾಗಿ ನಿಂತಿದ್ದಾಳೆ
ನೋವಿನ ಬಗ್ಗೆ ನಕ್ಷತ್ರಗಳಿಗೆ
ತಿಳಿಸಲು ನಿಶೆ ಆಗಲೆ ಹೊರಟು ನಿಂತಿದ್ದಾಳೆ
ಇತ್ತ ನೋಡಿರಿದೋ ಹೊಳೆಹೊಳೆವ
ಶಸ್ತ್ರ ಹಿಡಿದು ನೆನಪಿನ ಗಾಯವ
ಬಗೆಯ ಹೊರಟಿದ್ದಾಳೆ ಉಷೆ
ತೋಳಿನಲ್ಲಿ ಬೆಂಕಿಯ
ಚಾಟಿಗಳನ್ನಡಗಿಸಿಕೊಂಡು
ಮಧ್ಯಾಹ್ನ ಕಾದು ನಿಂತಿದೆ.
ಹಗಲು ರಾತ್ರಿಗಳಲ್ಲಿ ನನ್ನ ನೋಡ ಬರುವ
ಇವರೆಲ್ಲ ನನ್ನ ಅತಿಥಿಗಳು
ಆದರೆ ಅವರು ಯಾವಾಗ ಬರುತ್ತಾರೆ
ಯಾವಾಗ ಹೋಗುತ್ತಾರೆಂದು
ನನಗೆ ತಿಳಿಯದು
ನನ್ನ ಆಲೋಚನೆಗಳು ಶಂಕೆ
ಅನುಮಾನಗಳ ಹೊತ್ತು
ಹಲವಾರು ಪ್ರಶ್ನೆಗಳ ಕೇಳುತ್ತ
ಸದಾ ಮನೆಯತ್ತ ಚಲಿಸುತ್ತಿರುತ್ತವೆ.

* * *

ಶಿಲೆಯ ದನಿ

ಈ ಒಂಟಿ ಬೆಟ್ಟದ ಮೇಲೆ
ನನ್ನ ನೀ ಸಂಧಿಸಿದೆ
ಇದು ನಮ್ಮ ಮಿಲನದ ಶಿಖರ
ದುಗುಡ ತುಂಬಿದ, ಒರಟಾದ
ಈ ಒಂಟಿ ಬೋಳು ಬೆಟ್ಟ
ನನ್ನ ನಿಷ್ಠೆಯ ಶಿಲೆ.
ಗಾಳಿಯಬ್ಬರಕೆ ನನ್ನುಡುಗೆ
ಹೇಗೆಂದರೆ ಹಾಗೆ ಹಾರಾಡುತಿದ್ದರು
ಹರಿದ ಶಾಲಿನಲಿ ನಿನ್ನುಸಿರ ಕೂಡಿಸಿಕೊಂಡು
ಶತಮಾನಗಳಿಂದ ನಾನಿದನು
ತಬ್ಬಿನಿಂತಿದ್ದೇನೆ
ಎಲ್ಲವನು ರಕ್ತಸಿಕ್ತಗೊಳಿಸುವಂತೆ
ನನ್ನ ಹೃದಯದಾಳವ ಬಗೆದು
ಭೇದಿಸಿರುವೀ ಶಿಲೆಯ
ಹರಿತಖಡ್ಗದ ಮೊನೆಗೆ
ಅಂಟಿಕೊಂಡಿರುವೆ ಇನ್ನೂ.
ಆದರೆ ಶತಮಾನಗಳಿಂದ
ನಾನಿದನು ಅಪ್ಪಿಕೊಂಡೇ ನಿಂತಿದ್ದೇನೆ
ಈ ಆಯಾಸಗೊಂಡ ಹಕ್ಕಿಯ ಸಂಗಡ
ನನ್ನದೊಂದು ಸಂದೇಶ ನಿನಗೆ ನಿ
ಸಂತಸಗೊಳ್ಳದಿರುವೆಯ ನೀನು
ಶಿಲೆಗಳು ಕಣ್ಣುಕೋರೈಸುವ
ವಜ್ರಗಳಾಗುತ್ತವೆ
ಶಿಲೆಗಳೊಳಗಿಂದ ಗುಲಾಬಿಗಳು
ಮೂಡಿ ನಿಲ್ಲುತ್ತವೆ.

* * *

ಕಿಷ್ವಾರ್ ನಾಹೀದ್

ಈ ಪಾಕಿಸ್ತಾನಿ ಕವಯಿತ್ರಿ ಅವಿಭಜಿತ ಭಾರತದ ಬುಲಂದ್ ಷಹರ್‌ನಲ್ಲಿ 1940 ರಲ್ಲಿ ಜನಿಸಿದರು. ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರೆಯಾದ ಇವರು ಉರ್ದು ಭಾಷೆಯಲ್ಲಿ ಬರೆಯುವ ಪಾಕಿಸ್ತಾನದ ಪ್ರಸಿದ್ಧ ಸ್ತ್ರೀವಾದಿ ಕವಯಿತ್ರಿ. ತನ್ನ ಬರವಣಿಗೆ ಎಂದರೆ ಗಂಡು-ಹೆಣ್ಣಿನ ಸಂಬಂಧವನ್ನು ಪುನರ್‌ವ್ಯಾಖ್ಯಾನಕ್ಕೊಳಪಡಿಸುವ ಒಂದು ಪ್ರಯತ್ನ ಎಂದು ವಿವರಿಸಿಕೊಂಡಿದ್ದಾರೆ. ಸಂದರ್ಭಗಳಿಂದಾಗಲಿ ಅಥವಾ ಪುರುಷರಿಂದಾಗಲಿ ಮೂಲೆಗುಂಪಾಗದ ವಾಸ್ತವವಾದಿ ಎಂದು ತನ್ನನ್ನು ಘೋಷಿಸಿಕೊಂಡಿದ್ದಾರೆ. ಅವರ ಕೆಲವು ಕಾವ್ಯ

ಕೃತಿಗಳು

1. ಲಬ್-ಇ-ಗೋದಾ (1968) (ಗಜಲ್‌ಗಳ ಸಂಗ್ರಹ)
2. ಅಶ್ತ್-ಇ-ಗೈಸ್ (1312ಪುಟಗಳ ಸಂಗ್ರಹ)

ಪಾಕಿಸ್ತಾನದ ನ್ಯಾಷನಲ್ ಕೌನ್ಸಿಲ್ ಆಫ್ ಆರ್ಟ್ಸ್‌ನ ನಿರ್ದೇಶಕರಾದ ಇವರು ಇದುವರೆಗೆ 25 ಕೃತಿಗಳನ್ನು ಪ್ರಕಟಿಸಿದ್ದಾರೆ.

ಆ ಹೆಣ್ಣು ನಾನಲ್ಲ

ನಿನಗೊಮ್ಮೆ ಬೂಟು ಕಾಲು ಚೀಲಗಳ
ಮಾರುತಿದ್ದಳಲ್ಲ
ಆ ಹೆಣ್ಣು ನಾನಲ್ಲ!
ನೆನಪಿದೆಯ ನಿನಗೆ?
ನೀ ಮಾತ್ರ ಗಾಳಿಯಂತೆ
ಸ್ವೇಚ್ಛೆಯಾಗಿ ಅಲೆದಾಡಿಕೊಂಡಿದ್ದು
ನಿನ್ನ ಕಲ್ಲು ಗೋಡೆಗಳ ನಡುವೆ
ಅಡಗಿಸಿಟ್ಟಿದ್ದೆಯಲ್ಲ ಒಬ್ಬಳನು
ಆ ಅವಳೆ ನಾನು!
ಪಾಪ ! ತಿಳಿದಿರಲಿಲ್ಲ ನಿನಗೆ
ಕಲ್ಲುಗಳಿಂದ ನನ್ನ
ಸೊಲ್ಲ ಅಡಗಿಸಲಾಗದೆಂದು!
ಗೊಡ್ಡು ಸಂಪ್ರದಾಯಗಳ
ಕುರುಡು ಕಂದಾಚಾರಗಳ
ಹೊರೆಯ ಅಡಿಯಲ್ಲಿ
ಅದುಮಿಟ್ಟಿದ್ದೆಯಲ್ಲ ನೀನು
ಆ ಅವಳೆ ನಾನು!
ಪಾಪ! ತಿಳಿದಿರಲಿಲ್ಲ ನಿನಗೆ
ಬೆಳಕ ಕತ್ತಲೆಯಲ್ಲಿಬಂಧಿಸಿಡಲಾಗದೆಂದು!
ಯಾರ ಮಡಿಲಿಂದ ನೀನು
ಹೂವುಗಳ ಹೆಕ್ಕಿಕೊಂಡು,
ಮುಳ್ಳುಗಳ ನಟ್ಟು ಬಿಟ್ಟೆಯೋ
ಆ ಹೆಣ್ಣು ನಾನೆಂಬುದ ಮರೆಯದಿರು!
ಪಾಪ! ತಿಳಿದಿರಲಿಲ್ಲ ನಿನಗೆ

ಸಂಕೋಲೆಗಳು ನನ್ನ ಸೌರಭವ
ಸೊರಗಿಸಲಾರವು ಎಂದು!
ನನ್ನದೇ ಪಾತಿವ್ರತ್ಯದ ಹೆಸರಿನಲ್ಲಿ
ನನ್ನ ಕೊಳ್ಳುಟ ಮಾರಾಟ
ನಡೆಸಿದ್ದೆಯಲ್ಲ ನೀನೊಮ್ಮೆ
ಆ ಹೆಣ್ಣು ನಾನೆ!
ಪಾಪ1 ತಿಳಿದಿರಲಿಲ್ಲ ನಿನಗೆ
ನಾನು ಮುಳುಗುತ್ತಿರುವಾಗಲೂ
ನೀರ ಮೇಲೆ ನಡೆಯಬಲ್ಲೆ ಎಂದು!
ನಿನ್ನ ಮೇಲಿನ ಹೊರೆಯ
ನೀಗಿಕೊಳ್ಳುವ ಸಲುವಾಗಿ
ನನ್ನ ಮದುವೆಯ ಮಾಡಿ ನೀನು.
ಕೈತೊಳೆದುಕೊಂಡು ಬಿಟ್ಟೆಯಲ್ಲ
ಅವಳೆ ನಾನು!
ಪಾಪ! ತಿಳಿದಿರಲಿಲ್ಲ ನಿನಗೆ
ಪರತಂತ್ರ ಮನಸ್ಸುಗಳ ರಾಷ್ಟ್ರ
ಸ್ವತಂತ್ರವಾಗಿರಲಾರದು ಎಂದು!
ಯಾರ ತಾಯ್ತನ, ಪಾತಿವ್ರತ್ಯ
ನಿಷ್ಠೆಗಳನು
ವ್ಯಾಪಾರದ ಸರಕಾಗಿಸಿದೆಯೋ ನೀನು
ಅವಳೆ, ಅವಳೆ, ನಾನು!
ನಾನೀಗ ಸ್ವತಂತ್ರವಾಗಿ ಅರಳುವ ಕಾಲ
ಆ ಭಿತ್ತಿ ಪತ್ರದಲ್ಲಿದ್ದಾಳಲ್ಲ!
ಬೂಟು ಕಾಲು ಚೀಲಗಳ ಮಾರುತ್ತಿರುವ
ಅರೆನಗ್ನ ಹೆಣ್ಣು
ಅಲ್ಲ! ಅಲ್ಲ! ಖಂಡಿತ
ಆ ಹೆಣ್ಣು ನಾನಲ್ಲ

* * *

ಸಂಕೀರ್ಣ

* ಸರೋಜಿನಿ ನಾಯ್ಡು (ಇಂಗ್ಲಿಷ್)
* ಶಿವ್, ಕೆ. ಕುಮಾರ್ (ಇಂಗ್ಲಿಷ್)
* ಬಾಬಾ ಆಮ್ಟೆ (ಮರಾಠಿ - ಹಿಂದಿ)
* ನರ್ಮದಾ ಪ್ರಸಾದ್ ತ್ರಿಪಾಠಿ
* ಭಾನೂಜಿರಾವ್(ಒರಿಯಾ- ಇಂಗ್ಲಿಷ್)
* ಗೋಪಾಲ್ ಹೊನ್ನಲಗೆರೆ (ಇಂಗ್ಲಿಷ್)
* ಕಾರ್ಲ್ ಮಾರ್ಕ್ಸ್ (ಇಂಗ್ಲಿಷ್)

ಸರೋಜಿನಿ ನಾಯ್ಡು (ಜನನ 13-2-1879)

ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲೊಂದು ಪ್ರಮುಖ ಹೆಸರಾದ ಸರೋಜಿನಿಯವರು ಸುಪ್ರಸಿದ್ಧ ಕವಿಯತ್ರಿಯೂ ಹೌದು. ಭಾರತದ ಕೋಗಿಲೆ (Nightingale of india) ಎಂದೇ ಹೆಸರಾದವರು. ಇವರ ತಂದೆ ಅಘೋರನಾಥ ಚಟ್ಟೋಪಾಧ್ಯಾಯರು. ಕೇವಲ 12 ನೇ ವಯಸ್ಸಿಲ್ಲಿ ಆಗಿನ ಮದ್ರಾಸ್ ವಿಶ್ವವಿದ್ಯಾಲಯ ಪ್ರವೇಶಿಸಿ ಅನಂತರ ಲಂಡನ್‌ನಲ್ಲಿ ಕಿಂಗ್ಸ್ ಕಾಲೇಜಿನಲ್ಲಿ ವ್ಯಾಸಂಗ ಮುಂದುವರೆಸಿದರು. ಅಲ್ಲಿಯೇ ಶ್ರೀ ಗೋವಿಂದರಾಜುಲು ನಾಯ್ಡು ಅವರನ್ನು ಪ್ರೇಮಿಸಿ ಮದುವೆಯಾದರು. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲ ಭಾರತೀಯ ಮಹಿಳಾ ಅಧ್ಯಕ್ಷೆ. ಆಳುವ ಬ್ರಿಟಿಷ ಸರ್ಕಾರ ಅವರನ್ನು ಅನೇಕ ವರ್ಷಗಳ ಕಾಲ ಸೆರೆಯಲ್ಲಿಟ್ಟಿತ್ತು. ಆಗಿನ ಸಂಯುಕ್ತ ಪ್ರಾಂತದ (ಈಗಿನ ಉತ್ತರ ಪ್ರದೇಶ) ಗವರ್ನರ್ ಆಗಿದ್ದರು. ಇಗ್ಲೆಂಡಿನ Royal society of literature ಗೆ ಆಯ್ಕೆಯಾಗಿದ್ದರು. ಇಂಗ್ಲೀಷ್‌ನ ರಮ್ಯ ಸಂಪ್ರದಾಯದಿಂದ ಪ್ರಭಾವಿತರಾದ ಅವರು ಅನೇಕ ಕವನ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಪ್ರೀತಿ, ಪ್ರಕೃತಿ ಬದುಕು ಮತ್ತು ಸಾವು ಅವರ ಬಹುಪಾಲು ಕವನಗಳ ವಸ್ತು ಎಂದು ಹೇಳಲಾಗಿದೆ.

ಅವರ ಕೃತಿಗಳು

1. The Broken wing (1917)
2. The Bird of Time (1912)
3. The golden Threshold (1905)
4. Feather of Dawn (1961

ರಾಧೆಯಹಾಡು

೧

ಮೊಸರನು ಮಾರಲು ಮಥುರೆಯ
ಜಾತ್ರೆಗೆ ನಾ ಹೋದೆ
ಕಡಸುಗಳಾದರೊ ಮೆಲುದನಿಯಲಿ
ಅಂಬಾ ಎಂದೆನ್ನುತಿರೆ
ಶ್ರಾವಣದೀ ಮೆಲುಗಾಳಿಗೆ
ಬಾನೊಳು ತೇಲಾಡುವ
ಈ ಬಿಳಿಮುಗಿಲಿನ ಚೆಲುಬಣ್ಣದ
ಮೊಸರನು ಕೊಳ್ಳುವಿರಾ ಎಂದು
ದನಿಗೈಯಲು ನಾ ಬಗೆದೆ.
ಆದರೆ ನನ್ನೀ ಹೃದಯದೊಳೆಲ್ಲ
ನಿನ್ನದೆ ಚೆಲುವದು ತುಂಬಿರೆ
ಓ ಪ್ರಿಯನೆ
ಗೋವಿಂದ! ಗೋವಿಂದ!
ಗೋವಿಂದ! ಗೋವಿಂದ!
ಎಂದು ನನಗೇ ಅರಿವಿಲ್ಲದೆ
ದನಿ ತೆಗೆದೆನು ಮೋಹನನೆ!
ನಕ್ಕರು ಅವರೆಲ್ಲರು ನನ್ನಾ ದನಿ ಕೇಳಿ
ಮೆಲ್ಲಗೆ ಮೃದುಗತಿಯಲಿ
ಸಾಗಿದ್ದಳಹಾ! ಯಮನೆ.

೨

ಕೊಡಗಳ ಹೊತ್ತು ಮಥುರೆಯ ಯಮುನೆಗೆ ತೆರಳಿದೆನು
ಹುಟ್ಟನು ಹಾಕುತ ಹರುಷದಲ್ಲಿದ್ದರು ಅಂಬಿಗರು
"ಕುಣಿಯುತ ನಲಿಯುತ ಹಾಡನು ಹಾಡುತ
ಕೇಸರಿ ಬಣ್ಣದ ಸೀರೆಯನುಟ್ಟು

ರಾಜವಸಂತನ ಸ್ವಾಗತಿಸುವ ನಾವ್
ಬಾರೆಸಖಿ! ಹೂ ಮುಗುಳನು
ತಿರಿಯುವ ಬಾರೆಲೆ ಗೆಳತಿ"
ಎಂದೆಲ್ಲರು ಸಖಿಯರು ಕರೆದರು
ನನ್ನನು ದೊರೆಯೆ
ಆದರೆ ಓ ಪ್ರಿಯನೆ
ನಿನ್ನ ಮಧುರಾತಿ ಮಧುರ ಗಾನವು
ಹೃದಯವ ತುಂಬಿರೆ
ನನಗೇ ಅರಿವಿಲ್ಲದೆ
ಗೋವಿಂದ! ಗೋವಿಂದ!
ಗೋವಿಂದ! ಗೋವಿಂದ!
ಎಂದು ದನಿ ತೆಗೆದೆನು ನಾನು
ದನಿ ಕೇಳಿದ ಸಖಿಯರು
ಅಣಕವಾಡಿದರೆನ್ನನು ದೊರೆಯೆ!
ಕಡುಸೊಂಪಲಿ ಸಾಗಿದ್ದಳ ಹಾ! ಯಮುನೆ

೩

ಕಾಣಿಕೆಗಳ ಕೊಂಡೊಯ್ದೆನು ನಾ
ಮಥುರೆಯ ದೇಗುಲಕೆ
ದೀವಿಗೆಗಳ ಪ್ರಭೆ ಕಣ್ಕೋರೈಸಿತ್ತು
ವೇದಿಕೆಯೇರುತೆ ನಾನಾಗ
"ಪ್ರಜ್ವಲಿಸುವ ಓ ಪ್ರದೀಪಗಳೆ
ಹಗಲಿರುಳೆನ್ನನು ಬಿಡದೆಲೆ ಕಾಯಿರಿ ನೀವೆಂದು
ಕೈಗಳ ಮುಗಿಯುತೆ
ಸ್ತುತಿಗೈದೆನು ನಾನು!
ಶಂಖಗಳಾಗಲೆ ಭು ಭು ಭೂ-ಭೂ ಎಂದು
ಮೊಳಗಿದವು

ನಿನ್ನಯ ಪೂಜೆಯಲಿ ಮೈಮರೆಯುತೆ
ನನಗೇ ಅರಿವಿಲ್ಲದೆ
ಗೋವಿಂದ! ಗೋವಿಂದ|
ಗೋವಿಂದ| ಗೋವಿಂದ|
ಎಂದು ಕೊರಲೆತ್ತಿ ಕರೆದು ಬಿಟ್ಟೆನು ನನ್ನೊಲವೇ
ಕೆರಳಿದರೆಲ್ಲರು ಕರೆಯಾಲಿಸಿ ಪ್ರಭುವೇ
ಹೊಳೆ ಹೊಳೆಯುತ ಹರಿದಿದ್ದಳಹಾ! ಯಮುನೆ.

* * *

ಡಾ. ಶಿವ್ ಕೆ. ಕುಮಾರ್(ಜನನ 1921)

ಇಂಗ್ಲಿಷ್ ಭಾಷೆಯಲ್ಲಿ ಬರೆಯುತ್ತಿರುವ ಹೆಸರಾಂತ ಭಾರತೀಯ ಲೇಖಕರಾದ ಶಿವ್ ಕೆ. ಕುಮಾರ್ ಬಹು ಮುಖ ಪ್ರತಿಭೆಯ ಬರಹಗಾರರೆಂದೇ ಖ್ಯಾತರಾಗಿದ್ದಾರೆ. ಲಾಹೋರ್ ಇವರ ಜನ್ಮಸ್ಥಳ. ಕೇಂಬ್ರಿಜ್ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪಡೆದಿದ್ದಾರೆ. ಅವರ ಬಗ್ಗೆ ಹೇಳಲಾದ ಮಾತೆಂದರೆ, ಅವರು ಇಂಗ್ಲಿಷಿನ ಸೃಜನಾತ್ಮಕ ಬರಹಕ್ಕೊಂದು ಹೊಸ ಆಯಾಮ ತಂದು ಉಕೊಟ್ಟವರು. ಕಾದಂಬರಿ ಮತ್ತು ಸಣ್ಣಕತೆಗಳನ್ನೂ ರಚಿಸಿರುವ ಶಿವ್ ಕೆ. ಕಕುಮಾರ್ Royal Society of Literature ನ Fellow ಆಗಿದ್ದಾರೆ. 1987ರಲ್ಲಿ ಅವರ "Trap falls in Sky ಎಂಬ ಕಾವ್ಯ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ.

ಅವರ ಕೃತಿಗಳು (ಕಾವ್ಯ)

1. Articulate silence
2. Cobwebs in the Sun
3. Wood peekers
4. Trap Falls in the Sky
5. Subter Fuges

ಸಣ್ಣ ಕತೆ

1. Beyond love and other series

ವಿಮರ್ಶೆ

1. Bergson and the stream of consscіousness

ಭಾರತದ ನಾರಿಯರು

ಈ ಸುಡು ಸುಡು ನಾಡಿನಲ್ಲಿ ನಾರಿಯರು
ಮಣ್ಣಿ ಗೋಡೆಗಳ ಮೇಲೆ ತಮ್ಮ
ಬಿಗಿದ ಹುಬ್ಬುಗಳ ಅಚ್ಚೊತ್ತುವುದಿಲ್ಲ
ಊರ ಬಾವಿ ಕಟ್ಟೆಯ ಮೇಲೆ
ಇರಿಸಿದ ಖಾಲಿ ಕೊಡಗಳ ಹಾಗೆ ಅವರು
ಕಾಯುತ್ತಾರೆ. ಈ ನಾಗವೇಣಿಯರು
ಮಿಸ್ಸಿಸಿಪಿ ನದಿಯ ಹಾಗೆ ನೀಳವಾದ
ತಮ್ಮ ಹೆರಳ ಹೆಣಿಗೆ ಹೆಣಿಗೆಯಲ್ಲೂ
ಮನೋ ಕಾಮನೆಗಳ ಹೆಣೆದುಕೊಂಡು
ನೀರ ಕನ್ನಡಿಯಲ್ಲಿ ಕಣ್ಣ ಕಂಬನಿಗಾಗಿ
ಆಳ ನೋಟವ ಹರಿಸುತ್ತಾರೆ.
ಮರಳ ರಾಶಿಯ ಮೇಲೆ ನಕ್ಷತ್ರ
ರಾಶಿಗಳ ಕೆದರಿದ ಹಾಗೆ ಏನೇನೋ
ಗೀಚುತ್ತ ಹಚ್ಚೆ ಹೊಯ್ದು ತಮ್ಮ
ಘನ ಜನಗಳ ಕಾಪಿಡುವರು.
ಹೊತ್ತು ಕಂತುವ ತನಕ
ಸಂಜೆಯ ಕರಿನೆರಳು ಮೊಗವ ಮುಸುಳಿಸಿ
ದೂರಬೆಟ್ಟದ ಹಿಂದೆ ಬಯಲಾಗುವ ತನಕ
ತಮ್ಮ ಇನಿಯರ ಬರವಿಗಾಗಿ ಕಾಯುತ್ತಾರೆ

* * *

ನರ್ಮದಾ ಪ್ರಸಾದ್ ತ್ರಿಪಾಠಿ (ಜನನ27-3-1932)

ಉತ್ತರ ಪ್ರದೇಶದ ಫೈಜಾಬಾದ್ ಜಿಲ್ಲೆಯ ಕಂದಯೀ ಊರಿನವರು. ಹಿಂದೀ ಹಾಗೂ ಇಂಗ್ಲೀಷ್‌ಗಳಲ್ಲಿ ಪದವಿ ಗಳಿಸಿದ್ದಾರೆ. ಸಾಹಿತ್ಯ ಮತ್ತು ಪತ್ರಿಕಾಕ್ಷೇತ್ರ ಅವರ ಸಾಧನೆಯ ಕ್ಷೇತ್ರಗಳು. 'ದೈನಿಕ ಪ್ರತಾಪ್' ದೈನಿಕ ಭಾಸ್ಕರ, ಹಿತವಾದ್, ಮಧ್ಯಪ್ರದೇಶ್ ಕ್ರಾನಿಕಲ್, 'ನವಜೀವನ್' ಮುಂತಾದ ಪತ್ರಿಕೆಗಳ ಸಂಪಾದಕರಾಗಿ ಇಲ್ಲವೆ ಸಂಪಾದಕ ಮಂಡಳಿಯಲ್ಲಿ ಒಬ್ಬರಾಗಿ ಕಾರ್ಯ ನಿರ್ವಹಿಸಿದ ಖ್ಯಾತಿ ಅವರದು. ಪ್ರಸ್ತುತ 'ಪ್ರಹಾರ್' ಎಂಬ ಸಾಹಿತ್ಯ ಪತ್ರಿಕೆ ಹಾಗೂ 'ನಿರಾಲಾ' ಎಂಬ ಸಾಪ್ತಾಹಿಕದ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಆರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಮಾನ್ಯ ತ್ರಿಪಾಠಿಯವರಿಗೆ ಸಾಹಿತ್ಯ ಮತ್ತು ಪತ್ರಿಕಾ ರಂಗಗಳಲ್ಲಿನ ಸೇವೆಗೆ ಸಾಹಿತ್ಯ ಶ್ರೀ' ವಿದ್ಯಾ ವಾಚಸ್ಪತಿ, ಗಣೇಶ್ ಶಂಕರ ವಿದ್ಯಾರ್ಥಿ ಸಮ್ಮಾನ್ ಮೊದಲಾದ ಅನೇಕ ಪುರಸ್ಕಾರ ಹಾಗೂ ಪ್ರಶಸ್ತಿಗಳು ಸಂದಿವೆ.

***

ಮರಣೋತ್ತರ ಕವಿ

ಇಂದಲ್ಲದಿದ್ದರೆ ನಾಳೆ
ನಾಡಿದ್ದು ಅಥವಾ
ಇನ್ನೆಂದೋ ಒಂದು ದಿನ
ನಾನು ಮರಣಿಸಿದಂದು
ನನ್ನ ಪ್ರೇಯಸಿಯರು ತಮ್ಮಲ್ಲೇ
ಪಿಸುಗುಟ್ಟಿಕೊಳ್ಳುತ್ತಾರೆ.
ಹೋಗಿ ಬಿಟ್ಟನವ
ನಮ್ಮೆಲ್ಲರ ರೂಪ ಗುಣ ಬಣ್ಣಗಳ
ಸೌಂದರ್ಯ ರೇಖೆಗಳಿಂದ
ಚೆಂದಗೊಳಿಸುತ್ತಿದ್ದವ
ಹೋಗಿ ಬಿಟ್ಟ"
ಸಾಂಸಾರಿಕ ಸಮಸ್ಯೆಗಳು
ಇನ್ನಷ್ಟು ಗೋಜಲಾಗುತ್ತವೆ
ದುಃಖ ಎಲ್ಲರನು ಮುತ್ತುವುದು
ಮಿತ್ರರನ್ನು ಜನ ಕೇಳುತ್ತಾರೆ
ಅವರಾದರೋ
ಇನ್ನಷ್ಟು ವ್ಯಥಿತರಾಗಿ
ಏನನೂ ಆಡದೆಯೆ ಮೌನ ತಾಳುವರು
ಪಾರ್ಕಿನ ಆ ಶೂನ್ಯಮೂಲೆ ಕೇಳುತ್ತದೆ
ಸುಗಂಧ ಯುಕ್ತ ಸಂಜೆಗಳು
ನನ್ನನ್ನು ಕೂಗಿ ಕರೆಯುತ್ತವೆ
"ಎಲ್ಲಿ ಹೋದನವ
ಹೊಳೆವ ಹೊಂಬಣ್ಣಗಳ, ರೇಖೆಗಳ
ಆಕೃತಿಯ ಪ್ರೇಮಿ, ಆ ಭಾವುಕ

ಹೋದನೆಲ್ಲಿಗೆ ಎಂದು"
ಟೆಲಿಫೋನುಗಳು ಕೇಳುತ್ತವೆ ನನ್ನನ್ನು
ಅವಕ್ಕೆ ಸಿಗುವುದು ಅಳುದನಿ ಮಾತ್ರ

ಇನ್ನಷ್ಟು ರಚನೆಗಳ ಕಳಿಸಿಕೊಡಿ ಎಂಬ
ಸಂಪಾದಕರ ಪತ್ರಗಳು
ಉತ್ತರವ ಕಾಣದೆಯೆ ಉಳಿಯುವುವು!
ರೇಡಿಯೋ ಸ್ಟೇಷನ್‌ನಿಂದ ಬಂದ
ರಿಜಿಸ್ಟರ್ಡ್ ಕಾಗದವೂ ರುಜುವಿಲ್ಲದೆ
ಹಾಗೆಯೇ ತಿರುಗಿ ಹೋಗುವುದು
ಆ ದಿನ
ನನ್ನ ಶತ್ರುಗಳು ಮಿತ್ರರು ಇಬ್ಬರೂ
ಸೇರಿರುವ ಸಾಹಿತ್ಯ ಸಭೆಯಲ್ಲಿ
ಅಧ್ಯಕ್ಷ ಪೀಠದಲ್ಲಿ ಕುಳಿತ
ಯಾರಾದರೊಬ್ಬ ಹೇಳುತ್ತಾನೆ ಹೀಗೆ :
ಭಾರಿ ಭಾರಿ ಸಮ್ಮಾನಗಳ ಪಡೆದಿದ್ದ
ಕವಿ ಅವನು ಬಡಪಾಯಿ ಪಾಪ
ಅಕಾಲದಲ್ಲಿ ಅಸುನೀಗಿದ"
ಆ ಮೇಲಿನ್ನೇನು
ಕೋರಿನನ್ಮಾತಕ್ಕೆ ಶಾಂತಿಯನ್ನು
ಖಂಡಿತ ನೇತುಹಾಕುವರು
ನನ್ನ ಭಾವ ಚಿತ್ರವನ್ನು
ಎಲ್ಲೆಲ್ಲೋ ಚೆದುರಿರುವ
ನನ್ನೆಲ್ಲ ರಚನೆಗಳ ಒಟ್ಟುಗೂಡಿಸಿ
ಛಾಪಿಸುವರು ಪುಸ್ತಕವನ್ನು
ಆದರೆ...............

* * *

ಭಾನೂಜಿರಾವ್(ಜನನ 1926)

ಒರಿಯಾ ಭಾಷೆಯ ಸುಪ್ರಸಿದ್ಧ ಕವಿ. ಮೂಲತ ಅಧ್ಯಾಪಕರು. ಅವರ ಕಾವ್ಯದ ಬಹುವಿಶಿಷ್ಟ ಗುಣವೆಂದರೆ ಅದರ ಸುಲಭ ಸಂವಹನ ಎಂದು ಹೇಳಲಾಗಿದೆ. ಅವರ ಕೆಲವು ಕೃತಿಗಳು

1. ನೂತನ್ ಕವಿತಾ 2) ಬಿಸಾದಾ ಏಕಋತು 3. ಚಂದನಾ ಬನಾದೇ ಏಕಾ 4) ದರ್ಪಣಾ ಅಂಗಾರೇ. 1989 ರಲ್ಲಿ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು.

ಹೇಮಂತ ಬಂದಿದೆ

ಹೇಮಂತ ಬಂದಿದೆ ಮಾವಿಗೆ
ಮತ್ತಾ ಸಾಲವೃಕ್ಷಕೆ ಮೆಲ್ಲಗೆ
ಕಳ್ಳ ಬೆಕ್ಕಿನ ಹಾಗೆ ಸರಿದು
ಬಂದಿದೆ ಸದ್ದಿಲ್ಲದೆ
ದ್ರಾಕ್ಷಿಯ ದಟ್ಟ ಹಂದರದ ಹಾದಿ ಹಿಡಿದು
ಹಸಿರು ಹಂಬಿನ ರಜನಿಗೆ
ಮರಳ ಹಾಸಲಿ ಮಲಗಿ ನಿದ್ರಿಪ
ಸುಕ್ಕಿ ಸೊರಗಿದ ಮುದಿಯಳಂತಿಹ
ಹೊಳೆಯ ಮೇಗಡೆ ಬಾಗುತೆ
ಹೇಮಂತ ಬಂದಿದೆ ಲೋಕಕೆ
ಹೇಮಂತ ಮುಸುಕಿದೆ ಸಂಜೆಯ ಶೂನ್ಯವ
ಮತ್ತಾ ಶೂನ್ಯದಲಿ
ಎಲ್ಲ ಎಲ್ಲವು ಅಡಗಿದೆ!
ಎಲ್ಲಿ ನೋಡಿದರಲ್ಲಿ ನೆರಳೇ ನೆರಳು.
ಸಂಜೆ ಎಲ್ಲೆಡೆ ಮಂಜು ಮುಸುಕಿದೆ
ಹೇಮಂತ ನಿಂತಿದೆ ನನ್ನೆದುರಲಿ
ಗಾಳಿ ಹಿತಕರವಾಗಿದೆ
ಕ್ರೂರತನವನು ತೊರೆದಿದೆ
ಅಲ್ಲೆ ದೂರದಲೆಲ್ಲೊ
ಅಬ್ಬರಿಸುತ್ತಿದೆ ಶಿಶಿರವು
ನಮ್ಮೆಲ್ಲರ ನಗ್ನತೆಯನು
ನುಚ್ಚುನೂರಾಗಿಸಲು
ಹಲ್ಲುಗುರುಗಳ ಮಸೆಯುತ!
ಹಾಲು ತುಂಬಿದ ಹಸಿರುಗದ್ದೆಯ

ಹಿಮವು ತಬ್ಬಿದೆ ತಣ್ಣಗೆ
ಹೇಮಂತ ಬಂದಿದೆ ಮೆಲ್ಲಗೆ!
ಹಾರಾಡುವ ಒಂಟಿ ಗಾಳಿಪಟದಿಂದ
ತೆಳುಹಳದಿಯ ತೆರೆಯೊಂದು
ಇಳಿಯುತಿದೆ ಇಳೆಗೆ
ಸೋತ, ಅಂಡಲೆತಕೊಳಗಾದ ಹಕ್ಕಿಯಂತೆ
ಸಂಜೆ ಗೂಡ ಸೇರುತಿದೆ
ಹೊಗೆ ದೂಳು ಮಂಜು ಎಲ್ಲೆಡೆ
ಇಡಿಕಿರಿದಿದೆ
ಕಾಡಿನ ಈ ಕಗ್ಗತ್ತಲೆಯಲಿ
ಮರಳ ದಿಣ್ಣೆಗಳ ಬದಿಯಲಿ
ಹೇಗೆ ನಿದ್ರಿಸುತ್ತಿದೆ ನೋಡು ಈ ಹೇಮಂತ
ತೆಳು ಹಳದಿ ಬಣ್ಣದ ಮೃತ ಗುಬ್ಬಚ್ಚಿಯಂತೆ
ಹೇಗೆ ಹರಡಿದೆ ನೋಡು
ಅದರ ಮಾಂಸ ಚೆಲ್ಲಾಪಿಲ್ಲಿಯಾಗಿ
ಹಸಿರು ಬಯಲಿನ ಮೇಗಡೆ!

***

ಗೋಪಾಲ್ ಹೊನ್ನಲಗೆರೆ

ಇಂಗ್ಲಿಷಿನಲ್ಲಿ ಕಾವ್ಯ ಬರೆದು ಹೆಸರಾದ ಭಾರತೀಯ ಲೇಖಕರು. ಆಂಧ್ರ ಪ್ರದೇಶದ ಗಡಿಭಾಗದಲ್ಲಿ ಪ್ರೌಢಶಾಲಾ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದ ಇವರು ಇದುವರೆಗೆ ಹಲವಾರು ಕವನ ಸಂಕಲಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವು A wad of poems ಮತ್ತು The gesture of Fleshless Sound. ಅವರ ಕವನಗಳಲ್ಲಿ ಹೆಸರು ವಾಸಿಯಾದ ಕವನಗಳೆಂದರೆ

1. The Donkeys...
2. The City
3. You cannot will
4. A Toast with Karma
5. Theme
6. How to Tame new pair of chappals

ಇವರ ಬಗ್ಗೆ ಹೆಚ್ಚು ವಿಷಯ ತಿಳಿದಿಲ್ಲ. ಹೆಚ್ಚಿನ ಸಂಖ್ಯೆಯ ಸತ್ವಪೂರ್ಣವಾದ ಕವನಗಳನ್ನು ರಚಿಸಿದ್ದರೂ ಪ್ರಸಿದ್ಧಿಗೆ ಬಂದಿಲ್ಲ.

ಕತ್ತೆಗಳು ಮತ್ತು ಕವಿತೆಗಳು

ದಂತ ಕತೆಯೊಂದರಲಿ
ಕೇಳಿದ್ದು: ಟಿಬೇಟಿನ ಕವಿಯೊಬ್ಬ
ಕುಳಿತು ರಾಶಿರಾಶಿ ಕವಿತೆಗಳ
ಬರೆದೇ ಬರೆದ.
ವರುಷವೆಂಬತ್ತೊಂಬತ್ತು ಆಗಿ
ತಲೆಬುರುಡೆ ಕನ್ನಡಿಯ ಹಾಗೆ
ಮಿರಮಿರನೆ ಮಿಂಚುವಂತಾಗಿ
ಸಾವು ಸಮೀಪಿಸುವ ಕಾಲಕ್ಕೆ
ಮೂರು ಕತ್ತೆಗಳು ಹೊರುವಷ್ಟು
ಕವನಗಳ ಸರಕು ಅವನ ಬಳಿ ಇತ್ತು.
ಬೌದ್ಧ ವಿಹಾರವೊಂದಕೆ ಅವನೆಲ್ಲ
ಸಮರ್ಪಿಸಿಬಿಡುವ ಹೇರಾಸೆ ಅವಗೆ.
ಮೂರು ಕತ್ತೆಗಳ ಬಾಡಿಗೆಗೆ ಗೊತ್ತು
ಮಾಡಿಕೊಂಡು ಕವನಗಳ
ಕತ್ತೆಗಳ ಬೆನ್ನಿಗೆ ಹೇರಿಸಿ
ಬದುಕಿನ ಬಗ್ಗೆ ಚಿಂತಿಸುತ ನಡೆದ.
ಆಗ ಮೂಳೆ ಕೊರೆವಂಥ ಚಳಿಗಾಲ
ಮುದುಕ ಚಳಿಗೆ ಗಡ ಗಡ ನಡುಗಿ
ಮುಂದೆ ನಡೆಯಲಾರದೆ ಹೋದ.
ಒಂದು ಕತ್ತೆಯ ಬೆನ್ನ ಹೇರಿದ್ದ
ಕವಿತೆಗಳ ಅಗ್ನಿಗಾಹುತಿಮಾಡಿ
ಬೆಂಕಿಯ ಬಳಿ ಕುಳಿತು ತನ್ನ
ಮೈ ಕಾಯಿಸಿಕೊಂಡ.
ಇನ್ನೇನು ಅಲ್ಲಿಂದ ಮುಂದೆ

ಹೊರಡ ಬೇಕೆನುವಾಗ ಯೋಚನೆಯೊಂದು
ಮನಕೆ ಸುಳಿಯಿತು.
ಕತ್ತೆಗಳೂ ಚಳಿಗೆ ನಡುಗುತಿದ್ದುದ ಕಂಡು
ಕತ್ತೆಗಳ ಕುರಿತ
ತನ್ನೊಂದು ಕವನವೂ ನೆನಪಾಗಿ
ಉಳಿದೆರಡು ಕತ್ತೆಗಳ
ಬೆನ್ನಮೇಲೆ ಹೇರಿದ್ದ ಕವನ ರಾಶಿಗಳ
ಬೆಂಕಿಗಾಹುತಿ ಮಾಡಿ.
ಮೂರೂ ಕತ್ತೆಗಳ ಬೆಂಕಿಯ ಸುತ್ತ ನಿಲಿಸಿ
ಅವುಗಳ ಚಳಿಯನು ಕೊಂದ.
ವಿಮರ್ಶಕರು ಹೇಳುವುದೆಂದರೆ
ಆ ಕವಿಯ ನಂತರದ ತಲೆ ಮೊರೆಯವರು
ಹುಡುಕಿತೆಗೆದ, ಸುಡದೆ ಉಳಿದ
ಅವನ ಕವನದ ಒಂದು ಸಾಲಷ್ಟೆ ಸಾಕು
ಅವನೆಲ್ಲ ಭಾವಗಳ ಅಭಿವ್ಯಕ್ತಿಸಲು ಎಂದು.
ನಿಮ್ಮ ಕವಿತೆಗಳ ಹೊರುವಂಥ
ನಿಮ್ಮ ಸವಾರಿ ಕತ್ತೆಯನು
ಹುಡುಕಿ ನೀವೀಗ!

* * *

ಹುಲ್ಲಿನ ಮಾತುಗಳು

ಹವಾನಿಯಂತ್ರಿತ ಕೊಠಡಿಗಳ
ಸೇರಿಕೊಳ್ಳುವರು ಜನರು
ಸೂರ್ಯನ ಉರಿಬಿಸಿಲಲ್ಲಿ ದುಡಿವ ಮಂದಿಗೆ
ಮೈಕೈಯೆಲ್ಲಾ ಬೊಬ್ಬೆ
ನಾನಾದರೊ ಸೂರ್ಯಕಾಂತಿಯ ಹೂವು
ತಣ್ಣಗೆ ಕೆಲಸ ಮಾಡುತ್ತಿದ್ದರೂ
ಸೂರ್ಯನ ಝಳ ತಾಕದು ನನ್ನ

ಭೂಕಂಪಕೆ ದೊಡ್ಡ ದೊಡ್ಡ ಬ್ಯಾಂಕುಗಳು
ಉರುಳಿಬೀಳುತ್ತವೆ
ನೆರೆನುಗ್ಗಿ ಸಂಸತ್ತು ನೀರು ಪಾಲು
ನಾನಾದರೊ ನೆಲದ ಅಡಿಯಲ್ಲಿ
ಹಾಯಾಗಿರುವ ಎರೆಹುಳು

ಬಿರುಗಾಳಿ ಬೀಸಿ ಕಣ್ಣುಕೋರೈಸುವ
ನಿಯಾನ್ ದೀಪಗಳನಾರಿಸುವುದು
ಪ್ರವಾದಿಗಳ ಪ್ರಭಾವಳಿಯ ನಳಿಸಿ ಹಾಕುವುದು
ಕಾಲ ತಾನು
ನಾನಾದರೊ ಹೊನ್ನಿಹುಳು
ಕಸಿಯಲಾರರು ಯಾರೂ ನನ್ನ ಪ್ರಭೆಯ
ನಾಡು ಜನರೊಂದಿಗೆ
ಜನರು ನಾಡೊಂದಿಗೆ
ಜೂಜಾಡುವರು ಪರಸ್ಪರ
ನಾನಾದರೊ ಹುಲ್ಲು.
ದುಡಿದು ಬದುಕುವೆನು ನಾನು

ನನ್ನ ಅದೃಷ್ಟ
ಹುಲ್ಲುಗಾವಲುಗಳು ಹಸಿರಾಗಿವೆ
ನನ್ನ ಕುದರೆಯೂ
ಎಂದಾದರೊಂದುದಿನ ಗೆಲ್ಲಬಹುದು

* * *

ಬಾಬಾ ಆಮ್ಟೆ (ಜನನ1914)

ಸಮಾಜ ಸೇವೆಯಲ್ಲಿಯೇ ಬದುಕಿನ ಸಾರ್ಥಕತೆ ಕಂಡುಕೊಂಡ ಅಂತಾರಾಷ್ಟ್ರೀಯ ಖ್ಯಾತಿಯ ಬಾಬಾ ಆಮ್ಟೆ ಮಹಾರಾಷ್ಟ್ರದವರು. ಅಲ್ಲಿಯ ವಾರ್ಟ್ ಜಿಲ್ಲೆಯ ಜಮೀನ್ದಾರಿ ಕುಟುಂಬದಲ್ಲಿ 1914 ರಲ್ಲಿ ಜನಿಸಿದರು. ಪೂರ್ಣ ಹೆಸರು ಮುರಳೀಧರ ದೇವದಾಸ ಆಮ್ಟೆ. ಶ್ರೀಮಂತ ಕುಟುಂಬದಿಂದ ಬಂದ ಅವರು ಕುಷ್ಟರೋಗಿಗಳ ಸೇವೆಗಾಗಿ ಆನಂದವನ ಎಂಬ ಸೇವಾಕೇಂದ್ರ ತೆರೆದು ಅವರು ಉದ್ಧಾರಕ್ಕೆ ಕಂಕಣ ಕಟ್ಟಿನಿಂತವರು. ದೀನರು. ದಲಿತರು, ರೋಗಗ್ರಸ್ತರ ಒಂದು ಆಶಾಕಿರಣವಾಗಿ ಅವರು ಆತ್ಮಗೌರವ ಮತ್ತು ಘನತೆಯಿಂದ ಬಾಳುವಂತಾಗಬೇಕೆಂಬ ಆಶಯವಿಟ್ಟುಕೊಂಡು ಅದಕ್ಕಾಗಿ ಜೀವಮಾನವಿಡೀ ದುಡಿಯುತ್ತಿದ್ದಾರೆ. ಇದಲ್ಲದೆ ಜನಪರ ಹೋರಾಟದಲ್ಲೂ ಸಕ್ರಿಯವಾಗಿ ಪಾಲ್ಗೊಂಡು ವಿಶ್ವದ ಗಮನ ಸೆಳೆದಿದ್ದಾರೆ. ನರ್ಮದಾ ಬಚಾವೋ ಆಂದೋಲನ, ಬಾರತ್ ಜೋಡೋ ಆಂದೋಲನ ಇವುಗಳಲ್ಲಿ ಅವರು ಅಚಲವಾಗಿ ನಿಂತು ಹೋರಾಡಿದರು. ಪದ್ಮವಿಭೂಷಣ ಪ್ರಶಸ್ತಿ , ರಾಮನ್ ಮ್ಯಾಗ್ಸೇಸೆ ಪ್ರಶಸ್ತಿ, ರೈಟ್ ಲೈವ್ಲಿಹುಡ್ ಪ್ರಶಸ್ತಿ, ಗಾಂಧಿ ಶಾಂತಿ ಪ್ರಶಸ್ತಿ,ಅಂಬೇಡ್ಕರ್ ಅಂತಾರಾಷ್ಟ್ರೀಯ ಪ್ರಶಸ್ತಿ ಮತ್ತು ವಿಶ್ವಸಂಸ್ಥೆಯ ಪ್ರಶಸ್ತಿಗಳು ಅವರನ್ನು ಅರಸಿ ಬಂದಿವೆ. ಕರ್ನಾಟಕ ಸರ್ಕಾರ ನೀಡುವ ಬಸವ ಪ್ರಶಸ್ತಿಯೂ ಇದೀಗ ಅವರದಾಗಿದೆ. ಅವರ ಮಾನವ ಸಂವೇದನೆ ಎಷ್ಟು ಗಾಢವಾದ್ದು ಎಂಬುದಕ್ಕೆ ಇದರಲ್ಲಿ ಸೇರಿರುವ ಏಸುಕ್ರಿಸ್ತನನ್ನು ಕುರಿತ ಕವನವೇ ಅತ್ಯುತ್ತಮ ಉದಾಹರಣೆ.

**

ಕರುಣಗಾಥೆ

ಕ್ರಿಶ್ಚಿಯಾನಿಟಿಯ
ವಿರುದ್ಧ
ಸೆಟೆದು ನಿಂತಿದೆ
ಚರ್ಚಿಯಾನಿಟಿ!
ಈ ಕದನದಲ್ಲಿ ನನ್ನ ಹೋರಾಟ
ಕ್ರಿಶ್ಚಿಯಾನಿಟಿಯ ಪರ.
ಕಾರಣ
ಹೀಗೆಯೇ
ಈ ಬದಿಯಿಂದಲೇ ಸಮಾಜಸೇವಕರು
ಕೈಕೈಗಳನು ಜೋಡಿಸುತ
ಯೇಸುವಿನ ಕೋಟೆಯನು ಗೆದ್ದು
ಗಗನ ಚುಂಬಿ ಚರ್ಚ್‌ನ
ಉತ್ತುಂಗ ಶಿಖರವನು
ಏರುವುದ ಕಂಡಿರುವೆ ನಾನು.
ಚರ್ಚ್ ಒಳಗಿಂದ
ಘನ ಗಂಭೀರ ಘಂಟಾನಾದ
ಹೊರಹೊಮ್ಮುತಿದೆ!
ಅದರ ಆರ್ಗನ್ ಸಂಗೀತದ
ಪ್ರಚಂಡಸ್ವರ
ಸೆಳೆಯುತಿದೆ ಮನವ.
ನಾನಾದರೋ ಧರ್ಮಪಥಕ್ಕೆ
ಸಮನಾಗಿ ಸಾಗುವೀ ಕಾಲುದಾರಿಯಲಿ
ತಲೆಯನು ತಗ್ಗಿಸಿ ಬಿನ್ನನೆ ಮೊಗದಲಿ
ಯೇಸು ಸಾಗಿ ಹೋಗುವುದ ಕಂಡಿರುವೆ.
ಸಾಗುತಿರಲಿಂತು ಕ್ರಿಸ್ತ

ಇರಲಿಲ್ಲ ಈ ಬಾರಿ ಸಿಲುಬೆ
ಅವನ ಹೆಗಲ ಮೇಲೆ
ನೇಗಿಲಿನ ಹೊರೆಯನ್ನು ಹೊತ್ತು ಸಾಗುತಿದ್ದನವನು
ಆದರೆ
ಹಣೆಯ ಮೇಲಿನ ಆ ಬೆವರ ಹನಿ
ಜಗದ ಭಾರವ ಹೊತ್ತ
ಆಯಾಸಗೊಂಡ ಆ ಮುಖ ಮಾತ್ರ
ಹಾಗೇ ಇತ್ತು.
ಒಮ್ಮೆಲೇ ನಾನು
ಧೂಳು ತುಂಬಿದ ಧರ್ಮಮಾರ್ಗದಿಂದತ್ತ ಸರಿದು
ನೇಗಿಲು ಹೊತ್ತ ಕ್ರಿಸ್ತನ
ಹೆಜ್ಜೆಗುರುತ ಹಿಡಿದು ಮುಂದೆ ನಡೆದೆ
ನನಗಿಂತ ಮೊದಲೆ
ಭಾರವನು ಹೊತ್ತು ದಾರಿಯನು ಸವೆದ
ಆ ದಾರಿದೀಪಕ
ಈಗಲೂ ಸಾಗುತ್ತಿದ್ದಾನೆ.
ಇದೇ ಕಾಲುದಾರಿಯ ದಿಬ್ಬವನು ಅಗೆದು
ಬದಿಯ ಧರ್ಮಮಾರ್ಗವನು
ಗಟ್ಟಿಗೊಳಿಸುತಿರುವ
ಅವಿಶ್ರಾಂತ ಕೂಲಿಕಾರರ ಕಪ್ಪು
ಬೆನ್ನುಗಳ ಮೇಲೆ ಬೆವರ ಹನಿಗಳ
ಅಡ್ಡ ಉದ್ದರೇಖೆಗಳ
ಆರ್ದ್ರಶಿಲುಬೆಯಲಿ
ಸಮಷ್ಟಿ ಕ್ರಿಸ್ತನ ಕಂಡೆ ನಾನು.
ಕಪ್ಪುನೆಲದ ಮುಳ್ಳು ನಕ್ಷತ್ರಗಳ ಮೇಲೆ
ಸಂತಸದ ಭಾವದಲಿ ದೇಹಚೆಲ್ಲಿ

ದ್ರಾಕ್ಷಿ ಬಳ್ಳಿಯ ಸಿಹಿಗೊಂಚಲಲಿ
ತೂಗುತಿರುವ ರಕ್ತ ಸಿಕ್ತಮಯ
ಕ್ರಿಸ್ತದೇಹದ ವರದ ಹಸ್ತವನು ಕಂಡೆ ನಾನು.
ಭೀಕರ ರೋಗ ಪೀಡಿತರ
ಗಾಯಗೊಂಡವರ
ಕಂಗಳಲಿ ತುಂಬಿಕೊಳುವ ಮುನ್ನ
ಅವರ ಹಣೆಯಲ್ಲಿ
ಅಂಕಿತ ಗೊಂಡ
ಇಪ್ಪತ್ತು ಶತಮಾನಗಳ ಹಿಂದಿನ
ನಿನ್ನ ಚುಂಬನವ
ಮತ್ತೆ ನಿನ್ನಮೃತ ಸ್ಪರ್ಶದಿಂದ
ಪೂರ್ಣತೆ ಪಡೆದ
ದೇಹಗಳ ಕಂಡೆ ನಾನು
ನನ್ನ ಪಾಲಿಗದು ಅನ್ಯವಲ್ಲವದು
ಜೀವಂತ ದೇಹಗಳ
ಮೈಕೆಲ್ ಏಂಜಿಲೋ ತಾನೆ
ಕಣ್ಣೆದುರು ನಿಂತಂಥ ಚಿತ್ರ!

* * *

ಕಾರ್ಲ್ ಮಾರ್ಕ್ಸ್ (1818-1883)

20ನೇ ಶತಮಾನವನ್ನು ತನ್ನ ವಿನೂತನ ಚಿಂತನೆ ಹಾಗೂ ಸಿದ್ಧಾಂತದಿಂದ ಅಗಾಧವಾಗಿ ಪ್ರಭಾವಿತಗೊಳಿಸಿದ ಖ್ಯಾತ ಜರ್ಮನ್ ತತ್ವಜ್ಞಾನಿ ಮತ್ತು ಸಮಾಜ ವಿಜ್ಞಾನಿ ಕಾರ್ಲ್‌ಮಾರ್ಕ್ಸ್ ಕವಿತೆಯೊಂದನ್ನು, ಅದೂ ತನ್ನ 18ನೇ ವಯಸ್ಸಿನಲ್ಲಿ ಬರೆದಿದ್ದನೆಂಬುದು ಅತ್ಯಂತ ಕುತೂಹಲದ ಹಾಗೂ ವಿಸ್ಮಯದ ಸಂಗತಿ. ಇತಿಹಾಸದಲ್ಲಿ ಅತ್ಯಂತ ಶಕ್ತಿಶಾಲಿ ಸಮೂಹಿಕ ಚಳುವಳಿ ಎನಿಸಿದ ಪ್ರಜಾಪ್ರಭುತ್ವವಾದಿಸಮಾಜವಾದಿ ಹಾಗೂ ಕ್ರಾಂತಿಕಾರಿ ಸಾಮ್ಯವಾದಿ ಸಂಘಟನೆಗಳನ್ನು ಹುಟ್ಟುಹಾಕಿದ ವ್ಯಕ್ತಿ.

ಮಾರ್ಕ್ಸ್ ಜರ್ಮನಿಯ ಪ್ರಷ್ಯದಲ್ಲಿ ಹುಟ್ಟಿದನು. 1836 ರಲ್ಲಿ ಬರ್ಲಿನ್ ವಿಶ್ವವಿದ್ಯಾನಿಲಯ ಸೇರಿ 1841 ರ ವರೆಗೂ ಅಭ್ಯಾಸಮಾಡಿ ಅದೇ ವರ್ಷ ತತ್ತ್ವಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿ ಪಡೆದು ಅನೇಕ ವರ್ಷಗಳ ಕಾಲ ಪತ್ರಕರ್ತನಾಗಿ ಕೆಲಸ ಮಾಡಿ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದ. 1843 ರಲ್ಲಿ ಮದುವೆಯಾಗಿ ಹಂಡತಿಯೊಂದಿಗೆ ಪ್ಯಾರಿಸ್‌ಗೆ ತೆರಳಿದ. ಅಲ್ಲಿ ಅವರಿಗೆ ಏಂಗೆಲ್ಸ್ ಭೇಟಿಯಾಯಿತು. ಮುಂದೆ ಏಂಗೆಲ್ಸ್ ಮಾರ್ಕ್‌ನ ಜೀವನದ ಗೆಳೆಯನೆನಿಸಿಕೊಂಡ. ಅವನ ಬದುಕಿನ ಮಹತ್ವದ ಸಂಗತಿಗಳಲ್ಲೆಲ್ಲ ಜೊತೆಯಾಗುಳಿದ. 1848 ರಲ್ಲಿ ಪ್ರಷ್ಯನ್ ಕ್ರಾಂತಿಯ ಸೋಲಿನ ನಂತರ, ಮಾರ್ಕ್ಸ್ ಲಂಡನ್‌ಗೆ ತೆರಳಿ ಅಲ್ಲಿಯೇ ಇದ್ದುಬಿಟ್ಟ. ದುಡಿಯುವ ಮಂದಿಯ ಬದುಕನ್ನು ಹಸನುಗಳಿಸುವ ಉದ್ದೇಶದಿಂದ ಮಾರ್ಕ್ಸ್ ೧೮೬೪ ರಲ್ಲಿಅಂತರಾಷ್ಟ್ರೀಯ ಕಾರ್ಮಿಕ ಸಂಘಸ್ಥಾಪಿಸಿದ.

ಮಾರ್ಕ್ಸ್‌ನ ಪ್ರಮುಖ ಬರಹಗಳು:

ಮ್ಯಾನಿಪೆಸ್ಟೋ ಆಫ್ ದಿ ಕಮ್ಯುನಿಸ್ಟ ಪಾರ್ಟಿ (ಏಂಗೆಲ್ಸ್ ಜೊತೆಗೆ) ಆಳುವ ಮಧ್ಯಮ ವರ್ಗವನ್ನು ದುಡಿಮೆಗಾರರು ಕಿತ್ತೊಗೆಯುತ್ತಾರೆಂದು ಇದರಲ್ಲಿ ಮಾರ್ಕ್ಸ್ ಭವಿಷ್ಯ ನುಡಿದಿದ್ದಾನೆ. ದಾಸ್ ಕ್ಯಾಪಿಟಲ್ ಅವನ ಅತ್ಯಂತ ಪ್ರಮುಖ ಕೃತಿ. ಇದರ ಮೊದಲ ಸಂಪುಟ 1867 ರಲ್ಲಿ ಪ್ರಕಟವಾಯಿತು. ಎರಡು ಮತ್ತು

ಮೂರನೆಯ ಸಂಪುಟಗಳನ್ನು ಏಂಗೆಲ್ಸ್ ಸಂಪಾದಿಸಿ, ಮಾರ್ಕ್ಸ್‌ನ ಮರಣಾನಂತರ ಪ್ರಕಟಿಸಿದ. ವರ್ಗರಹಿತ ಸಮಾಜದ ಕನಸು ಕಂಡು, ಇಡೀ ಚರಿತ್ರೆಯನ್ನು ಆಳುವ ಮತ್ತು ದುಡಿಯುವ ವರ್ಗದ ನಡುವಿನ ಹೋರಾಟ ಎಂದು ಅರ್ಥೈಸಿದ ಮಹಾಪುರುಷ ಮಾರ್ಕ್ಸ್.

ನಮ್ಮ ಬದುಕು

ಬೇಡ ನನಗಾ ತಳಮಳವಿಲ್ಲದ ಬದುಕು
ನನ್ನ ಪ್ರಕ್ಷುಬ್ಧ ಜೀವಕ್ಕಂತು ಬೇಡವೆ ಬೇಡ !
ಎತ್ತರದ ಉದಾತ್ತ ಗುರಿ ಸಾಧನೆಗೆ
ನನ್ನ ಬದುಕೆಲ್ಲ ಹೋರಾಟಮಯವಾಗಲಿ
ಓ ಕಲೆಯೆ ! ಮನುಕುಲವು ಹಂಬಲಿಸುವ
ನಿನ್ನತುಲ ಭಂಡಾರಗಳ ನನಗಾಗಿ ತೆರೆದಿಡು
ನನ್ನೆಲ್ಲ ಬುದ್ಧಿ ವಿವೇಕಗಳಿಂದ
ಜಗವೆಲ್ಲವನು ಅಪ್ಪುವೆನು ನಾನು
ಕಷ್ಟ ಹಾದಿಯ ಹಿಡಿದು ದೂರ ದೂರಕೆ ಸಾಗುವಾ
ಗೊತ್ತು ಗುರಿಗಳೊಂದಿಲ್ಲದ
ದಾರಿತೋರುವ ಗುರುವಿರದ
ಜಡ ಜೀವನವು ಬೇಡ ನಮಗೆ.
ನೋವು ದುಃಖಗಳ ನಿರ್ವೀರ್ಯ ಬದುಕು
ನಮಗೆ ಬೇಡ !
ನೈಜ ಮನುಜರ ಹಾಗೆ
ಆಶೆ ಆಕಾಂಕ್ಷೆಗಳ, ಕೋಪ ತಾಪಗಳ
ಪ್ರೀತಿ ಹೆಮ್ಮೆಗಳ ಉಸಿರಾಡೋಣ.

(ಕಾರ್ಲ್‌ಮಾರ್ಕ್ಸ್ ತನ್ನ ಹದಿನೆಂಟರ ಹರಯದಲ್ಲಿ ರಚಿಸಿದ ಕವಿತೆ)

ಇದೇ ಲೇಖಕರ ಇತರ ಕೃತಿಗಳು

ಚಿನ್ನದ ಕಳಶ (ಚೀನಾದ ಜನಪದ ಕಥೆಗಳು)	-	1979
ಮಾಸ್ತಿ -(ಸಾಹಿತ್ಯ ಅಕಾಡೆಮಿ ಪ್ರಕಟಣೆ)	-	1994
(ಮೂರನೇ ಮುದ್ರಣ)	-	2004
ಬರ್ಟೋಲ್ಟ್ ಬ್ರೆಕ್ಟ್ - (ಕ್ರೈಸ್ಟ್ ಕಾಲೇಜ್ ಪ್ರಕಟಣೆ)	-	1997
ರುದ್ರ ಭಟ್ಟ (ಜಗನ್ನಾಥ ವಿಜಯ ಸಂಗ್ರಹ) (ಸಾಹಿತ್ಯ ಅಕಾಡೆಮಿ ಪ್ರಕಟಣೆ)	-	1998
ಆಹ್ಲಾದ (ವಿಮರ್ಶಾತ್ಮಕ ಲೇಖನಗಳ ಸಂಕಲನ) (ಇಳಾ ಪ್ರಕಾಶನ)	-	2001
ಕನ್ನಡ ವಕ್ರೋಕ್ತಿ ಜೀವಿತ	-	2004

'ಚಿನ್ನದ ಕಳಶ ಕುರಿತು'

ಶ್ರೀ ಲಕ್ಷ್ಮೀನಾರಾಯಣ ಅವರ ಅನುವಾದ ತುಂಬ ಸರಳವಾಗಿದ್ದು ಭಾಷೆ ಹೂವೆತ್ತಿದಷ್ಟು ಹಗುರವಾಗಿದೆ.

ಮಕ್ಕಳ ಮನಸ್ಸನ್ನು ಸೆರೆಹಿಡಿಯಬಲ್ಲ ಸಮುದ್ರ, ಬೆಟ್ಟ, ದೈತ್ಯ ಪ್ರಾಣಿಗಳು ಕಾಡಿನ ವಿಚಿತ್ರ ಪ್ರಾಣಿವರ್ಗ, ಮಾಯಾಲೋಕದ ವ್ಯಕ್ತಿಗಳು, ಕತೆಯ ಸಜೀವ ಪಾತ್ರವರ್ಗಗಳಾಗಿ ನಿಂತು ಚಮತ್ಕಾರಿಕವಾಗಿ ಎಳೆಯರನ್ನು ಆಕರ್ಷಿಸಿಬಿಡುತ್ತವೆ. ಇಂಥದೊಂದು ಬೆರಗಿನ ಲೋಕಕ್ಕೆ ಕನ್ನಡದ ಎಳೆಯರನ್ನು ಕೊಂಡೊಯ್ಯುವ ಕಾರ್ಯದಲ್ಲಿ ಗೆಳೆಯ ಲಕ್ಷ್ಮೀನಾರಾಯಣ್ ಸಫಲರಾಗಿದ್ದಾರೆ.

-ಪ್ರೊ. ಅ. ರಾ. ಮಿತ್ರ (ಮುನ್ನುಡಿಯಿಂದ)

'ಮಾಸ್ತಿ' ಕುರಿತ ಅಭಿಪ್ರಾಯಗಳು

ಮಾಸ್ತಿಯವರು ನನಗೆ ತುಂಬ ಪ್ರಿಯರಾದ ಲೇಖಕರು. ಅವರ ಸಾಹಿತ್ಯದ ಹರವು ಬಹಳ ದೊಡ್ಡದು. ಅದನ್ನು ಇಲ್ಲಿನ ೯೮ ಪುಟಗಳಲ್ಲಿ ಸೊಗಸಾಗಿ ಪರಿಚಯಿಸಿದ್ದೀರಿ. ಸರಳತೆಯಲ್ಲಿ ಏನೆಲ್ಲವನ್ನೂ ಸೃಷ್ಟಿಸಬಹುದೆಂಬುದಕ್ಕೆ ಮಾಸ್ತಿಯವರೇ ಸಾಕ್ಷಿ. ಅವರ ಬದುಕಿನ ಕೊನೆಗೆ ನಮ್ಮ ಜನರು ಸಾಕಷ್ಟು ತೊಂದರೆ

ಕೊಟ್ಟರು. ಈ ಪುಸ್ತಕ ಬರೆದು ನೀವು ಕನ್ನಡ ಜನರಿಗೆ ಉಪಕಾರ ಮಾಡಿದ್ದೀರಿ. ಸಮರ್ಥ ಪರಿಚಯಕ್ಕಾಗಿ ನಿಮಗೆ ಅಭಿನಂದನೆಗಳು

ಹಾ. ಮಾ. ನಾಯಕ
13-12-95

This is a delightful presentation of one of the most vibrant writers in the galaxy of the great, the late Masthi. Reading masthi is one thing and to be initiated in to his philosophy, his urges and the goals is quite another. In the able hands of the author, all these aspects have been dealt with admirably so as to endear Masti to readers hearts........... Almost the whole gamut of Masti's works has come under the cirtical scrurtiny of the author.

C.M.R
The Hindu
3-2-1998

ನಿಮ್ಮ ಮಾಸ್ತಿ ಓದಿದೆ. It is fine. No, It is Fantastic .... It is a matured writing.

ನೊಸಂತಿ
4-2-95

'ಆಹ್ಲಾದ' ಕುರಿತು

ಯಾವುದೇ ಕೃತಿಯ ಲೋಪದೋಷಗಳನ್ನು ಎತ್ತಿ ತೋರಿಸುವುದನ್ನು ಮುಖ್ಯ ಮಾಡಿಕೊಳ್ಳದೆ, ಅದರ ಇತ್ಯಾತ್ಮಕ ಅಂಶಗಳನ್ನು ಎತ್ತಿ ಹಿಡಿಯುವುದರ ಮೂಲಕ ಲೇಖಕರು, ಕೃತಿಗಳ ಬಗೆಗೆ ಪ್ರೀತಿ ಮತ್ತು ಗೌರವ ಮೂಡಿಸುವ ವಾತಾವರಣವನ್ನು ಸೃಷ್ಟಿಮಾಡಿರುವುದು ಎಲ್ಲ ಬರಹಗಳ ಆರೋಗ್ಯಕಾರಿ ಲಕ್ಷಣವಾಗಿದೆ. ಯಾವುದೇ ವಿಮರ್ಶನ ನಿಲುವುಗಳನ್ನು ತಾಳುವಾಗ ಯಾವುದೇ

ಪಂಥದ ವಿಮರ್ಶನ ಧೋರಣೆಗಳಿಗೆ ಜೋತು ಬೀಳದೆ, ಓದುಗರನ್ನು ದಿಕ್ಕು ತಪ್ಪಿಸದೆ ಸಹೃದಯ ಓದುಗರಿಗೆ ಬೇಕಾದುದನ್ನು ಉಣಬಡಿಸುವ ರೀತಿಯಲ್ಲಿ ಎಲ್ಲ ಬರಹಗಳ ವಿನ್ಯಾಸ ರೂಪುಗೊಂಡಿದೆ.

ಡಾ. ಜಿ. ಆರ್. ತಿಪ್ಪೇಸ್ವಾಮಿ
ಕನ್ನಡ ಪ್ರಭ
22-7-2001

ಲಕ್ಷ್ಮೀನಾರಾಯಣ ಅವರು ಪ್ರತಿಯೊಂದು ಕೃತಿಯನ್ನು ಚರ್ಚಿಸುವಾಗ, ಮೊದಲಿಗೆ ಆ ಕೃತಿಯ ವಿಶಿಷ್ಟ ಅಂಶಗಳ ಬಗ್ಗೆ ತಮ್ಮ ವಿಚಾರಗಳನ್ನು ಮಂಡಿಸಿ ನಂತರ ತಮ್ಮ ಈ ವಿಚಾರಗಳ ಸಮರ್ಥನೆಗೆ ಹಲವಾರು ನಿದರ್ಶನಗಳನ್ನು ಕೊಟ್ಟು ಅವುಗಳ ಬಗ್ಗೆ ವಿವರಾದ ವ್ಯಾಖ್ಯಾನಗಳನ್ನು ನೀಡಿರುತ್ತಾರೆ.

ಗಿರೀಶ ವಿ. ವಾಘ್,
ಕನ್ನಡ ಪ್ರಭ
27-10-2002

'ಆಹ್ಲಾದ' ಶೀರ್ಷಿಕೆ ಸೂಚಿಸುವಂತೆ ಲಕ್ಷ್ಮೀನಾರಾಯಣ ಅವರು ಸಹೃದಯರಾಗಿ ಕೃತಿಗಳ ರಸ, ಸಾರಗಳನ್ನು ಸಂಗ್ರಹಿಸಿ, ಓದುಗರಿಗೆ ತನ್ನ ಆನಂದವನ್ನು ಹಂಚುತ್ತಾರೆ. ಜತೆಗೆಯೆ ಮೌಲ್ಯಮಾಪನ ಮಾಡುತ್ತ ಸರಿ ತಪ್ಪುಗಳನ್ನು ಕೂಡ ಗುರುತಿಸುತ್ತಾರೆ......... ಇಂಥ ಅರಿವನ್ನು ಹೆಚ್ಚಿಸುವ ಪ್ರಬಂಧಗಳು ಈ ಸಂಕಲನದಲ್ಲಿ ಸೇರಿರುವುದರಿಂದ ಇದು ಕನ್ನಡ ವಿಮರ್ಶನ ಸಾಹಿತ್ಯಕ್ಕೆ ಉತ್ತಮ ಕೊಡುಗೆಯಾಗಿದೆ.

ತರಂಗ 22-8-2002

'ಕನ್ನಡ ವಕ್ರೋಕ್ತಿ ಜೀವಿತ' ಕುರಿತು

"ಇಂಥ ಮೌಲಿಕವಾದ ಕೃತಿಯನ್ನು ಮೊಟ್ಟಮೊದಲ ಬಾರಿಗೆ ತಕ್ಕ ಶ್ರದ್ಧೆ, ಶ್ರಮ ಹಾಗೂ ಅಧ್ಯಯನಗಳಿಂದ ಕನ್ನಡಕ್ಕೆ ತಂದ ಶ್ರೀ ಆರ್ ಲಕ್ಷ್ಮೀನಾರಾಯಣ ಅವರು ಈ ಕ್ಷೇತ್ರದಲ್ಲಿ ಈಗಾಗಲೇ ಕೆಲಸಮಾಡಿ ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿರುವ, ದಿವಂಗತ ಡಾ.ಕೆ. ಕೃಷ್ಣಮೂರ್ತಿಯವರ ಪರಂಪರೆಯನ್ನು

ಸಮರ್ಥವಾಗಿ ಮುಂದುವರಿಸಿರುವುದರ ಜತೆಗೆ ಕನ್ನಡದ ಕಾವ್ಯಚಿಂತನೆಗೆ ಅತ್ಯಗತ್ಯವಾದ ಆಕರ ಗ್ರಂಥವೊಂದನ್ನು ಒದಗಿಸಿದ್ದಾರೆ. ಶ್ರೀ ಆರ್. ಲಕ್ಷ್ಮೀನಾರಾಯಣ ಅವರ ಈ ವಿದ್ವತ್ ಸಾಹಸ ಅತ್ಯಂತ ಅಭಿನಂದನಾರ್ಹವಾದದ್ದು"

ಡಾ. ಜಿ. ಎಸ್. ಶಿವರುದ್ರಪ್ಪ
(ಬೆನ್ನುಡಿಯಿಂದ)

"ಕನ್ನಡಕ್ಕೆ ಬಂದ ಅಪರೂಪದ ಪುಸ್ತಕ"

ಇಲ್ಲಿಯ ತನಕ ಇದು ಕನ್ನಡಕ್ಕೆ ಅನುವಾದವಾಗಿರಲಿಲ್ಲ. ಆರ್. ಲಕ್ಷ್ಮೀನಾರಾಯಣ ಅವರು ಶ್ರಮ ಸಾಧ್ಯವಾದ ಈ ಕೆಲಸವನ್ನು ಶ್ರದ್ಧೆಯಿಂದಲೂ ಪರಿಣತಿಯಿಂದಲೂ ಪೂರೈಸಿ ಕನ್ನಡ ವಿದ್ಯಾರ್ಥಿಗಳಿಗೂ ವಿದ್ವಾಂಸರಿಗೂ ಉಪಕಾರವನ್ನು ಮಾಡಿದ್ದಾರೆ.

-ಪ್ರೊ. ಜಿ. ವೆಂಕಟಸುಬ್ಬಯ್ಯ
(ಪ್ರಜಾವಾಣಿ ವಿಮರ್ಶೆ-ನವೆಂಬರ್ - 2004

ಸದ್ಯಕ್ಕೆ ತುಂಬ ಅಗತ್ಯವೆನಿಸಿದ ಕುಂತಕನ ವಿಚಾರಗಳನ್ನು ಯಥಾವತ್ತಾಗಿ ಕನ್ನಡಕ್ಕೆ ತಂದ ಲಕ್ಷ್ಮೀನಾರಾಯಣ ಅವರು ಸರ್ವಥಾ ಅಭಿನಂದನೀಯರು.

ಡಾ. ಶ್ರೀರಾಮಭಟ್ಟ
(ಕನ್ನಡ ಪ್ರಭ, ಡಿಸೆಂಬರ್, 2004)

This First time translation , in a way completes the onerous work of translation of all important Sanskrit classics on poetics in Kannada, Started and so ably expressed by K.Krishana Murthy

The Hindu

ಸಂಸ್ಕೃತದ ಪ್ರಮುಖ ಆಲಂಕಾರಿಕರಲ್ಲಿ ಒಬ್ಬನಾದ ಕುಂತಕನ ಪ್ರಸಿದ್ಧ 'ವಕ್ರೋಕ್ತಿ ಜೀವಿತ'ವನ್ನು ಕನ್ನಡಕ್ಕೆ ತಂದು ಕಾವ್ಯಮಿಮಾಂಸೆಯ ವಿಸ್ತೃತ ಚರ್ಚೆಗೆ ಅನುವುಮಾಡಿಕೊಡುವ ಮೌಲಿಕ ಆಕರ ಗ್ರಂಥವಾಗಿ ಈ ಕೃತಿ ವಿಶಿಷ್ಟಸ್ಥಾನ

ಪಡೆದಿದೆ. ಶುಷ್ಕ ಪಾಂಡಿತ್ಯ ಪ್ರದರ್ಶನದ ಎಲ್ಲಾ ಸವಾಲುಗಳನ್ನು ಸಮರ್ಥವಾಗಿ ಎದುರಿಸಿದ ಸಾರ್ಥಕ ಅನುವಾದ ಇದಾಗಿದೆ. ಅಪಾರ ಶ್ರಮ, ಪಾಂಡಿತ್ಯ, ವಿಮರ್ಶಾ ಜ್ಞಾನ ಈ ಅನುವಾದದ ಹಿಂದಿದೆ. ಪದಶಃ ಅನುವಾದವಾಗದೆ ಟಿಪ್ಪಣಿ, ವ್ಯಾಖ್ಯಾನ ಸಹಿತ ಲಕ್ಷ್ಯ ಪದ್ಯಗಳ ಕನ್ನಡಾನುವಾದವೂ ಸೇರಿರುವ ಈ ಕೃತಿ ಅತ್ಯಂತ ವೈಶಿಷ್ಟ್ಯಪೂರ್ಣ ಅನುವಾದವಾಗಿದ್ದು, ನಿಜಕ್ಕೂ ಒಂದು ಸ್ತುತ್ಯರ್ಹ ಪ್ರಯತ್ನವಾಗಿದೆ. ಮೂಲ ಗ್ರಂಥವನ್ನು ಅರ್ಥೈಸಿಕೊಳ್ಳಲು ಅನುವಾದಕರು ಈ ಕೃತಿಯ ಹಿಂದಿ/ಇಂಗ್ಲೀಷ್ ಅನುವಾದಗಳನ್ನೂ ಗಂಭೀರವಾಗಿ ಅಭ್ಯಸಿಸಿ, ತಮ್ಮ ಅನುವಾದದ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ.

ಕಾವ್ಯಾಸಕ್ತರೆಲ್ಲರಿಗೂ ಉಪಯುಕ್ತವಾಗುವ ಒಂದು ಮಹತ್ವಪೂರ್ಣ ಅನುವಾದ ಇದು ಹಾಗೂ ಕನ್ನಡದ ಸಂದರ್ಭದಲ್ಲಿ ಇದ್ದ ಕೊರತೆಯೊಂದನ್ನು ಸಮರ್ಥವಾಗಿ ಪರಿಹರಿಸಿದೆ ಎಂದರೆ ಅತಿಶಯೋಕ್ತಿಯೇನೂ ಅಲ್ಲ!

- ಡಾ. ಲಕ್ಷ್ಮೀನಾರಾಯಣ ಭಟ್. ಪಿ.,
ಮಂಗಳೂರು

ಭಾರತೀಯ ಕಾವ್ಯಮಿಮಾಂಸೆಯ ಇತಿಹಾಸದಲ್ಲಿ ಕುಂತಕನಿಗೆ ವಿಶೇಷ ಸ್ಥಾನವಿದೆ. ಸಮರ್ಪಕವಾದ ಕಾವ್ಯಸೂತ್ರವನ್ನು ಕಟ್ಟಿಕೊಟ್ಟ ಮೊದಲ ಲಾಕ್ಷಣಿಕ ಗ್ರಂಥ ಎಂಬ ಕೀರ್ತಿಗೆ ಪಾತ್ರವಾದ ಕುಂತಕನ ವಕ್ರೋಕ್ತಿ ಜೀವಿತದ ಕನ್ನಡ ಅನುವಾದ ಪ್ರಸ್ತುತ ಕೃತಿ. ಶಾಸ್ತ್ರಗ್ರಂಥವನ್ನು ಅನುವಾದಿಸುವಾಗ ಭಾಷಾ ಪರಿಜ್ಞಾನವೊಂದೇ ಸಾಲದು ಪ್ರಗಾಢ ಪಾಂಡಿತ್ಯ, ಆಳವಾದ ಕಾವ್ಯಾಭ್ಯಾಸ, ಸೃಜನಶೀಲ ಪ್ರತಿಭೆ ಮತ್ತು ಕಠಿಣ ಪರಿಶ್ರಮಗಳೆಲ್ಲವೂ ಅತ್ಯಗತ್ಯ. ಅದು ಪ್ರಸ್ತುತ ಅನುವಾದದಲ್ಲಿ ನಿಚ್ಚಳವಾಗಿ ಪ್ರತಿಬಿಂಬಿಸಿದೆ. ಶಾಸ್ತ್ರ ಗ್ರಂಥಗಳ ಬಗ್ಗೆ ಒಂದು ರೀತಿಯ ಅವಜ್ಞೆ ಕಂಡು ಬರುತ್ತಿರುವ ಸಮಕಾಲೀನ ಸಂದರ್ಭದಲ್ಲಿ ವಕ್ರೋಕ್ತಿ ಜೀವಿತವನ್ನು ಕನ್ನಡಕ್ಕೆ ತಂದಿರುವುದು ಅನುವಾದಕರ ಸಾಹಸವೇ ಸರಿ. ಇದೊಂದು ಯಶಸ್ವೀ ಸಾಹಸ. ಕನ್ನಡದ ಕಾವ್ಯ ಚಿಂತನೆಗೆ ಒಂದು ಉತ್ತಮ ಆಕರ ಗ್ರಂಥವನ್ನು ಒದಗಿಸಿಕೊಟ್ಟ ಅನುವಾದಕರ ಪ್ರಯತ್ನ ಅಭಿನಂದನೀಯ.

- ಡಾ. ಕೆ.ಆರ್. ಸಂಧ್ಯಾರೆಡ್ಡಿ
ಬೆಂಗಳೂರು

ಒಪ್ಪೋಲೆ

ಪುಟ	ಸಾಲು	ತಪ್ಪು	ಒಪ್ಪು
1.	4	ಉಳಿದಿದೆ	ಉಳಿದಿವೆ
1.	6	ಕೂಡಿಸಿಟ್ಟಹೆನು	ಕೂಡಿಸಿಟ್ಟಿಹೆನು
11.	18	ಇತಹಾಸ	ಇತಿಹಾಸ
13.	8	ಅಂಗಗಳದಲ್ಲಿ	ಅಂಗಳದಲ್ಲಿ
13.	19	ಬಟ್ಟಿಟ್ಟುಕೊಳ್ಳಲೆ	ಬಚ್ಚಿಟ್ಟುಕೊಳ್ಳಲೆ
17.	3	ಬರೆದಿದ್ದೆ	ಬರೆದಿದ್ದ
23.	24	ಬದಿಹನೆಂದೆ	ಬಂದಿಹನೆಂದೆ
50.	11	ದಷ್ಟಪುಟ್ಟವಾಗಿ	ದಷ್ಟಪುಷ್ಟವಾಗಿ
54.	1	ಗೀರಿ	ಗಿರಿ
59.	17	ಬೆರೆತಿದ	ಬೆರೆತಿದೆ
61.	7	ಪಕ್ವವಾಗಿಸಿವೆ	ಪಕ್ವಾಗಿಸಿವೆ
67.	9	ಹಡಕುನೋಟ	ಹುಡುಕುನೋಟ
70.	2	ಅಜ್ಞೀಯ	ಆಜ್ಞೀಯ
70.	16	ಇಷ್ಟಪಡುತ್ತಿದ್ದ	ಇಷ್ಟಪಡುತ್ತಿದ್ದರು
72.	24	ಎಥದದು	ಎಂಥದದು
78.	2	ಲೇಕಖ	ಲೇಖಕ
78.	22	An	Ant
78.	25	resories (19622)	stories (1962)
80.	11	ನೆಂದೂ	ನೆಂದೊ
80.	13	ನಗೆಯುಯನು	ನಗೆಯನು
80.	23	ಪುಪ್ಪ	ಪುಷ್ಪ
82.	5	ಏರಜಡನೆಯ	ಎರಡನೆಯ
82.	20	ವಾಸ್ತವತೆಗೆ	ವಾಸ್ತವತೆ
82.	22	ಘಾಲಿಬ್	ಘಾಲಿಬ್
83.	4	ದರ್ಶಕವಿಡೀ	ದಶಕವಿಡೀ
85.	20	ನಿನಗೆನಿ	ನಿನಗೆ
91.	19	ಯಮನೆ	ಯಮುನೆ
95.	15	ಜನಗಳ	ಜಘನಗಳ
96.	3	ಕ್ಷೆತ್ರ.... ಕ್ಷೆತ್ರ	ಕ್ಷೇತ್ರ.... ಕ್ಷೇತ್ರ
107.	6	ಅವರು	ಅವರ
111.	6	ಸೌಮ್ಯವಾದಿ	ಸಾಮ್ಯವಾದಿ
112.	12	ಹಂಡತಿಯೊಂದಿಗೆ	ಹೆಂಡತಿಯೊಂದಿಗೆ



ಅನುರೂಪ

ಒರಿಯಾ, ಪಂಜಾಬಿ, ಹಿಂದಿ, ಉರ್ದು ಹಾಗೂ ಇಂಗ್ಲಿಷ್ ಭಾಷೆಗಳ ಪ್ರಸಿದ್ಧ ಕವಿಗಳ ಕವನಗಳ ಕನ್ನಡ ರೂಪಗಳು



ಪ್ರಾಚೀನ ಹಾಗೂ ಅರ್ವಾಚೀನ ಸಾಹಿತ್ಯವನ್ನು ಸಮದಂಡಿಯಾಗಿ ಅಧ್ಯಯನ ಮಾಡುತ್ತ, ಅಧ್ಯಾಪನದೊಂದಿಗೆ ಮೀಮಾಂಸೆ, ವಿಮರ್ಶೆ ಮತ್ತು ಅನುವಾದ ಕಾರ್ಯದಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಳ್ಳುತ್ತ ಬಂದಿರುವ ಡಾ. ಆರ್. ಲಕ್ಷ್ಮೀನಾರಾಯಣ ಅವರು, ಒರಿಯಾ, ಪಂಜಾಬಿ, ಹಿಂದಿ, ಉರ್ದು ಮತ್ತು ಇಂಗ್ಲಿಷ್ ಭಾಷೆಗಳ ಪ್ರಸಿದ್ಧ ಕವಿಗಳ ಕವನಗಳ ಕನ್ನಡ ರೂಪಗಳನ್ನು ಒಂದೆಡೆ ಒದಗಿಸುವ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ. ತಮ್ಮ ಭಾಷಿಕ ನೆಲೆಗಳಲ್ಲಿ ಸಮುದಾಯದ ಸಮಸ್ಯೆಗಳನ್ನು, ಸ್ಥಿತ್ಯಂತರಗಳನ್ನು ಇಲ್ಲಿಯ ಕವಿತೆಗಳು ಅಭಿವ್ಯಕ್ತಿಸುತ್ತಿವೆಯಾದರೂ ಜಗತ್ತಿಗೇ ಅನ್ವಯವಾಗುವಂತಿವೆ ಎಂದೆನಿಸುವುದರಲ್ಲಿಯೇ ಕವಿತೆಗಳ ಯಶಸ್ಸಿನ ರಹಸ್ಯ ಅಡಗಿದೆ. ನಿಸರ್ಗ ಮತ್ತು ಮನುಷ್ಯಸಂಬಂಧಗಳನ್ನು ಕುರಿತೇ ಸಂವಾದ ನಡೆಸ ಬಯಸುವ ಇವು ಅನುವಾದಿತ ಕವನಗಳೇ ಆಗಿದ್ದರೂ ಸಮಜೋಡಿಯಾಗಿ ಮೂಲವನ್ನು ಅನುಸರಿಸಿದ ರೂಪವಾಗಿವೆ. ಋತುಮಾನ, ಪರಿಸರನಾಶ, ನಾಗರಿಕತೆಯ ಪ್ರಭಾವ, ಪುರಾಣವನ್ನು ಸಮಕಾಲೀನಗೊಳಿಸುವ ಪ್ರಜ್ಞೆ - ಇತ್ಯಾದಿ ವಸ್ತುಗಳಿಂದಲೂ ಕಾವ್ಯದ ಸೃಜನ ನೆಲೆ ಯಾವುದೆಂಬುದನ್ನು ನಿರ್ಧರಿಸುವಂತಿವೆ. ಮಾನವೀಯ ನೆಲೆಯಲ್ಲಿ ಬದುಕನ್ನು ಕಂಡವರು, ಸೃಜನಾತ್ಮಕ ಬರಹಗಳಿಗೆ ನೂತನ ಆಯಾಮ ತಂದುಕೊಟ್ಟವರು, ತಮ್ಮ ಸಮುದಾಯ ಸಂಸ್ಕೃತಿಗಳಿಗೆ ವಿಶಿಷ್ಟ ಕೊಡುಗೆ ನೀಡಿದವರು ಇಲ್ಲಿಯ ಕವಿತೆಗಳ ಸೃಷ್ಟಿಗೆ ಕಾರಣರಾಗಿದ ... 'ಅನುರೂಪ'ದ ಮಹತ್ವವನ್ನು ಮತ್ತ ...

... ಮಿ

ಭಾವ...
ವಿಜಯನಗರ, ಬೆಂಗಳೂರು-560 040